ಸಂಪುಟ: 39 ಸಂಚಿಕೆ: 2 | ಏಪ್ರಿಲ್ 2026
ಬೆಲೆ: ರೂ. 7/-

# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ | SUCI(C)
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

ಒಳ ಪುಟಗಳಲ್ಲಿ ...........

ಇಂಡಿಯಾ AI ಇಂಪ್ಯಾಕ್ಟ್ ಸಮ್ಮಿಟ್ 2026---------- 3
'ಸ್ವಚ್ಛ ನಗರ'ದ ಅಡಿಯಲ್ಲಿ ಪ್ರಾಣಾಂತಿಕ 'ಜಲ'ಧಾರೆ! -4
ಎಪ್‌ಸ್ಟೀನ್ ಫೈಲ್ಸ್:------------------------5
ಚಿನ್ನದ ಬೆಲೆ ಏರುತ್ತಿರುವುದೇಕೆ?-------------------6
ಭಾರತೀಯ ರೈಲ್ವೆ: ಕಾರ್ಪೋರೇಟ್ ಲೂಟಿಯ ಬಲಿಪಶು! -7
ಜನರ ಒಕ್ಕೊರಲಿನ ಆಗ್ರಹ: 'ನಮ್ಮೂರ ಶಾಲೆ ಉಳಿಯಲಿ'---9
ಮಹಾನ್ ಕ್ರಾಂತಿಕಾರಿ ಭಗತ್‌ಸಿಂಗ್ ಹುತಾತ್ಮ ದಿನ---11



# ನಾವೇಕೆ ಮಾರ್ಕ್ಸ್‌ವಾದವನ್ನು ಕಲಿಯಬೇಕು

**ನಾವು ಯಾವುದೇ ತತ್ವ ಅಥವಾ ಸಿದ್ಧಾಂತಗಳಿಗೆ ಅಂಟಿಕೊಳ್ಳುವುದಿಲ್ಲ ಎಂಬ ಅಪ್ಪಟ ಬುದ್ಧಿಜೀವಿಗಳ ಒಂದು ವಾದವಿದೆ. ಆದರೆ ಅದು ವಾಸ್ತವವೇ? ಹಾಗಿರಲು ಸಾಧ್ಯವೇ? ಇಂದು ಸಮಾಜ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ನೀಡುವ ಮತ್ತು ಹೋರಾಟಕ್ಕೆ ದಾರಿದೀಪವಾಗುವ ತತ್ವಶಾಸ್ತ್ರ ನಮಗೆ ಬೇಕು. ಅದು ಯಾವ ತತ್ವಶಾಸ್ತ್ರ? ಅದಕ್ಕೆ ಮಾನದಂಡಗಳೇನು? ಈ ಕುರಿತು ಮಹಾನ್ ಮಾರ್ಕ್ಸ್‌ವಾದಿ ಚಿಂತಕರು ಮತ್ತು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಸಂಸ್ಥಾಪಕರಾದ ಕಾಮ್ರೇಡ್ ಶಿವದಾಸ್ ಘೋಷ್ ಅವರು, ಏಪ್ರಿಲ್, 1973ರಲ್ಲಿ ಕೊಲ್ಕತ್ತಾದ ಮಹಾಜತಿ ಸದನದಲ್ಲಿ ನಡೆದ ರಾಜನೈತಿಕ ಶಾಲೆಯಲ್ಲಿ ಚರ್ಚಿಸಿದರು. ಈ ಚರ್ಚೆಯ ಒಂದು ಭಾಗವನ್ನು ಪ್ರೊಲೆಟೇರಿಯನ್ ಎರಾ ಇಂಗ್ಲಿಷ್ ಪತ್ರಿಕೆಯು ತನ್ನ ನವೆಂಬರ್ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿತ್ತು. ಅದರ ಭಾವಾನುವಾದವನ್ನು, ನಾವು ನಮ್ಮ ಪಕ್ಷ ಎಸ್‌ಯುಸಿ(ಸಿ)ಯ ಸಂಸ್ಥಾಪನಾ ದಿನದ (ಏಪ್ರಿಲ್ 24) ವಿಶೇಷ ಸಂದರ್ಭದಲ್ಲಿ ಪ್ರಕಟಿಸುತ್ತಿದ್ದೇವೆ. ಅನುವಾದದಲ್ಲಿ ಏನೇ ಕೊರತೆ ಕಂಡುಬಂದರೆ, ಅದು ಸಂಪಾದಕ ಮಂಡಳಿಗೆ ಸೇರಿದ್ದು.**

ನಾವು ದುಡಿಯುವ ಜನತೆಯ ವಿಮುಕ್ತಿಯ ಹೋರಾಟದಲ್ಲಿ ತೊಡಗಿದ್ದೇವೆ. ಅಂತಿಮವಾಗಿ ಬಂಡವಾಳವಾದವನ್ನು ಕಿತ್ತೊಗೆದು ಸಮಾಜವಾದವನ್ನು ಸ್ಥಾಪಿಸಲು ಕ್ರಾಂತಿಕಾರಿ ಹೋರಾಟ ಬೆಳೆಸಲು ಕಾರ್ಮಿಕರ, ರೈತರ ಹಾಗೂ ಕೋಟ್ಯಂತರ ದುಡಿಯುವ ಜನತೆಯ ಹೋರಾಟಗಳನ್ನು ಹಂತ ಹಂತವಾಗಿ ಕಟ್ಟುತ್ತಿದ್ದೇವೆ. ಆದ್ದರಿಂದ, ನಮ್ಮ ಗುರಿಯ ಕಡೆಗೆ ನಡೆಯಲು, ಮಾಗದರ್ಶನ ನೀಡಲು ನಮಗೆಲ್ಲರಿಗೂ ವೈಚಾರಿಕ ಅಸ್ತ್ರವಾಗಿ ತತ್ವಶಾಸ್ತ್ರ ಅಗತ್ಯವಾಗಿ ಬೇಕು.

ಈಗ ಪ್ರಶ್ನೆಯೆಂದರೆ : ನಮ್ಮ ದೇಶದಲ್ಲಿ ಹಾಗೂ ವಿದೇಶದಲ್ಲಿ ಬೇಕಾದಷ್ಟು ತತ್ವಶಾಸ್ತ್ರ ಅಥವಾ ತತ್ವಶಾಸ್ತ್ರೀಯ ಪದ್ಧತಿಗಳಿರುವಾಗ, ನಾವೇಕೆ ವೈಚಾರಿಕ ಅಸ್ತ್ರವಾಗಿ ಮಾರ್ಕ್ಸ್‌ವಾದವನ್ನೇ ಒಪ್ಪಿಕೊಳ್ಳಬೇಕು? ನಮ್ಮ ಗುರಿಯನ್ನು ಮುಟ್ಟುವ ವಿಷಯದಲ್ಲಿ ಅದರ ಜೊತೆ ನಮಗೇನು ಸಂಬಂಧ? ಅದು ನಮ್ಮ ಕಲ್ಪನಾ ವಿಲಾಸವೇ? ಕಾರ್ಲ್ ಮಾರ್ಕ್ಸ್ ಮಹಾ ಮೇಧಾವಿಯಾಗಿದ್ದರಿಂದ ಅವರ ಬೋಧನೆಗಳ ಕಡೆಗೆ ವಿಶೇಷ ಸೆಳೆತವೇ? ಅಥವಾ ನಾವು ಮಾರ್ಕ್ಸ್‌ವಾದಿ ತತ್ವಶಾಸ್ತ್ರದ ಅನುಯಾಯಿಗಳೆಂದು ಘೋಷಿಸಿರುವುದರಿಂದ, ಅವರ ಬೋಧನೆಗಳನ್ನು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆಯೇ? ಇಲ್ಲ, ಖಂಡಿತಾ ಇಲ್ಲ.

ಸಾಂಖ್ಯ, ವೇದಾಂತ ಅಥವಾ ತಾರ್ಕಿಕ ಪಾಸಿಟಿವಿಸಂ, ಅಸ್ತಿತ್ವವಾದ ಅಥವಾ ದ್ವಂದ್ವಾತ್ಮಕ ವಸ್ತುವಾದ ಅಥವಾ ಯಾವುದೇ ತತ್ವಶಾಸ್ತ್ರವಾಗಿರಲಿ – ಅದು ಏನನ್ನು ಪ್ರತಿಪಾದಿಸುತ್ತದೆ ಎನ್ನುವ ಮಾಹಿತಿಗಾಗಿ ಅಧ್ಯಯನ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ನಮಗೆ ಸತ್ಯದ ಹುಡುಕಾಟದಲ್ಲಿ ಮಾರ್ಗದರ್ಶನ ನೀಡಲು, ನಮ್ಮ ವಿಮುಕ್ತಿ ಹೋರಾಟದ ಹಾದಿಯ ಮೇಲೆ ಬೆಳಕು ಚೆಲ್ಲಲು ತತ್ವಶಾಸ್ತ್ರ ಬೇಕು. ತತ್ವಶಾಸ್ತ್ರವು ಸತ್ಯವನ್ನು ಅನಾವರಣಗೊಳಿಸುವ ಒಂದು ಅಸ್ತ್ರ. ಕತ್ತಲೆಯನ್ನು ಹೊಡೆದೋಡಿಸಿ ದಾರಿ ಬೆಳಗುವ ದೀಪದಂತೆ. ಜೀವನ, ಸಮಾಜ

2ನೇ ಪುಟಕ್ಕೆ

# ಅಮೆರಿಕ-ಇಸ್ರೇಲ್‌ನಿಂದ ಇರಾನ್ ಮೇಲೆ ಯುದ್ಧ: ಅಮಾಯಕರ ಕಗ್ಗೊಲೆ

ಇತ್ತೀಚೆಗೆ ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸಿದ ಬೃಹತ್ ಮಿಲಿಟರಿ ದಾಳಿಯು ವಿಶ್ವಶಾಂತಿಗೆ ಗಂಭೀರ ಬೆದರಿಕೆಯನ್ನು ಒಡ್ಡಿದೆ. ಬಹಳ ಸಮಯದಿಂದ ಹೊಗೆಯಾಡುತ್ತಿದ್ದ ಉದ್ವಿಗ್ನತೆ ಇದೀಗ ಬಹಿರಂಗ ಯುದ್ಧವಾಗಿ ಮಾರ್ಪಟ್ಟಿದೆ. ಈ ಸಂಘರ್ಷವು ಕೇವಲ ಸೀಮಿತ ಹಿತಾಸಕ್ತಿಗಳಿಗಾಗಿ ನಡೆಯುತ್ತಿರುವ ಎರಡು ಗುಂಪುಗಳ ನಡುವಿನ ಘರ್ಷಣೆಯಲ್ಲ; ಬದಲಾಗಿ, ಇದು ದೂರಗಾಮಿ ಪರಿಣಾಮಗಳನ್ನು ಬೀರಬಲ್ಲ, ಯಾವುದೇ ಪ್ರಚೋದನೆಯಿಲ್ಲದೆ ನಡೆಸಲಾದ ಆಕ್ರಮಣಕಾರಿ ದಾಳಿಯಾಗಿದೆ. ಯುದ್ಧ ಪ್ರಾರಂಭವಾಗುವ ಮುನ್ನ ರಾಜತಾಂತ್ರಿಕ ಪ್ರಯತ್ನಗಳು ಜಾರಿಯಲ್ಲಿದ್ದವು. ಅಮೆರಿಕ ಮತ್ತು ಇರಾನ್, ಜಿನೀವಾದಲ್ಲಿ, ಓಮನ್ ದೇಶದ ಮಧ್ಯಸ್ಥಿಕೆಯೊಂದಿಗೆ ಪರಮಾಣು ಕುರಿತಾಗಿ ಪರೋಕ್ಷ ಮಾತುಕತೆಗಳಲ್ಲಿ ತೊಡಗಿದ್ದು, ಇದು ಉದ್ವಿಗ್ನತೆಯನ್ನು ಶಮನಗೊಳಿಸುವ ನಿಟ್ಟಿನಲ್ಲಿ ಆಶಾದಾಯಕವಾಗಿತ್ತು. ಓಮನ್‌ನ ವಿದೇಶಾಂಗ ಸಚಿವರ ಪ್ರಕಾರ, ಈ ನಿಟ್ಟಿನಲ್ಲಿ ಒಂದಷ್ಟು ಪ್ರಗತಿಯೂ ಆಗಿತ್ತು ಮತ್ತು ಶೀಘ್ರದಲ್ಲೇ ಉಭಯ ದೇಶಗಳು ಚರ್ಚೆಯನ್ನು ಮುಂದುವರಿಸುವ ನಿರೀಕ್ಷೆ ಕೂಡ ಇತ್ತು. ಇರಾನ್ ಸರ್ಕಾರಿ ಮಾಧ್ಯಮಗಳ ಪ್ರಕಾರ, ಈ ಚರ್ಚೆಗಳಲ್ಲಿ ಇರಾನ್, ಶಾಂತಿಯುತ ಉದ್ದೇಶಗಳಿಗಾಗಿ ಪರಮಾಣು ಶಕ್ತಿಯನ್ನು ಅಭಿವೃದ್ಧಿಪಡಿಸುವ ತನ್ನ ಹಕ್ಕನ್ನು ಪ್ರತಿಪಾದಿಸಿತ್ತು. ಅಲ್ಲದೆ ಯುರೇನಿಯಂನ್ನು ಸಾಂದ್ರೀಕೃತಗೊಳಿಸುವುದನ್ನು (Enrichment) ಸಂಪೂರ್ಣವಾಗಿ ನಿಲ್ಲಿಸುವ ಹಾಗೂ ಸುಮಾರು 400 ಕೆಜಿಯಷ್ಟು ಸಾಂದ್ರೀಕೃತ ಯುರೇನಿಯಂನ್ನು ವಿದೇಶಗಳಿಗೆ ಸ್ಥಳಾಂತರಿಸುವ ಬೇಡಿಕೆಗಳನ್ನು ಸಾರಾಸಗಟಾಗಿ ತಿರಸ್ಕರಿಸಿತ್ತು. ಪ್ರಸ್ತಾವನೆಗಳು ಬಹಿರಂಗಗೊಳಿಸದಿದ್ದರೂ, ಇರಾನ್‌ನ ಅಧಿಕಾರಿಗಳು ಹಲವಾರು ವಿನಾಯಿತಿಗಳನ್ನು ನೀಡಿದ್ದರು ಎಂದು ಹೇಳಲಾಗಿದೆ.

### ಯುದ್ಧಕ್ಕೆ ಅಮೆರಿಕಾ ಹಾಗೂ ಇಸ್ರೇಲ್ ಪ್ರಚೋದನೆ

ಆದರೆ, ಈ ಎಲ್ಲ ರಾಜತಾಂತ್ರಿಕ ಪ್ರಯತ್ನಗಳ ನಡುವೆಯೂ ಪರಿಸ್ಥಿತಿ ದಿಢೀರ್ ತಿರುವು ಪಡೆಯಿತು. ಫೆಬ್ರುವರಿ 28, 2026 ರಂದು,

2ನೇ ಪುಟಕ್ಕೆ




ಅಮೆರಿಕಾ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸುತ್ತಿರುವ ಯುದ್ಧ ವಿರೋಧಿಸಿ ಎಸ್‌ಯುಸಿಐ(ಸಿ) ನೇತೃತ್ವದಲ್ಲಿ ಪ್ರತಿಭಟನೆ

(ಪುಟ 1ರಿಂದ........)

# ನಾವೇಕೆ ಮಾರ್ಕ್ಸ್‌ವಾದವನ್ನು ಕಲಿಯಬೇಕು

ಮತ್ತು ನಿಸರ್ಗಗಳಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ನಡುವೆ ದಾರಿ ತೋರಿಸುವ ಒಂದು ಪ್ರಬಲ ಅಸ್ತ್ರ!

ನಮಗೆ ವಿಮುಕ್ತಿ ಬೇಕು. ಪ್ರಪಂಚವನ್ನು ಬದಲಾಯಿಸಬೇಕು ಮತ್ತು ಪ್ರಗತಿಯ ಗತಿಯನ್ನು ತ್ವರಿತಗೊಳಿಸಬೇಕಾದರೆ, ನಾವು ಪ್ರಜ್ಞಾಪೂರ್ವಕವಾಗಿ ಕಾರ್ಯಪ್ರವೃತ್ತರಾಗಬೇಕಾಗುತ್ತದೆ. ಈ ಪ್ರಜ್ಞಾಪೂರ್ವಕ ಕ್ರಿಯೆಯನ್ನು ನಾವು ನಿರ್ವಹಿಸಲು, ಪ್ರಕೃತಿಯ ಆಂತರಿಕ ನಿಯಮಗಳನ್ನು ಮತ್ತು ನಮಗೆ ಎದುರಾಗುತ್ತಿರುವ ಎಲ್ಲಾ ಸಮಸ್ಯೆಗಳ ನಿಜಕಾರಣವನ್ನು ತಿಳಿದುಕೊಳ್ಳುವುದು ಅಗತ್ಯ. ಈ ನಿಟ್ಟಿನಲ್ಲಿ ನಾವು ಒಂದು ಸಮರ್ಥ ತತ್ವಶಾಸ್ತ್ರವನ್ನು ಕಂಡುಕೊಳ್ಳಬೇಕು.

ನಮ್ಮ ಜೀವನದ ಸಮಸ್ಯೆಗಳ ಮಧ್ಯೆ, ನಮಗೆ ಮಾರ್ಗದರ್ಶನ ನೀಡುವ ಸಾಮರ್ಥ್ಯ ಆ ತತ್ವಶಾಸ್ತ್ರಕ್ಕೆ ಇರಬೇಕು. ನಾಗರಿಕತೆ, ಸಾಮಾಜಿಕ ಪ್ರಗತಿ ಹಾಗೂ ಕ್ರಾಂತಿ ಎದುರಿಸುತ್ತಿರುವ ಸಮಸ್ಯೆಗಳಿಗೆ ದಿಗ್ದರ್ಶನ ನೀಡುವಂತಹ ಶಕ್ತಿ ಆ ತತ್ವಶಾಸ್ತ್ರಕ್ಕೆ ಇರಬೇಕು. ವರ್ಗ ಸಂಘರ್ಷದ ಸಮಸ್ಯೆಗಳು ಮತ್ತು ಸಾಮಾಜಿಕ ಮನೋರೂಪದಲ್ಲಿರುವ ವಿಭಿನ್ನ ಸಂಕೀರ್ಣತೆಗಳನ್ನು ಸಮರ್ಪಕವಾಗಿ ಅರ್ಥೈಸಬಲ್ಲ ದಕ್ಷತೆ ಆ ತತ್ವಶಾಸ್ತ್ರಕ್ಕೆ ಇರಬೇಕಾಗುತ್ತದೆ. ನಮಗೆ, ಪ್ರಸಕ್ತ ಬಂಡವಾಳಶಾಹಿ ಪ್ರಭುತ್ವವನ್ನು ಕ್ರಾಂತಿಯಿಂದ ಕಿತ್ತೊಗೆದು, ಸಮಾಜವನ್ನು ಮೂಲಭೂತವಾಗಿ ಪರಿವರ್ತಿಸುವ ಹಾದಿಯನ್ನು ಬೆಳಗುವ ಸಾಮರ್ಥ್ಯವಿರುವಂತಹ ಪ್ರಖರವಾದ ತತ್ವಶಾಸ್ತ್ರದ ಅಗತ್ಯವಿದೆ. ನಮ್ಮ ಈ ಎಲ್ಲಾ ಅಗತ್ಯಗಳನ್ನು ಪೂರೈಸುವ ತತ್ವಶಾಸ್ತ್ರ ವೇದಾಂತವಾಗಿದ್ದರೆ, ಆಗ ನಾವು ಅದನ್ನೇ ಒಪ್ಪಿಕೊಳ್ಳುತ್ತಿದ್ದೆವು. ಅಥವಾ ಅದು ಫ್ಯೂಯರ್‌ಬಕ್‌ರವರ ತತ್ವಶಾಸ್ತ್ರ ಅಥವಾ ತಾರ್ಕಿಕ ಪಾಸಿಟಿವಿಸಂ ಅಥವಾ ಸಾರ್ತ್ರೆಯವರ ಅಸ್ತಿತ್ವವಾದ ಆಗಿದ್ದರೆ ನಾವು ಅದನ್ನೇ ಒಪ್ಪಿಕೊಳ್ಳುತ್ತಿದ್ದೆವು.

ಇಲ್ಲೊಂದು ವಿಷಯವನ್ನು ಗಮನಿಸಬೇಕು – ನಾವು ಸಮಸ್ಯೆಗಳನ್ನು ಸರಿಯಾಗಿ ಗ್ರಹಿಸದಿದ್ದರೆ, ಅವುಗಳನ್ನು ಬಗೆಹರಿಸಲು ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ಸತ್ಯದ ಸಾಧನೆಯಲ್ಲಿ ನಮಗೆ 'ಮನೋನಿಷ್ಠವಾದ'(Subjectivism) ಧೋರಣೆಯು ಸಹಾಯ ಮಾಡುವುದಿಲ್ಲ; ಅದರಿಂದ ಸಮಸ್ಯೆಗಳನ್ನು ಬಗೆಹರಿಸುವುದು ಅಸಾಧ್ಯ. ಉದಾಹರಣೆಗೆ, ಮಾನವನು ನೀರು ಅಥವಾ ವಿದ್ಯುಚ್ಛಕ್ತಿಯ ನಿಜವಾದ ಸ್ವಭಾವವನ್ನು ಅರ್ಥ ಮಾಡಿಕೊಳ್ಳುವವರೆಗೂ, ಅವುಗಳ ಬಗ್ಗೆ ಅವನಿಗೆ ಚಿತ್ರವಿಚಿತ್ರ ಕಲ್ಪನೆಗಳಿದ್ದವು. ಅವನು ನೀರು ಅಥವಾ ವಿದ್ಯುಚ್ಛಕ್ತಿಯ ನಿರ್ದಿಷ್ಟ ನಿಯಮ, ಗುಣಲಕ್ಷಣ ಮತ್ತು ಸ್ವಭಾವಗಳನ್ನು ಗ್ರಹಿಸಲು ಸಾಧ್ಯವಾದ ಮೇಲೆಯೇ, ತನ್ನ ಅಗತ್ಯಗಳಿಗೆ ತಕ್ಕಂತೆ ಅವುಗಳನ್ನು ನಿಯಂತ್ರಿಸಲು ಅವನಿಗೆ ಸಾಧ್ಯವಾಯಿತು. ಅವುಗಳನ್ನು ನಿಯಂತ್ರಿಸುವ ಮೂಲಕ ಅವುಗಳ ಮೇಲೆ ಮಾನವ ಮೇಲುಗೈ ಸಾಧಿಸಿದ. ಇದರಿಂದ ಉದ್ಭವಿಸುವ ಪ್ರಸ್ತುತವಾದ ಪ್ರಶ್ನೆ ಎಂದರೆ: ಸತ್ಯವನ್ನು ಹೇಗೆ ತಿಳಿದುಕೊಳ್ಳುವುದು? ಸತ್ಯದ ಹುಡುಕಾಟದಲ್ಲಿ ಯಾವ ನಿರ್ದಿಷ್ಟ ತತ್ವಶಾಸ್ತ್ರ ಮಾರ್ಗದರ್ಶನ ನೀಡಬಲ್ಲದು?

ಈ ಕಾರ್ಯವನ್ನು ನಿರ್ವಹಿಸಬಲ್ಲ ಸಾಮರ್ಥ್ಯವನ್ನು ಯಾವ ತತ್ವಶಾಸ್ತ್ರ ಹೊಂದಿರುತ್ತದೆಯೋ, ಆ ತತ್ವಶಾಸ್ತ್ರವು ನಿಸರ್ಗ, ಜೀವನ ಮತ್ತು ಸಮಾಜದ ಬಗ್ಗೆ ಸಮಗ್ರವಾದ ಮತ್ತು ವಸ್ತುನಿಷ್ಠ ವೈಜ್ಞಾನಿಕ ಜ್ಞಾನವನ್ನು ನಮಗೆ ಕೊಡಲೇಬೇಕಾಗುತ್ತದೆ. ನಮ್ಮ ಸುತ್ತಮುತ್ತಲ ಪ್ರಪಂಚ, ಅದರಲ್ಲಿ ನಡೆಯುವ ಪ್ರತಿಯೊಂದು ಸಂಗತಿ ಮತ್ತು ಬೆಳವಣಿಗೆ, ಪ್ರತಿಯೊಂದು ವಿದ್ಯಮಾನಕ್ಕೂ ಕಾರ್ಯಕಾರಣ ಸಂಬಂಧವಿದೆ ಮತ್ತು ಅದು ನಿಯಮಬದ್ಧವಾಗಿದೆ. ಪ್ರತಿಯೊಂದು ನಿರ್ದಿಷ್ಟ ಸಂಗತಿ ಮತ್ತು ಅದರ ಬೆಳವಣಿಗೆಯ ಹಿಂದೆ ನಿರ್ದಿಷ್ಟ ನಿಯಮ ಕೆಲಸ ಮಾಡುತ್ತಿರುತ್ತದೆ. ವಿಜ್ಞಾನ, ನಿರ್ದಿಷ್ಟವಾಗಿ ಹೇಳುವುದಾದರೆ, ಭೌತಶಾಸ್ತ್ರ, ರಸಾಯನಶಾಸ್ತ್ರ, ಭೂವಿಜ್ಞಾನ, ಜೀವವಿಜ್ಞಾನ, ಮುಂತಾದವುಗಳನ್ನು ಪರಿಗಣಿಸೋಣ. ಇವುಗಳು ಭೌತಿಕ ವಲಯದ ನಿರ್ದಿಷ್ಟ ನಿಯಮಗಳನ್ನು ನಿರ್ದಿಷ್ಟವಾಗಿ ಅಧ್ಯಯನ ಮಾಡುತ್ತವೆ. ಪ್ರಯೋಗದ ಮೂಲಕ ಇವುಗಳು ಸಂಶೋಧನೆ ಮಾಡುತ್ತವೆ. ಇವುಗಳು ನಿರ್ದಿಷ್ಟ ಸತ್ಯಗಳನ್ನು ಮಾತ್ರ ಅನಾವರಣಗೊಳಿಸುತ್ತವೆ. ಅಂದರೆ, ಇವುಗಳು ಕೃಷಿ ಮಾಡುವ ಜ್ಞಾನವು ಸಹ ನಿರ್ದಿಷ್ಟ ಜ್ಞಾನವಾಗಿರುತ್ತದೆ. ಆದ್ದರಿಂದಲೇ ಇದನ್ನು ಭಾಗಶಃ ಜ್ಞಾನ ಎನ್ನುತ್ತೇವೆ. ಅಂದರೆ ನಿಸರ್ಗ, ಜೀವನ ಮತ್ತು ಸಮಾಜದ ಬಗೆಗಿನ ಒಟ್ಟಾರೆಯಾದ, ಸಮಗ್ರವಾದ ಜ್ಞಾನದ ದೃಷ್ಟಿಯಿಂದ ನೋಡಿದರೆ, ಇವುಗಳು ಅನಾವರಣಗೊಳಿಸುವುದು ನಿರ್ದಿಷ್ಟ ಜ್ಞಾನವನ್ನು, ಭಾಗಶಃ ಜ್ಞಾನವನ್ನು ಮಾತ್ರ. ಇವು ಸಮಗ್ರ ಜ್ಞಾನದ ಭಾಗವೇ ಹೊರತು ಇವುಗಳೇ ಸಮಗ್ರ ಜ್ಞಾನವಲ್ಲ. ಉದಾಹರಣೆಗೆ, ವಿಜ್ಞಾನದ ಈ ಶಾಖೆಗಳನ್ನು ವೈದ್ಯಕೀಯ ವಿಜ್ಞಾನದಲ್ಲಿ ತಜ್ಞರು ಮಾನವ ದೇಹದ ವಿವಿಧ ಅಂಗಾಂಗಗಳ ಸೂಕ್ಷ್ಮ ಅಧ್ಯಯನ ಮಾಡುವುದಕ್ಕೆ ಹೋಲಿಸಬಹುದು. ಮಾನವ ದೇಹದ ಅಂಗಾಂಗಗಳಿಗೆ ಅವುಗಳದ್ದೇ ಆದ ನಿರ್ದಿಷ್ಟ ಕೆಲಸ ಕಾರ್ಯಗಳು ಮತ್ತು ಗುಣಲಕ್ಷಣಗಳಿದ್ದರೂ ಸಹ, ಅವುಗಳು ದೇಹದ ಒಟ್ಟಾರೆ ಜೈವಿಕತೆಯಲ್ಲಿ ಪರಸ್ಪರ ಸಂಬಂಧ ಹೊಂದಿವೆ. ಅದೇ ರೀತಿ ಜೀವನ, ಸಮಾಜ ಮತ್ತು ನಿಸರ್ಗದಲ್ಲಿ ವಿವಿಧ ಬಗೆಯ ಬೆಳವಣಿಗೆಗಳು, ಭೌತಿಕ ವಿಶ್ವದ ತಮ್ಮ ನಿರ್ದಿಷ್ಟ ನಿಯಮಗಳಿಗೆ ಬದ್ಧವಾಗಿದ್ದರೂ ಸಹ, ಅವುಗಳು ಒಂದರಿಂದ ಇನ್ನೊಂದು ಪ್ರತ್ಯೇಕವಾಗಿಲ್ಲ. ಅವುಗಳು ಮಾಲೆಯೊಂದರ ಮಣಿಗಳಂತೆ ಒಂದಕ್ಕೊಂದು ಪೋಣಿಸಿಕೊಂಡಿವೆ. ವಿವಿಧ ವಸ್ತುಗಳು, ವಸ್ತುವಿನ ವಿವಿಧ ರೂಪಗಳು ವಿಶ್ವವನ್ನು ರೂಪಿಸುತ್ತವೆ. ಅದೇ ರೀತಿ, ವಿಜ್ಞಾನದ ವಿವಿಧ ಶಾಖೆಗಳು ಅನಾವರಣಗೊಳಿಸಿದ ವಿವಿಧ ನಿರ್ದಿಷ್ಟ ಸತ್ಯಗಳನ್ನು ಸಾಮಾನ್ಯೀಕರಣವೆಂಬ ವೈಜ್ಞಾನಿಕ ಪ್ರಕ್ರಿಯೆಯ ಮೂಲಕ ನಾವು ಸಮನ್ವಯಗೊಳಿಸುತ್ತೇವೆ ಮತ್ತು ಒಗ್ಗೂಡಿಸುತ್ತೇವೆ. ಆಗ ನಮಗೆ ಜೀವನ, ಸಮಾಜ ಮತ್ತು ನಿಸರ್ಗದ ಬಗ್ಗೆ ಸಮಗ್ರ ಜ್ಞಾನ ಸಿಗುತ್ತದೆ. ಮಾನವ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ನಮಗೆ ಸಮಗ್ರ ವೈಜ್ಞಾನಿಕ ಜ್ಞಾನವನ್ನು ನೀಡಿದ ಏಕೈಕ ತತ್ವಶಾಸ್ತ್ರವೇ **"ದ್ವಂದ್ವಾತ್ಮಕ ವಸ್ತುವಾದ"**.

ವಿಜ್ಞಾನದ ವಿವಿಧ ಶಾಖೆಗಳು ನಿರ್ದಿಷ್ಟ ಭೌತಿಕ ವಲಯಗಳ ಅಧ್ಯಯನ ಮಾಡುವಾಗ ನಿರ್ದಿಷ್ಟ ಜ್ಞಾನ ಹೊರಹೊಮ್ಮುತ್ತದೆ. ಈ ನಿರ್ದಿಷ್ಟ ಜ್ಞಾನಗಳನ್ನು ಸಮನ್ವಯಗೊಳಿಸುವ, ಒಂದುಗೂಡಿಸುವ ಮತ್ತು ಸಾಮಾನ್ಯೀಕರಿಸುವ ಮೂಲಕ ವಿಕಸನಗೊಂಡಿರುವ ಏಕೈಕ ತಾತ್ವಿಕ ಪರಿಕಲ್ಪನೆ, "ದ್ವಂದ್ವಾತ್ಮಕ ವಸ್ತುವಾದ" ಅಥವಾ ಮಾರ್ಕ್ಸ್‌ವಾದ. ಮಾರ್ಕ್ಸ್‌ವಾದದ ಹೊರತು ಬೇರಾವ ತತ್ವಶಾಸ್ತ್ರವೂ ಈ ರೀತಿಯಲ್ಲಿ ವಿಕಸನಗೊಂಡಿಲ್ಲ. ಬೇರೆಲ್ಲಾ ತತ್ವಶಾಸ್ತ್ರಗಳು ವಾಸ್ತವದಿಂದ ದೂರವಿದ್ದು 'ಮನೋನಿಷ್ಠ' ಚಿಂತನಾ ಪ್ರಕ್ರಿಯೆಯನ್ನು ಹೊಂದಿವೆ. ಬೇರೆಲ್ಲಾ ತತ್ವಶಾಸ್ತ್ರಗಳು ಪ್ರಪಂಚವನ್ನು ವ್ಯಾಖ್ಯಾನಿಸಲು ವಿಜ್ಞಾನದ ಮೇಲೆ ಅವಲಂಬಿತವಾಗಿಲ್ಲ. ಬದಲಿಗೆ, ಇವುಗಳು ಕೇವಲ ದೈನಂದಿನ ಅನುಭವಗಳು ಅಥವಾ ವೈಯಕ್ತಿಕ ವಿವೇಚನೆ ಅಥವಾ ವೈಯಕ್ತಿಕ ಸಾಮರ್ಥ್ಯದ ನೆಲೆಗಟ್ಟಿನಿಂದ ಪಡೆದುಕೊಂಡ ಜ್ಞಾನದ ಆಧಾರದ ಮೇಲೆ ಜಗತ್ತನ್ನು ವ್ಯಾಖ್ಯಾನಿಸಿವೆ. ಇವುಗಳು ಪ್ರಪಂಚದ ಕುರಿತು 'ಮನೋನಿಷ್ಠ' ಚಿಂತನೆಯ ಮೇಲೆ ಆಧಾರಪಟ್ಟ ವಿಭಿನ್ನ ವ್ಯಾಖ್ಯಾನಗಳೇ ಹೊರತು ಬೇರೇನೂ ಅಲ್ಲ.

ನಾವು 'ಮನೋನಿಷ್ಠ ಚಿಂತನೆ' ಅಥವಾ ತಾರ್ಕಿಕ ಪಾಸಿಟಿವಿಸಂ ಆಧಾರದ ಮೇಲೆ ಸತ್ಯವನ್ನು ತಿಳಿಯಲು ಬಯಸಿದರೆ, ಆಗ ಒಂದೇ ವಿದ್ಯಮಾನದ ಬಗ್ಗೆಯೇ ತಿಳುವಳಿಕೆಯಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸ ಬಂದೇ ಬರುತ್ತದೆ. ಒಂದು ವಾಸ್ತವ ವಿದ್ಯಮಾನವು ಎಲ್ಲಾ ವ್ಯಕ್ತಿಗಳಿಗೂ ಒಂದೇ ಆಗಿರುತ್ತದೆ. ಆ ವಿದ್ಯಮಾನವು ಓರ್ವ ವ್ಯಕ್ತಿಯ ಪ್ರಜ್ಞೆಯಿಂದ ಸ್ವತಂತ್ರವಾಗಿರುತ್ತದೆ. ಆದಾಗ್ಯೂ ಬೇರೆ ಬೇರೆ ವ್ಯಕ್ತಿಗಳು ವಿಭಿನ್ನವಾಗಿ ಅರ್ಥೈಸುತ್ತಾರೆ. ಏಕೆಂದರೆ ಇಲ್ಲಿ ಸತ್ಯವು ವಸ್ತು ಪರಿಸ್ಥಿತಿಯ ಮೇಲೆ ಅವಲಂಬಿತವಾಗಿಲ್ಲ, ಓರ್ವ ವ್ಯಕ್ತಿಯ ಚಿಂತನಾ ಪ್ರಕ್ರಿಯೆಯ ಮೇಲೆ ಆಧಾರವಾಗಿದೆ. ಭಾವನಾವಾದಿ ತತ್ವಶಾಸ್ತ್ರದಲ್ಲಿ ಹಲವಾರು 'ಚಿಂತನಾ ಧಾರೆಗಳು' ಏಕಿವೆ ಎಂಬುದನ್ನು ಇದು ವಿವರಿಸುತ್ತದೆ.......ಆದರೆ ವಿಜ್ಞಾನದಲ್ಲಿ ಹಾಗೆಂದೂ ನಡೆಯುವುದಿಲ್ಲ. ಏಕೆಂದರೆ ವಿಜ್ಞಾನವು ಪ್ರಯೋಗದ ಮೇಲೆ ಆಧಾರವಾಗಿದೆ. ವಿಜ್ಞಾನದ ವಿಷಯಕ್ಕೆ ಬಂದರೆ, ಜಪಾನ್, ಅಮೆರಿಕಾ ಅಥವಾ ಇಂಗ್ಲೆಂಡ್‌ಗಳಲ್ಲಿ ಯಾವುದು ಸತ್ಯವೋ, ಅದು ಭಾರತದಲ್ಲೂ ಅಷ್ಟೇ ಸತ್ಯ......ಉದಾಹರಣೆಗೆ, ವಿದ್ಯುಚ್ಛಕ್ತಿಯ ನಿಯಮಗಳು ಮತ್ತು ಸ್ವಭಾವಗಳನ್ನು ವಿಭಿನ್ನವಾಗಿ ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಇವುಗಳು ಪ್ರಯೋಗದಿಂದ ಕಂಡು ಹಿಡಿದ ಸತ್ಯಗಳು. ಹಾಗಾಗಿ ಅವುಗಳು ಸಾರ್ವತ್ರಿಕ........ಹೀಗೆ, ಪ್ರಪಂಚವನ್ನು ವ್ಯಾಖ್ಯಾನಿಸಲು ನಮ್ಮ ಮುಂದಿರುವ ಹಲವು ಚಿಂತನಾಧಾರೆಗಳಲ್ಲಿ ಮಾರ್ಕ್ಸ್‌ವಾದ ಅಥವಾ ದ್ವಂದ್ವಾತ್ಮಕ ವಸ್ತುವಾದವು ಕೇವಲ ಇನ್ನೊಂದು ತತ್ವ ಸಿದ್ಧಾಂತವಲ್ಲ. – "ಮಾರ್ಕ್ಸ್‌ವಾದವು ಕ್ರಿಯೆಗೆ ಒಂದು ಮಾರ್ಗದರ್ಶಿ"– "ಪ್ರಪಂಚವನ್ನು ಬದಲಾಯಿಸುವ ಅಸ್ತ್ರ".

ಕಾರ್ಲ್ ಮಾರ್ಕ್ಸ್ ಮೊದಲಿಗೆ ಪ್ರತಿಪಾದಿಸಿದ ದ್ವಂದ್ವಾತ್ಮಕ ವಸ್ತುವಾದವು ಬೇರೆ ತತ್ವಶಾಸ್ತ್ರಗಳಿಗಿಂತ ಮೂಲಭೂತವಾಗಿ ಮತ್ತು ಸ್ಪಷ್ಟವಾಗಿ ಬಹಳ ವಿಭಿನ್ನ. ಮಾರ್ಕ್ಸ್‌ವಾದವು ಒಂದು ಜಡ ಸಿದ್ಧಾಂತವಲ್ಲ. ಅದು ಸೃಜನಶೀಲ ಮತ್ತು ವಿಜ್ಞಾನದ ವಿವಿಧ ಶಾಖೆಗಳ ಹಾಗೂ ಮನುಕುಲದ ಜ್ಞಾನದ ಜೊತೆ ಜೊತೆಯಲ್ಲೇ ವಿಕಸನಗೊಳ್ಳುತ್ತಿರುವ ತತ್ವಶಾಸ್ತ್ರ...... ಪ್ರತಿಯೊಂದೊಂದೂ ಆವಿಷ್ಕಾರಗಳ ಜೊತೆಜೊತೆಗೆ ದ್ವಂದ್ವಾತ್ಮಕ ವಸ್ತುವಾದವು ಗಾಢವಾಗಿ ಬೇರೂರುತ್ತದೆ; ಮತ್ತು ಪ್ರಪಂಚದ ಕುರಿತಾದ ಅದರ ಸಂಕೀರ್ಣ ತಿಳುವಳಿಕೆಯು ನಿರಂತರವಾಗಿ ವಿಕಸನಗೊಳ್ಳುತ್ತದೆ. ಹಾಗಾಗಿಯೇ, ದ್ವಂದ್ವಾತ್ಮಕ ವಸ್ತುವಾದವನ್ನು 'ವಿಜ್ಞಾನಗಳ ವಿಜ್ಞಾನ' ಎಂದು ಕರೆಯುತ್ತೇವೆ!

ಆದ್ದರಿಂದ, ಹಳತಾದ, ಸಾಯುವ ಸ್ಥಿತಿಯಲ್ಲಿರುವ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಪರಿವರ್ತನೆಯನ್ನು ತರಲು ಮಾರ್ಕ್ಸ್‌ವಾದ ನಮಗೆ ಅತ್ಯವಶ್ಯಕ. ಕೊಳೆಯುತ್ತಿರುವ ಬೂರ್ಜ್ವಾ ಸಂಸ್ಕೃತಿಯ ದುರ್ಗುಣಗಳಿಂದ ಮುಕ್ತರಾಗಿ ಉನ್ನತ ಹಾಗೂ ಉದಾತ್ತ ನೀತಿ, ನೈತಿಕತೆ ಮತ್ತು ಸಂಸ್ಕೃತಿಗಳನ್ನು ಹೊಂದಿದ ಹೊಸ ಮನುಷ್ಯರನ್ನು ಸೃಷ್ಟಿಸುವ ಉದಾತ್ತ ವೈಚಾರಿಕತೆಯೇ ಮಾರ್ಕ್ಸ್‌ವಾದ! ಮಾರ್ಕ್ಸ್‌ವಾದವು ಸತ್ಯವನ್ನು ಅರಿಯಲು ಮತ್ತು ವಿಮುಕ್ತಿ ಹಾದಿಯ ಮೇಲೆ ಬೆಳಕು ಚೆಲ್ಲಲು ನಮ್ಮ ಕೈಯಲ್ಲಿರುವ ಪ್ರಬಲ ಅಸ್ತ್ರವಾಗಿದೆ. ಇದು ಇಡೀ ಮನುಕುಲಕ್ಕೆ ದಾರಿದೀಪ! ಇದು ಮನುಕುಲದ ಮುನ್ನಡೆ ಮತ್ತು ಮೇಲ್ಮುಖ ಪಯಣದಲ್ಲಿ ಮಾರ್ಗದರ್ಶನ ನೀಡುವ ತತ್ವಶಾಸ್ತ್ರ. ನಾಗರಿಕತೆಯ ಪ್ರಗತಿಯನ್ನು ಬಯಸುವವರಿಗೆ, ಮನುಕುಲದ ಅಭ್ಯುದಯವನ್ನು ಬಯಸುವವರಿಗೆ, ವಿಜ್ಞಾನ ಮತ್ತು ಜ್ಞಾನದ ಅನಿರ್ಬಂಧಿತ ಬೆಳವಣಿಗೆಯನ್ನು ಬಯಸುವವರಿಗೆ; ಅವರ ಕೈಯಲ್ಲಿರುವ ಪ್ರಜ್ವಲಿಸುತ್ತಿರುವ ಅಸ್ತ್ರವೇ ಮಾರ್ಕ್ಸ್‌ವಾದ! ಸಮಾಜದ ಬೆಳವಣಿಗೆಯ ಇಂದಿನ ಹಂತದಲ್ಲಿ, ಎಲ್ಲಾ ರೀತಿಯ ಸಂಕೋಲೆಗಳಿಂದ ವಿಮುಕ್ತಿಗೊಳಿಸಲು ಮನುಕುಲವನ್ನು ಮುನ್ನಡೆಸುವ ಕಾರ್ಯವನ್ನು ಚರಿತ್ರೆ ಕಾರ್ಮಿಕವರ್ಗಕ್ಕೆ ನೀಡಿದೆ. ಆ ಕಾರ್ಮಿಕವರ್ಗವು ಮಾರ್ಕ್ಸ್‌ವಾದವನ್ನು ಇನ್ನೂ ಹೆಚ್ಚು ಹೆಚ್ಚು ಅರಿಯಬೇಕು. ಕಾರ್ಮಿಕರು ಪ್ರತಿಯೊಂದು ಕ್ಷೇತ್ರದಲ್ಲೂ ಜ್ಞಾನವನ್ನು ಗಳಿಸಿಕೊಳ್ಳಬೇಕು. ಅವರ ಕೈಯಲ್ಲಿ ಮಾರ್ಕ್ಸ್‌ವಾದವು ಅಭೇದ್ಯ ಅಸ್ತ್ರ. ಆಳುವ ವರ್ಗದ ಮಾರಣಾಂತಿಕ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳಿಗಿಂತಲೂ ಹೆಚ್ಚು ಶಕ್ತಿಶಾಲಿಯಾದ ಅಸ್ತ್ರ. ಈ ಕಾರಣದಿಂದಲೇ ನಮ್ಮ ಮುನ್ನಡೆಗೆ ಮಾರ್ಗದರ್ಶಕವಾಗಿ ನಮಗಿರುವ ಏಕೈಕ ಅಸ್ತ್ರವೇ ಮಾರ್ಕ್ಸ್‌ವಾದ!

---

(ಪುಟ 1ರಿಂದ........)

# ಅಮೆರಿಕ ಮತ್ತು ಇಸ್ರೇಲ್‌ನಿಂದ ಇರಾನ್ ಮೇಲೆ ಯುದ್ಧ

ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ಸರಣಿ ವೈಮಾನಿಕ ದಾಳಿಗಳನ್ನು ನಡೆಸಿದವು. ಈ ದಾಳಿಗಳು ಇರಾನ್‌ನ ಪ್ರಮುಖ ಸೇನಾ ನೆಲೆಗಳು, ಪರಮಾಣು ಸ್ಥಾವರಗಳು ಮತ್ತು ಪ್ರಭಾವಿ ನಾಯಕರನ್ನು ಗುರಿಯಾಗಿಸಿಕೊಂಡಿದ್ದವು. ಇರಾನ್‌ನಲ್ಲಿ ಸರ್ಕಾರವನ್ನು ಬದಲಿಸಿ, ತಮ್ಮ ಪರಮಾಣು ಕಾರ್ಯಕ್ರಮವನ್ನು ಜಾರಿಗೊಳಿಸುವುದು, ಈ ದಾಳಿಯ ಹಿಂದಿರುವ ಉದ್ದೇಶ ಎಂದು ಅಮೆರಿಕಾ ಹಾಗೂ ಇಸ್ರೇಲ್ ಹೇಳಿಕೊಂಡಿವೆ. ಅಲಿ ಖಮೇನಿ ಸೇರಿದಂತೆ ಉನ್ನತ ನಾಯಕರನ್ನೇ ಗುರಿಯಾಗಿಸಲಾಗಿತ್ತು. ಈ ದಾಳಿಗಳಿಂದ ಭಾರಿ ಹಾನಿಯಾಗಿದ್ದು, ಅಪಾರ ಸಂಖ್ಯೆಯ ಸೈನಿಕರು ಹಾಗೂ ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ. ಇದಕ್ಕೆ ಪ್ರತಿಯಾಗಿ, ಇರಾನ್ ಕೂಡ ಇಸ್ರೇಲ್ ಮತ್ತು ಮಧ್ಯಪ್ರಾಚ್ಯದ ಇತರೆಡೆ ಇರುವ ಅಮೆರಿಕದ ಸೇನಾ ನೆಲೆಗಳ ಮೇಲೆ ಪ್ರತಿದಾಳಿಗಳನ್ನು ನಡೆಸಿದೆ. ಇದರ ಪರಿಣಾಮವಾಗಿ, ಈ ಸಂಘರ್ಷವು ತ್ವರಿತವಾಗಿ ಇಡೀ ಪ್ರಾದೇಶಿಕ ಯುದ್ಧವಾಗಿ ಉಲ್ಬಣಗೊಂಡು, ಮಧ್ಯಪ್ರಾಚ್ಯದಾದ್ಯಂತ ಅಸ್ಥಿರತೆಯನ್ನು ಹೆಚ್ಚಿಸಿದೆ. ಅಂತರರಾಷ್ಟ್ರೀಯ ಕಾನೂನಿನ ದೃಷ್ಟಿಕೋನದಿಂದ ನೋಡಿದರೆ, ಈ ಯುದ್ಧವು ಗಂಭೀರ ಕಳವಳಗಳನ್ನು ಹುಟ್ಟುಹಾಕುತ್ತದೆ. ವಿಶ್ವಸಂಸ್ಥೆಯ ಸನ್ನದಿನ (UN Charter) ಪ್ರಕಾರ, ಆತ್ಮರಕ್ಷಣೆಯ ಉದ್ದೇಶವಿಲ್ಲದೆ ಅಥವಾ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅನುಮೋದನೆಯಿಲ್ಲದೆ ಒಂದು ದೇಶ, ಮತ್ತೊಂದು ದೇಶದ ವಿರುದ್ಧ ಬಲಪ್ರಯೋಗ ಮಾಡುವುದನ್ನು ಸಾಮಾನ್ಯವಾಗಿ ನಿಷೇಧಿಸಲಾಗಿದೆ. ಹಾಗಾಗಿ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರು ಈ ದಾಳಿಯನ್ನು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ ಮತ್ತು ಅಪಾಯಕಾರಿ ಬೆಳವಣಿಗೆ ಎಂದು ಬಣ್ಣಿಸಿದ್ದಾರೆ. ಅದೇ ಸಮಯದಲ್ಲಿ, ಇರಾನ್‌ಗೆ ತನ್ನ ಸಾರ್ವಭೌಮತೆಯನ್ನು ಹಾಗೂ ಭದ್ರತೆಯನ್ನು ಕಾಪಾಡಾಲು ಹಕ್ಕೇ ಇಲ್ಲವೆಂಬಂತೆ, ಇರಾನ್‌ನ ಪ್ರತಿದಾಳಿಯ ಕ್ರಮಗಳನ್ನೂ ಅವರು ಟೀಕಿಸಿದ್ದಾರೆ. ಅಮೆರಿಕಾದ ಕೈಗೊಂಬೆಯಾಗಿರುವ ವಿಶ್ವ ಸಂಸ್ಥೆಯಿಂದ ಬೇರೇನು ನಿರೀಕ್ಷಿಸಲು ಸಾಧ್ಯ!!

ಇಂತಹ ಘಟನೆ ನಡೆಯುತ್ತಿರುವುದು ಇದೇ ಮೊದಲೇನಲ್ಲ. ಜೂನ್ 2025ರಲ್ಲಿಯೇ ಅಮೆರಿಕಾ, ಇರಾನ್‌ನ ಪರಮಾಣು ಮತ್ತು ಸೇನಾ ನೆಲೆಗಳ ಮೇಲೆ ದಾಳಿ ನಡೆಸಿತ್ತು. ತದನಂತರ ಮಾತುಕತೆಗಳು ನಡೆಯುತ್ತಿದ್ದು, ಇರಾನ್ ದೊಡ್ಡ ವಿನಾಯಿತಿಗಳನ್ನು ನೀಡುವ ವರದಿಗಳಿದ್ದರೂ, ಮತ್ತೊಮ್ಮೆ ಈಗ ಎರಡನೆಯ ಬಾರಿ ದಾಳಿ ಮಾಡಲಾಗಿದೆ. ದ್ವಿಪಕ್ಷೀಯ ಮಾತುಕತೆ ಎನ್ನುವುದು ಕೇವಲ ಮುಖವಾಡ ಮಾತ್ರ. ಅಮೆರಿಕಾದ ಇಚ್ಛಾನುಸಾರ ಇರಾನ್ ದೇಶವನ್ನು ಮಣಿಸುವುದೇ ನಿಜವಾದ ಉದ್ದೇಶವಾಗಿದೆ.

## ಇರಾನ್ ಅನ್ನು ಏಕೆ ಗುರಿಯಾಗಿಸಲಾಗುತ್ತಿದೆ ?

ವಂಚನೆಯಿಂದ ಇರಾಕ್ ಮೇಲೆ ಯುದ್ಧ ದಾಳಿಯನ್ನು ನಡೆಸಿದ ತರುವಾಯ ಅಮೆರಿಕಾ, ಇರಾನ್‌ಗೆ "ದುಷ್ಟ ರಾಷ್ಟ್ರ" (Rogue state) ಎಂಬ ಹಣೆಪಟ್ಟಿ ಕಟ್ಟಿತು. ಈ ಪಟ್ಟಿಯಲ್ಲಿ ಕ್ಯೂಬಾ, ಉತ್ತರ ಕೋರಿಯಾ ದೇಶಗಳು ಕೂಡ ಸೇರಿವೆ. ವಿಶ್ವಸಂಸ್ಥೆಯ ಬೆಂಬಲದೊಂದಿಗೆ ಇರಾನ್ ಮೇಲೆ ಅಮೆರಿಕಾ ಆರ್ಥಿಕ ದಿಗ್ಬಂಧನಗಳನ್ನು ಹೇರುತ್ತಾ ಬಂದಿದೆ, ಇರಾನ್ ಸುತ್ತಾ ತನ್ನ ಮಿಲಿಟರಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿದೆ, ಪರಮಾಣು ಶಸ್ತ್ರಾಸ್ತ್ರಗಳನ್ನು ತಯಾರಿಸಲು ಇರಾನ್ ಯತ್ನಿಸುತ್ತಿದೆ ಎಂದು ಆರೋಪಿಸುತ್ತಾ ಬಂದಿದೆ. ಇದರಿಂದಾಗಿ ಪಶ್ಚಿಮ ಏಷಿಯಾ 10ನೇ ಪುಟಕ್ಕೆ

## ಇಂಡಿಯಾ AI ಇಂಪ್ಯಾಕ್ಟ್ ಸಮ್ಮಿಟ್ 2026:

# ವಿಶ್ವದ ಎದುರು ಭಾರತ ನಗೆಪಾಟಲು

ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು 'ಇಂಡಿಯಾ AI ಮಿಷನ್' ಅಡಿಯಲ್ಲಿ, ಕಳೆದ ಫೆ. 16ರಿಂದ 21ರವರೆಗೆ ನವದೆಹಲಿಯ ಭಾರತ್ ಮಂಡಪಮ್‌ದಲ್ಲಿ ಇಂಡಿಯಾ AI ಇಂಪ್ಯಾಕ್ಟ್ ಶೃಂಗ 2026ನ್ನು ಆಯೋಜಿಸಿತ್ತು. ಈ ಶೃಂಗವು AI ಕ್ಷೇತ್ರದಲ್ಲಿ ಭಾರತವು ಮಾಡಿರುವ ಗಮನಾರ್ಹ ಸಾಧನೆಗಳ ಪ್ರದರ್ಶನ ಎಂದೆಲ್ಲಾ ತಮ್ಮ 'ಮನದ ಮಾತಿ'ನಲ್ಲಿ ಪ್ರಧಾನಿ ಮೋದಿ ಆಗ ಬಣ್ಣಿಸಿದ್ದರು. ಇಂತಹ ಅಬ್ಬರದ ಆಕಾಂಕ್ಷೆಯನ್ನು ಹೊತ್ತಿದ್ದಂತೆ ಕಂಡಿದ್ದ ಆ ಶೃಂಗದಲ್ಲಿ ನಡೆದದ್ದಾರೂ ಏನು?

### ಆಭಾಸಗಳ ಶೃಂಗ

ಪ್ರಧಾನಿಯ ಅಬ್ಬರದ ನಡುವೆ, ಗ್ರೇಟರ್ ನೋಯ್ಡಾದಲ್ಲಿರುವ ಗಾಲ್ಗೋಟಿಯಾಸ್ ವಿಶ್ವವಿದ್ಯಾಲಯದ ಸಂವಹನ ವಿಭಾಗದ ಬೋಧಕಿ ನೇಹಾ ಸಿಂಗ್, ಶೃಂಗದಲ್ಲಿ ತಮ್ಮ ವಿವಿಯ ಮಳಿಗೆಯಲ್ಲಿ ಪ್ರದರ್ಶನಕ್ಕಿಟ್ಟಿದ್ದ ನಾಲ್ಕು ಕಾಲಿನ ರೊಬೋಟ್‌ಅನ್ನು ತೋರುತ್ತಾ ಬಹಳ ಹೆಮ್ಮೆಯಿಂದ "ಇದನ್ನು ನಮ್ಮ ವಿವಿಯ ಸೆಂಟರ್ ಆಫ್ ಎಕ್ಸಲೆನ್ಸ್(ಸಿಓಇ) ಅಭಿವೃದ್ಧಿಪಡಿಸಿದೆ ಮತ್ತು ಅದರ ಹೆಸರು 'ಓರಿಯನ್'" ಎಂದು ಬೀಗಿದರು. ಇದು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ನಮ್ಮ ವಿವಿಯು ದಾಖಲಿಸಿರುವ ಸ್ವಂತ ಸಾಧನೆ ಎಂದರು. ಇದಾದ ಕೆಲವೇ ಘಂಟೆಗಳಲ್ಲಿ, ಎಕ್ಸ್ (ಟ್ವಿಟರ್) ಬಳಕೆದಾರರು ಈ ರೊಬೋಟ್ ಚೀನಾದ ಯೂನಿಟ್ರಿ ರೋಬೋಟಿಕ್ಸ್ ಕಂಪನಿಯ ಉತ್ಪನ್ನವಾದ 'ಯೂನಿಟ್ರಿ ಗೋ2' ಎಂದು, ಇದು ಮಾರುಕಟ್ಟೆಯಲ್ಲಿ ಸುಮಾರು 2–3 ಲಕ್ಷ ರೂಪಾಯಿಗಳಿಗೆ ಸುಲಭವಾಗಿ ಲಭ್ಯವಿದೆ ಎಂದು ಪತ್ತೆ ಮಾಡಿದರು. ಅಂದು ಸಂಶಯಕ್ಕೆ ಗುರಿಯಾದದ್ದು ಬರೀ ಆ ರೊಬೋಟ್ ನಾಯಿ ಮಾತ್ರ ಅಲ್ಲ, ಗಾಲ್ಗೋಟಿಯಾಸ್ ವಿವಿಯ ಕ್ಯಾಂಪಸ್‌ನಿಂದ ಪ್ರದರ್ಶಿಸಲ್ಪಟ್ಟಿದ್ದ ಫುಟ್ಬಾಲ್ ಆಡುವ ಡ್ರೋನ್ ಕೂಡ ಒಂದು. ಅದನ್ನು ಸ್ವದೇಶಿ ಉತ್ಪನ್ನ ಎಂದು ವಿವಿಯು ಪ್ರಸ್ತುತಪಡಿಸಿತ್ತು. ಆದರೆ, ದಕ್ಷಿಣ ಕೊರಿಯಾದ ಕಂಪನಿ ಹೆಲ್ಸೆಲ್ ಗ್ರೂಪ್ ವಿನ್ಯಾಸ ಮಾಡಿ, ಭಾರತದಲ್ಲಿ ರೂ.40,000ಕ್ಕೆ ಮಾರಾಟವಾಗುವ 'ಸ್ಟ್ರೈಕರ್ ವಿ3 ಎಆರ್‌ಎಫ್' ಮಾದರಿಯನ್ನು ಅತಿ ಹತ್ತಿರದಿಂದ ಹೋಲುತ್ತದೆ ಎಂಬ ಆರೋಪವನ್ನು ಅದು ಹೊತ್ತಿತ್ತು. ಸಾಮಾಜಿಕ ಜಾಲತಾಣದಲ್ಲಿ ಇವೆಲ್ಲ ದೊಡ್ಡ ಪ್ರಮಾಣದ ಅಪಹಾಸ್ಯಕ್ಕೆ ಗುರಿಯಾದವು. ಮುಖಭಂಗದಿಂದ ಬಚಾವಾಗಲು, ಪ್ರದರ್ಶನ ಮಳಿಗೆಯನ್ನು ಖಾಲಿ ಮಾಡಲು ಶೃಂಗದ ಆಯೋಜಕರು ವಿವಿಗೆ ಸೂಚಿಸಿದ್ದು, 'ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ' ಆಯಿತು. ಗಾಯ ವಾಸಿಯಾದರೂ ಕಲೆ ಉಳಿಯುವಂತೆ ಆ ಘಟನೆಯಿಂದಾದ ಅವಮಾನವು ಶಾಶ್ವತವಾಗಿ ದೇಶದ ಘನತೆಗೆ ಘಾಸಿ ಮಾಡಿದ್ದಂತೂ ಸತ್ಯ!

### ಗಾಲ್ಗೋಟಿಯಾಸ್‌ನ 'ಸಾಧನೆ'ಗಳನೇಕ!

ಇದೇ ವಿವಿಯಲ್ಲಿ ಈ ಹಿಂದೆ ನಡೆದಿದ್ದ ಅನೇಕ ತಲೆತಗ್ಗಿಸುವಂತಹ ಘಟನೆಗಳು ಆಗ ಮತ್ತೊಮ್ಮೆ ಬೆಳಕಿಗೆ ಬಂದವು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಮೀಮ್‌ಗಳಾಗಿ ಹರಿದಾಡಿದವು. ಕೊರೋನಾ ಸಾಂಕ್ರಾಮಿಕದ ಸಮಯದಲ್ಲಿ, ತಟ್ಟೆ ಬಡಿಯುವುದರಿಂದ ಮತ್ತು ಜಾಗಟೆ ಬಾರಿಸುವುದರಿಂದ ಹೊಮ್ಮುವ ಕಂಪನಗಳು ಕೊರೋನಾ ವೈರಾಣುವನ್ನು ಕೊಲ್ಲುತ್ತವೆ ಎಂದು ಗಾಲ್ಗೋಟಿಯಾಸ್ ವಿವಿಯ ಕೆಲ ಅಧ್ಯಾಪಕರು ಪ್ರಬಂಧವೊಂದನ್ನು ಪ್ರಕಟಿಸಿ ವ್ಯಾಪಕವಾಗಿ ಅಪಹಾಸ್ಯಕ್ಕೊಳಗಾದದ್ದು, ಬಹುಶಃ ಅದರ ಆಧಾರದ ಮೇಲೆಯೇ ಪ್ರಧಾನಿ ಮೋದಿ ಲಾಕ್‌ಡೌನ್ ಸಮಯದಲ್ಲಿ ಲೋಹದ ಪಾತ್ರೆಗಳನ್ನು ಬಡಿಯಲು ಕರೆ ನೀಡಿದ್ದರೇನೊ ಎಂಬಂತಹದ್ದು, 2024ರಲ್ಲಿ, ನವದೆಹಲಿಯಲ್ಲಿ 'ನಗರ ನಕ್ಸಲಿ'ಗಳು ಎಂದು ಕೆಲ ಬುದ್ಧಿಜೀವಿಗಳನ್ನು ಗುರಿಯಾಗಿಸಿಕೊಂಡು ನಡೆದ ಸಂಘ ಪರಿವಾರ ಪ್ರೇರಿತ ರಾಜಕೀಯ ಪ್ರತಿಭಟನೆಯಲ್ಲಿ ಗಾಲ್ಗೋಟಿಯಾಸ್‌ದ ಅಮಾಯಕ ವಿದ್ಯಾರ್ಥಿಗಳನ್ನು ದೂಡಿ, ಪತ್ರಕರ್ತರು ಅವರು ಹಿಡಿದಿದ್ದ ಫಲಕಗಳಲ್ಲಿ ಇದ್ದ ಘೋಷಣೆಗಳೇನು ಎಂದು ಕೇಳಿದಾಗ ಹಿಂದುಮುಂದು ತಿಳಿಯದ ಅವರು ಅದನ್ನು ಉಚ್ಚರಿಸಲೂ ಸಹ ತಡಬಡಾಯಿಸಿದ್ದೂ – ಹೀಗೆ ಹಲವು ಘಟನೆಗಳ ವಿಡಿಯೋ ಕ್ಲಿಪ್‌ಗಳ ಜೊತೆಯಲ್ಲಿ ಸಹಸ್ರಾರು ಮೀಮ್‌ಗಳು ವೈರಲ್ ಆದವು.

### ವಿವಾದದ ಛಾಯೆಯಡಿಯಲ್ಲಿಯೇ ಸ್ಥಾಪನೆಯಾದ ವಿವಿ

ರೊಬೋಟ್‌ಗಳು ಮತ್ತು ಡ್ರೋನ್‌ಗಳು ಹಾಗಿರಲಿ, ಈ ಸಂಸ್ಥೆಯ ಅಡಿಪಾಯವೇ ವಿವಾದದ ಸುಳಿಯಲ್ಲಿತ್ತು. ವಿವಿಯ ಸಂಸ್ಥಾಪಕ ಸುನೀಲ್ ಗಾಲ್ಗೋಟಿಯಾ ರೂ.120 ಕೋಟಿ ಸಾಲ ಪಡೆಯಲು ನಕಲಿ ದಾಖಲೆಗಳನ್ನು ಬಳಸಿದ್ದಾರೆ ಎಂಬ ಆರೋಪ ಅವುಗಳಲ್ಲಿ ಒಂದು. ಆದರೆ, ಪ್ರಧಾನಿ ಮೋದಿಯ ಆಶೀರ್ವಾದವನ್ನು ಪಡೆಯುವಲ್ಲಿ ಇವ್ಯಾವುವೂ ಅವರಿಗೆ ಅಡ್ಡಿಯಾಗಲಿಲ್ಲ. ಮೋದಿಯವರು ಈ ಹಿಂದೆ ಗಾಲ್ಗೋಟಿಯಾಸ್ ವಿವಿಯನ್ನು ಗುರುತಿಸಿ, ಡಿಕ್ಯೂ ಐಸಿಟಿ ಎಂಬ ಪ್ರಶಸ್ತಿಯನ್ನು ನೀಡಿದ್ದಲ್ಲದೆ, ಅದನ್ನು "ಅತ್ಯುತ್ತಮ" ಖಾಸಗಿ ವಿಶ್ವವಿದ್ಯಾಲಯ ಎಂದು ಬಣ್ಣಿಸಿದ್ದ ವರದಿಗಳಿವೆ. ವಿಶ್ವವಿದ್ಯಾಲಯವು ಪ್ರಧಾನಿ ಮೋದಿಯನ್ನು ಹಾಡಿ ಹೊಗಳುವ ಪ್ರದರ್ಶನಗಳನ್ನು ಆಯೋಜಿಸಿದ್ದಕ್ಕೂ ಹೆಸರಾಗಿದೆ. ತನ್ನ ಬೋಧನಾ ಮತ್ತು ಸಂಶೋಧನಾ ಕಾರ್ಯಗಳು ಪ್ರಧಾನಿ ಮೋದಿಯ 'ಆತ್ಮನಿರ್ಭರ ಭಾರತ'ದ ಕನಸನ್ನು ಆಧರಿಸಿವೆ ಎಂದು ಗಾಲ್ಗೋಟಿಯಾಸ್ ವಿವಿ ತನ್ನ ಡೋಲನ್ನು ತಾನೇ ಬಡಿದುಕೊಳ್ಳುತ್ತದೆ.

### ಹಾಸ್ಯಾಸ್ಪದ ಮಾತು

ಇಂತಹ ಸಂಸ್ಥೆಯು ಈ ಬಾರಿ ತನ್ನ ಸುಳ್ಳಿನ ಕುಣಿಕೆಯಲ್ಲಿ ತಾನೇ ಸಿಲುಕಿಕೊಂಡಾಗ, ಇಂತಹ ಸಂದರ್ಭಗಳಿಗೆಂದೇ ತಾನು ಸದಾ ಸಿದ್ಧವಾಗಿರಿಸಿಕೊಂಡಿರುವ ತನ್ನ ಹಳೆಯ ಸೂತ್ರವನ್ನೇ ಅದು ಬಳಸಿ ದಾಳ ಉರುಳಿಸಿತು. ಆಡಿದ ಮಾತನ್ನು "ಬಾಯ್ತಪ್ಪಿ ನುಡಿದದ್ದು", "ತಪ್ಪು ತಿಳುವಳಿಕೆ" ಎಂದು ಸಮಜಾಯಿಷಿ ನೀಡಿತು. ನಂತರ "ಗೊಂದಲಕ್ಕಾಗಿ ಕ್ಷಮೆ" ಯಾಚಿಸಿತು ಮತ್ತು ಕೊನೆಯಲ್ಲಿ, ನೇಹಾ ಸಿಂಗ್ ಮೇಲೆ ಗೂಬೆ ಕೂರಿಸಿ ಕ್ರಮವನ್ನೂ ಜರುಗಿಸಿತು. ಯಾರ ಹೆಸರನ್ನೂ ಹೇಳದೆ, "ಮಳಿಗೆಯಲ್ಲಿದ್ದ ನಮ್ಮ ಪ್ರತಿನಿಧಿಗಳಲ್ಲಿ ಒಬ್ಬರು ಸರಿಯಾದ ಮಾಹಿತಿ ಹೊಂದಿರಲಿಲ್ಲ" ಎಂದು ಸಬೂಬು ನೀಡಿತು. ಆದರೆ ANIಗೆ ನೀಡಿದ ಹೇಳಿಕೆಯಲ್ಲಿ ನೇಹಾ ಸಿಂಗ್, "ಅದು ನಿಮ್ಮ ನಿಮ್ಮ ದೃಷ್ಟಿಕೋನ! ನಿಮ್ಮ '6' ನನ್ನ ಪಾಲಿಗೆ '9' ಆಗಿ ಕಾಣಿಸಬಹುದು," ಎಂದು ಯಾವುದೋ ವಿಚಿತ್ರವಾದ ನಗೆಪಾಟಲಿನ ಸಮರ್ಥನೆ ನೀಡಿದ್ದೂ ಸಹ ನಡೆದುಹೋಯಿತು. ಜಾಗತಿಕಮಟ್ಟದ ಈ ಪ್ರದರ್ಶನದಲ್ಲಿ ದೇಶದ ಮಾನ ಹರಾಜಾಯಿತು, ಪ್ರಧಾನಿಯ ಪ್ರತಿಷ್ಠೆಯ ಸಂಕೇತವಾಗಿದ್ದ ಈ ಕಾರ್ಯಕ್ರಮದಲ್ಲಿ ಈ ಪರಿಯ ವಂಚನೆಗೆ ಹೇಗೆ ಅವಕಾಶ ದೊರಕಿತು, ಗಾಲ್ಗೋಟಿಯಾಸ್‌ಗೆ ಯೋಗ್ಯತೆಯ ಪ್ರಮಾಣ ನೀಡಿದವರು ಯಾರು, ಆ ವಿವಿಗೆ ಮೇಳದ ಬಾಗಿಲುಗಳನ್ನು ತೆರೆದವರು ಯಾರು ಎಂಬ ಅನೇಕ ಪ್ರಶ್ನೆಗಳಿಗಿನ್ನೂ ಉತ್ತರ ಮಾತ್ರ ದೊರಕಿಲ್ಲ.

### ಗಾಲ್ಗೋಟಿಯಾಸ್ –'ಅಮೃತಕಾಲ'ದ ಉತ್ಪತ್ತಿ

ಮಾಡಿದ ವಂಚಕ ಕೃತ್ಯಕ್ಕಿಂತ ಹೆಚ್ಚಾಗಿ, ವಂಚನೆ ಮಾಡಿ ಸಿಕ್ಕಿಬಿದ್ದಿದ್ದರಿಂದ ಮೋದಿ ಬ್ರಾಂಡ್‌ಗೆ ಧಕ್ಕೆಯಾಯಿತು ಎಂದು ಈಗ ಸರ್ಕಾರ ಮತ್ತು ಅದರ ವಿವಿಧ ಅಂಗಸಂಸ್ಥೆಗಳು ಗಡಿಬಿಡಿಯಿಂದ ಗಾಲ್ಗೋಟಿಯಾಸ್ ಮೇಲೆ ದೋಷಾರೋಪ ಮಾಡಿ, ತಮ್ಮ ಕೈತೊಳೆದುಕೊಳ್ಳಲು ಯತ್ನಿಸುತ್ತಿರುವುದನ್ನು ಕಾಣದಷ್ಟು ಜನರು ಅಮಾಯಕರೇ!

ಆದರೆ ಇದು ಕೇವಲ ಗಾಲ್ಗೋಟಿಯಾಸ್‌ನ ತಪ್ಪೇ? ಕೌರವರ ಜನ್ಮವೇ ನಮ್ಮಲ್ಲಿ ಸ್ಟೆಮ್‌ಸೆಲ್ ತಂತ್ರಜ್ಞಾನ ಗತಕಾಲದಲ್ಲೇ ಇತ್ತು ಎಂಬುದಕ್ಕೆ ಸಾಕ್ಷಿ ಎಂದು ಅಥವಾ ಗಣೇಶನಿಗೆ ಆನೆಯ ತಲೆ ಜೋಡಿಸಿದ್ದು ದೈವಿಕ ಶಸ್ತ್ರಚಿಕಿತ್ಸಕರಿಂದ ನಡೆದ ಮೊದಲ ಅಂಗಾಂಗ ಕಸಿ ಎಂದು ಪ್ರಧಾನಿಯವರೇ ಹೇಳುತ್ತಾ ಪ್ರಚಾರ ಮಾಡುವಾಗ ಇಂತಹ ಖಾಸಗಿ ವಿವಿಗಳಿಂದ ನಾವಿನ್ನೇನನ್ನು ತಾನೇ ನಿರೀಕ್ಷಿಸಲು ಸಾಧ್ಯ? ಪುರಾಣ ಮತ್ತು ಪ್ರಾಯೋಗಿಕವಾಗಿ ಸಾಬೀತಾದ ಸತ್ಯದ ನಡುವಿನ ಗಡಿಯನ್ನು ಇಂದು ಅಳಿಸಿ ಹಾಕಲಾಗುತ್ತಿದೆ. 'ಚರಂಡಿಯಿಂದ ಹೊರಬರುವ ಅನಿಲವನ್ನು ಬಳಸಿ ಟೀ ತಯಾರಿಸಬಹುದು' ಎಂದು ಪ್ರಧಾನಿ ಹೇಳುತ್ತಿರುವಾಗ, ವಿವಿಯೊಂದು ಸತ್ಯದ ಕಟ್ಟಳೆಗೆ ಬದ್ಧವಾಗಿರಬೇಕು ಎಂಬ ಮಾತು (ಕು)ತಾರ್ಕಿಕವಲ್ಲವೇ?! ಉನ್ನತ ಶೈಕ್ಷಣಿಕ, ಸಂಶೋಧನಾ ಸಂಸ್ಥೆಗಳಲ್ಲಿ ಪ್ರಾಯೋಗಿಕ ವಿಜ್ಞಾನದ ಸ್ಥಾನವನ್ನು ರಮಣೀಯ ಕಲ್ಪನೆಯು ಆಕ್ರಮಿಸಿಕೊಂಡಾಗ, ಗಾಲ್ಗೋಟಿಯಾಸ್‌ಗಳಂತಹ ಘಟನೆಗಳು ಮತ್ತೆ ಮತ್ತೆ ಜರುಗುತ್ತವೆ.

ಹಾಗಾಗಿ, ಗಾಲ್ಗೋಟಿಯಾಸ್ ಒಂದು ಪ್ರತ್ಯೇಕ ಘಟನೆಯೇನಲ್ಲ. ಬದಲಾಗಿ, ಅದು ಇಡೀ ಶೈಕ್ಷಣಿಕ ವ್ಯವಸ್ಥೆಯ ಕೊಳೆತದ ಹೆಗ್ಗುರುತಾಗಿದೆ. ಸರ್ಕಾರವು ತಾನೇ ಇಟ್ಟುಕೊಂಡಿರುವ ಯಾವುದೋ ರ್‍ಯಾಂಕಿಂಗ್ ಆಧಾರದ ಮೇಲೆ ಶಿಕ್ಷಣ ಸಂಸ್ಥೆಗಳಿಗೆ ತನಗೆ ಬೇಕಾದಂತೆ ಅನುದಾನ ನೀಡುತ್ತಿರುವುದರಿಂದ, ವಿವಿಧ ಪದವಿಗಳ ಲಾಲಸೆ ತೋರಿಸುವ ಕ್ಯಾಂಪಸ್‌ಗಳು ನಾಯಿಕೊಡೆಗಳಂತೆ ತಲೆಯೆತ್ತುತ್ತಿವೆ. ದಶಕಗಳ ಕಾಲ ಶೈಕ್ಷಣಿಕ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿರುವ ಸಂಸ್ಥೆಗಳು ಸರ್ಕಾರದ ಕೃಪಾದೃಷ್ಟಿಗೆ ಹಾತೊರೆಯುತ್ತಾ, ಕನಿಷ್ಠ ಮೊತ್ತದ ಅನುದಾನಕ್ಕೆ ಪರಿತಪಿಸುತ್ತಿರುವಾಗ ಮೋದಿಯವರ ಪರಮಾಪ್ತ ಅಂಬಾನಿಯ ಒಡೆತನದ ಜಿಯೋ ಇನ್‌ಸ್ಟಿಟ್ಯೂಟ್ ಇನ್ನೂ ಸರಿಯಾಗಿ ಅಸ್ತಿತ್ವಕ್ಕೆ ಬರದಿದ್ದರೂ ಸಹ ಅದಕ್ಕಾಗಲೇ 'ಇನ್‌ಸ್ಟಿಟ್ಯೂಟ್ ಆಫ್ ಎಮಿನೆನ್ಸ್' ಎಂಬ ಟ್ಯಾಗ್‌ನ್ನು ನೀಡಿದ 'ಹೆಗ್ಗಳಿಕೆ' ಮೋದಿ ಸರ್ಕಾರದ್ದು. ಸುನೀಲ್ ಗಾಲ್ಗೋಟಿಯಾ ಮತ್ತು ಆತನ ಪುತ್ರ ಧ್ರುವ್ ಗಾಲ್ಗೋಟಿಯಾರನ್ನು ಪ್ರಧಾನಿ ಮೋದಿಯವರ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಗಣ್ಯರಾಗಿ ಆಹ್ವಾನಿಸಲಾಗಿತ್ತು. ಹಲವಾರು ಬಿಜೆಪಿಯ ಕಾರ್ಯಕ್ರಮಗಳನ್ನೂ ಸಹ ಗಾಲ್ಗೋಟಿಯಾಸ್ ಆಯೋಜಿಸಿದೆ. ಪ್ರಧಾನಿ ಮೋದಿ ಮತ್ತು ಉತ್ತರಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ್‌ರ ಹೊಗಳಿಕೆಯನ್ನೇ ಗಾಲ್ಗೋಟಿಯಾಸ್ ತನ್ನ ಅಸ್ತಿತ್ವದ ಆಧಾರವನ್ನಾಗಿಸಿಕೊಂಡಿದೆ. ಉತ್ತರಪ್ರದೇಶದ ಸಚಿವ ಯೋಗೇಂದ್ರ ಉಪಾಧ್ಯಾಯ, ಬಿಜೆಪಿ ವಕ್ತಾರ ಸಂಬಿತ್ ಪಾತ್ರ, ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್‌ರಂತಹವರೆಲ್ಲಾ ಈ ಸಂಸ್ಥೆಯ ಅನೇಕ ಕಾರ್ಯಕ್ರಮಗಳಲ್ಲಿ ಸ್ವತ: ಭಾಗವಹಿಸಿದ್ದಾರೆ. 2021ರ ಫೆಬ್ರುವರಿ 17–18ರಂದು, ಅಂದಿನ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಉಪಸ್ಥಿತರಿದ್ದ ಸಮಾರಂಭದಲ್ಲಿ, ವಿಶ್ವವಿದ್ಯಾಲಯವು ತನ್ನ ಪಠ್ಯಕ್ರಮದಲ್ಲಿ ಭಾರತೀಯ ಜ್ಞಾನ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗುತ್ತದೆಂದು ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಯ 12–ಹಂತದ ಮಾರ್ಗಸೂಚಿಯನ್ನು ಜಾರಿಗೆ ತರಲಾಗುತ್ತದೆಂದು ಪ್ರತಿಜ್ಞೆ ಮಾಡಿತ್ತು. 2024ರ ನವೆಂಬರ್‌ನಲ್ಲಿ, ಗಲ್ಗೋಟಿಯಾಸ್ ವಿಶ್ವವಿದ್ಯಾಲಯವು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಉಪಸ್ಥಿತಿಯಲ್ಲಿ ಆರ್‌ಎಸ್‌ಎಸ್ ಅಂಗಸಂಸ್ಥೆಯಾದ ಭಾರತೀಯ ಶಿಕ್ಷಣ ಮಂಡಲ ಆಯೋಜಿಸಿದ್ದ VIVIBHA 2024ರಲ್ಲಿ ಭಾಗವಹಿಸಿತ್ತು.

### ಫ್ಯಾಸೀವಾದದ ನೆಲೆಯನ್ನು ಭದ್ರಪಡಿಸುವ ಪ್ರಯತ್ನ

ಭಾರತದಲ್ಲಿ ಇಂದು ಶಿಕ್ಷಣವು ಅಪಾಯದಲ್ಲಿದೆ. ಶಿಕ್ಷಣವನ್ನು ವಿರೂಪಗೊಳಿಸಿ, ಅದರ ನೈಜ ಸಾರವನ್ನು ಹೀರಿ ತೆಗೆದು ಹಾಕಿ, ಅದನ್ನು ಮಾರಾಟದ ಸರಕನ್ನಾಗಿಸಲಾಗುತ್ತಿದೆ. ಇದೇ ಬಿಜೆಪಿ ಸರ್ಕಾರದ ಧ್ಯೇಯವಾಗಿದೆ. ತಂತ್ರಜ್ಞಾನದಲ್ಲಿ ಬಹಳ ಮುಂದುವರೆಯುತ್ತಿದ್ದೇವೆ ಎಂದು ತೋರಿಸಿಕೊಳ್ಳುವ ಅಬ್ಬರದಲ್ಲಿ ದೇಶವನ್ನು ವಿಶ್ವದ ಮುಂದೆ ನಗೆಪಾಟಲಿಗೀಡು ಮಾಡಲಾಗುತ್ತಿದೆ. ಈ ಎಲ್ಲಾ ಹಾಸ್ಯ–ಅಪಹಾಸ್ಯಗಳ ನಡುವೆ ವಿಜ್ಞಾನದ ತಾಂತ್ರಿಕ ಅಂಶಗಳನ್ನು ಆಧ್ಯಾತ್ಮಿಕತೆಯೊಂದಿಗೆ ಬೆಸೆಯುವ ಸಂಘಟಿತ ಪ್ರಯತ್ನವೂ ಸಹ ಯಾವುದೇ ಅಡೆತಡೆಯಿಲ್ಲದೆ ನಡೆದಿದೆ. ಇದು ನಾಳೆ ನಮ್ಮ ದೇಶದಲ್ಲಿ ಫ್ಯಾಸೀವಾದಕ್ಕೆ ಸಾಂಸ್ಕೃತಿಕ ನೆಲೆಯನ್ನು ಒದಗಿಸಬಲ್ಲದು. ಗಾಲ್ಗೋಟಿಯಾಸ್‌ನಂತಹ ವಿಶ್ವವಿದ್ಯಾಲಯಗಳನ್ನು ಉತ್ತೇಜಿಸುವ ಮತ್ತು ಇತರರ ಆವಿಷ್ಕಾರಗಳನ್ನು ನಮ್ಮ ಆವಿಷ್ಕಾರಗಳು ಎಂದು ಪ್ರತಿಪಾದಿಸುವವರ ಹಿಂದಿನ ದುರುದ್ದೇಶವನ್ನು ನಾವು ಇಂದು ಮರೆಯುವಂತೆಯೇ ಇಲ್ಲ.

---

ನಮ್ಮ ಪಕ್ಷ ಎಸ್‌ಯುಸಿಐ(ಸಿ), ಪಶ್ಚಿಮ ಬಂಗಾಲ, ಅಸ್ಸಾಂ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ 2026ರ ಏಪ್ರಿಲ್‌ನಲ್ಲಿ ನಡೆಯುತ್ತಿರುವ/ನಡೆದ 4 ಅಸೆಂಬ್ಲಿ ಚುನಾವಣೆಗಳಲ್ಲಿ ಸ್ಪರ್ಧಿಸಿದೆ. ಇದರ ಮುಖ್ಯ ಉದ್ದೇಶ, ಎಡ ಮತ್ತು ಪ್ರಜಾತಾಂತ್ರಿಕ ಜನಾಂದೋಲನಗಳನ್ನು ಎತ್ತಿ ಹಿಡಿಯುವುದೇ ಆಗಿದೆ.

| | | |
|---|---|---|
| ಪಶ್ಚಿಮ ಬಂಗಾಲ | 230 | ಕ್ಷೇತ್ರಗಳು |
| ಅಸ್ಸಾಂ | 42 | ಕ್ಷೇತ್ರಗಳು |
| ಕೇರಳ | 34 | ಕ್ಷೇತ್ರಗಳು |
| ತಮಿಳುನಾಡು | 04 | ಕ್ಷೇತ್ರಗಳು |
| ಪುದುಚೇರಿ | 01 | ಕ್ಷೇತ್ರ |

ಕಾರ್ಮಿಕ ದೃಷ್ಟಿಕೋನ -ಮಾಸಿಕ ಪತ್ರಿಕೆ

WhatsApp channel

'ಕಾರ್ಮಿಕ ದೃಷ್ಟಿಕೋನ – ಮಾಸಿಕ ಪತ್ರಿಕೆ'ಯನ್ನು ವಾಟ್ಸಾಪ್ ಚಾನೆಲ್‌ನಲ್ಲಿ ಓದಲು ಈ ಮೇಲಿನ QR ಕೋಡ್ ಅನ್ನು ಬಳಸಿ.

# ಇಂದೋರ್ : 'ಸ್ವಚ್ಛ ನಗರ'ದ ಅಡಿಯಲ್ಲಿ ಪ್ರಾಣಾಂತಿಕ 'ಜಲ'ಧಾರೆ!

ಮಧ್ಯಪ್ರದೇಶದ ಇಂದೋರ್‌ನ ಭಾರತದ ಅತ್ಯಂತ 'ಸ್ವಚ್ಛ ನಗರ' ಎಂಬ ಖ್ಯಾತಿ, ಇತ್ತೀಚೆಗೆ ಹದಗೆಟ್ಟ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಿಂದ ಕುಸಿದಿದೆ. ಇಂದೋರ್‌ನ ಭಗೀರಥಪುರವು ಅತ್ಯಂತ ಪುರಾತನ ಹಾಗೂ ಜನಸಂದಣಿಯ ಪ್ರದೇಶವಾಗಿದ್ದು ಅಲ್ಲಿನ ಮುನ್ಸಿಪಾಲಿಟಿಯ ಕುಡಿಯುವ ನೀರು ಹೊಲಸು ವಾಸನೆಯಿಂದ ಕೂಡಿದ್ದು ಕೆಟ್ಟಬಣ್ಣ ಹೊಂದಿದೆ ಎಂದು ದೀರ್ಘಕಾಲದಿಂದಲೂ ಜನ ದೂರುತ್ತಿದ್ದರು. ಇದೀಗ, ಅಲ್ಲಿನ ಒಳಚರಂಡಿಗಳ ನೀರು ಕುಡಿಯುವ ನೀರಿನೊಂದಿಗೆ ಬೆರೆತು ಕಲುಷಿತಗೊಂಡ ಪರಿಣಾಮವಾಗಿ, ಜನರು ತೀವ್ರವಾದ ವಾಂತಿ–ಭೇದಿ, ನಿರ್ಜಲೀಕರಣ, ಸುಸ್ತು, ಹೊಟ್ಟೆನೋವಿನಿಂದ ಬಳಲಿ ಬಹುದೊಡ್ಡ ಸಂಖ್ಯೆಯಲ್ಲಿ ಆಸ್ಪತ್ರೆಗೆ ದಾಖಲಾದರು. ಸಾವು ನೋವುಗಳಿಗೆ ಜೀವ ತೆತ್ತರು!

ಅಲ್ಲಿನ ಆಡಳಿತರೂಢ ಬಿಜೆಪಿ ಸರ್ಕಾರವು ಗಾಢ ನಿದ್ರೆಯಿಂದ ಎಚ್ಚರಗೊಳ್ಳುವಷ್ಟರಲ್ಲಿ, ಕನಿಷ್ಠ 8 ಜನರು ಸಾವನಪ್ಪಿದ್ದರು, ಸರಿಸುಮಾರು 300 ಜನರು ಆಸ್ಪತ್ರೆಗೆ ದಾಖಲಾಗಿದ್ದರು! ಕೇವಲ 10 ದಿನಗಳಲ್ಲಿ 2800 ಮಂದಿ ರೋಗಪೀಡಿತರಾಗಿದ್ದು, ಸಮಸ್ಯೆಯ ತೀವ್ರತೆಯನ್ನು ಬಹಿರಂಗಗೊಳಿಸಿದೆ. ದೊಡ್ಡ ಸಂಖ್ಯೆಯಲ್ಲಿ ಮಕ್ಕಳು ಮತ್ತು ವೃದ್ಧರು ಸಂತ್ರಸ್ತರಾದರು. ತಾಯಿಯೊಬ್ಬಳು ತನ್ನ ಐದು ತಿಂಗಳ ಮಗುವಿಗೆ ನೀರು ಮಿಶ್ರಿತ ಹಾಲನ್ನುಣಿಸಿದಾಗ ಮಗು ಅಸುನೀಗಿತು. ಆ ತಾಯಿಗೆ ಸುಮಾರು 10 ವರ್ಷಗಳ ನಂತರ ಹುಟ್ಟಿದ ಮಗು ಅದಾಗಿತ್ತು! 26 ಜನವರಿ 2026ರಂದು ದೇಶದಲ್ಲಿ ಒಂದೆಡೆ ಗಣರಾಜ್ಯೋತ್ಸವವನ್ನು ಅತ್ಯಂತ ವೈಭವ ಹಾಗೂ ವಿಜೃಂಭಣೆಯಿಂದ ಆಚರಿಸುತ್ತಿದ್ದರೆ, ಮತ್ತೊಂದೆಡೆ ಕಲುಷಿತ ನೀರಿನಿಂದ ಪ್ರಾಣ ಬಿಡುತ್ತಿದ್ದವರ ಸಂಖ್ಯೆ 25ರ ಗಡಿ ದಾಟುತ್ತಿತ್ತು!

ಕುಡಿಯುವ ನೀರಿನ ಸರಬರಾಜಿನ ಅವ್ಯವಸ್ಥೆ ಹಾಗೂ ಸರ್ಕಾರದ ಸಂಪೂರ್ಣ ನಿರ್ಲಕ್ಷ್ಯವೇ ಈ ದುರಂತಕ್ಕೆ ಪ್ರಮುಖ ಕಾರಣವೆಂದು ತನಿಖೆಯಿಂದ ತಿಳಿದು ಬಂದಿದೆ. ಕುಡಿಯುವ ನೀರಿನ ಮುಖ್ಯ ಪೈಪ್‌ಲೈನ್‌ಗಳು ಸಾರ್ವಜನಿಕ ಶೌಚಾಲಯದ ಅಡಿಯಲ್ಲಿ ಹಾಯ್ದು ಹೋಗಿದ್ದು, ಶೌಚಾಲಯಗಳಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಇರಬೇಕಿದ್ದ ಸೆಪ್ಟಿಕ್ ಟ್ಯಾಂಕ್‌ಗೆ ಹೊದಿಕೆ ಮತ್ತು ಸೂಕ್ತ ಶೇಖರಣೆಯ ವ್ಯವಸ್ಥೆ ಇಲ್ಲದ ಕಾರಣ, ಶೌಚಾಲಯದ ಹಳೆಯ ಪೈಪ್‌ಲೈನ್ ಸೋರಿಕೆಯಿಂದ ಹೊಲಸು ನೀರು ಕುಡಿಯುವ ನೀರಿನೊಂದಿಗೆ ಬೆರೆತಿದೆ. ಈ ಕಲುಷಿತಗೊಂಡ ನೀರನ್ನೇ ಸಾವಿರಾರು ಮನೆಗಳಿಗೆ ಹರಿಸಲಾಗಿದೆ.

ಕುಡಿಯುವ ನೀರಿನಲ್ಲಿ ಫೀಕಲ್ ಕೋಲಿಫಾರ್ಮ್ (fecal coliform), ಇ ಕೊಲಿ (Ecoli), ಸೂಡೊಮೊನಾಸ್ ಎರುಜಿನೊಸಾ (pseudomonas erugenisa), ಮುಂತಾದ ಜೀವಕ್ಕೆ ಕುತ್ತು ತರುವ ವಿಷಕಾರಕ ಬ್ಯಾಕ್ಟೀರಿಯಾಗಳು ಇದ್ದುದ್ದಾಗಿ ತನಿಖೆಯಿಂದ ತಿಳಿದುಬಂದಿದೆ. ಇಲ್ಲಿನ ಜನರು ದಿನಕ್ಕೆ ಕೇವಲ ಒಂದು ಗಂಟೆ ಮಾತ್ರ ತಮ್ಮ ಕೊಳಾಯಿಗಳಿಂದ ಕುಡಿಯುವ ನೀರನ್ನು ಪಡೆದುಕೊಳ್ಳುತ್ತಿದ್ದುದು. ಅದಾದ ಮೇಲೆ ನೀರಿನ ಹರಿವಿನ ಒತ್ತಡವು ಕಡಿಮೆ ಆಗುತ್ತಿದ್ದರಿಂದ ಕೊಳಾಯಿಗಳಿಂದ ನೀರು ಕ್ರಮೇಣ ನಿಂತು ಹೋಗುತ್ತಿತ್ತು. ಇದು ಸರಿಯಾದ ಸಮಯಕ್ಕೆ ಈ ಸಮಸ್ಯೆಯ ಕಡೆ ಗಮನ ಹರಿಸದೆ ಬಹುಕಾಲದಿಂದಲೂ ಅದನ್ನು ಮುಂದೂಡಿದಿರುವುದನ್ನು ತೋರಿಸುತ್ತದೆ. ಯಾವಾಗ ಕೊಳಾಯಿಗಳಿಂದ ಕಲುಷಿತ ನೀರು ಹರಿಯತೊಡಗಿತೋ ಅದಾಗಲೇ ಸಮಸ್ಯೆ ಎಲ್ಲೆ ಮೀರಿತ್ತು ಎಂದೇ ಹೇಳಬಹುದು. ನೀರಿನ ಗುಣಮಟ್ಟದ ಬಗ್ಗೆ ಅಲ್ಲಿನ ಜನರು ನಿರಂತರವಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು, ಚುನಾಯಿತ ಮಂತ್ರಿಗಳನ್ನು, ಕೌನ್ಸಿಲರ್ ಹಾಗೂ ಮೇಯರ್‌ಗಳನ್ನು ಭೇಟಿ ಮಾಡಿ ತಿಳಿಸಿದ್ದಾಗ್ಯೂ, ಯಾರೊಬ್ಬರೂ ಇಂತಹ ಗಹನವಾದ ಸಮಸ್ಯೆಯ ಬಗ್ಗೆ ಗಮನವನ್ನು ಕೊಡದೆ ಹೋದರು.

ಆದ್ದರಿಂದ ಭಗೀರಥಪುರ ದುರಂತವು ಅಚಾನಕವಲ್ಲ. ಇದೊಂದು ದೀರ್ಘಕಾಲದಿಂದಲೂ ಸರಿಯಾದ ಮೇಲ್ವಿಚಾರಣೆ ವಹಿಸದ ಲೋಪಗಳಿಂದಲೇ ಸಂಭವಿಸಿದ ದುರಂತವಾಗಿದೆ. 1993–94ರಲ್ಲಿ ವಿದೇಶಿ ಸ್ಲಂ ವಿಸ್ತರಣಾ ಪ್ರಾಜೆಕ್ಟ್ ಅಡಿಯಲ್ಲಿ ಈ ಪ್ರದೇಶಕ್ಕೆ ಪೈಪ್‌ಗಳನ್ನು ಅಳವಡಿಸಲಾಗಿತ್ತು. ಬಹುತೇಕ ಎಲ್ಲವೂ ಆಸ್‌ಬೆಸ್ಟಾಸ್ ಅಥವಾ ಸಿಮೆಂಟ್ ಪೈಪ್‌ಗಳಾಗಿದ್ದವು. ಅವು ಒಡೆದು ಹೋದಾಕ್ಷಣ ಹಾನಿಕಾರಕ ಅಂಶಗಳು ಬೆರೆತಿವೆ. ಪ್ರಾಜೆಕ್ಟ್ ಉದಯ್(ಫೇಸ್ 3) 2008ರಲ್ಲಿ ನಿಯಮದ ಪ್ರಕಾರ 360 ಎಂಎಲ್‌ಡಿ(ಮಿಲಿಯನ್ ಲೀಟರ್ಸ್ ಪರ್ ಡೇ) ನರ್ಮದಾ ನೀರನ್ನು ಇಂದೋರ್‌ನ ನೀರಿನ ಸರಬರಾಜು ವ್ಯವಸ್ಥೆಗೆ ಸೇರಿಸಲಾಯಿತು. ಆದರೆ ಅದಕ್ಕೆ ಪೂರಕವಾದ ಆಧುನಿಕ ಸಲಕರಣೆಯುಳ್ಳ ಸೌಲಭ್ಯಗಳನ್ನು ಒದಗಿಸದೆ ಇಡೀ ನಗರವನ್ನು ಎರಡು ವಿಭಾಗಗಳನ್ನಾಗಿ ಮಾಡಲಾಯಿತು. ಅತ್ಯಾಧುನಿಕ ಪೈಪ್‌ಲೈನ್ ಒಂದೆಡೆ ಮತ್ತು ಹಳೆಯ ಪೈಪ್‌ಲೈನ್‌ಗಳು ಮತ್ತೊಂದೆಡೆ. ಇದು, ಹೆಚ್ಚುತ್ತಿದ್ದ ಜನಸಂಖ್ಯೆಗೆ ಅನುಗುಣವಾಗಿ ಅವಶ್ಯಕವಿದ್ದ ಒತ್ತಡ ನಿರ್ವಹಣೆಯನ್ನು ಮಾಡಲು ಅಸಮರ್ಥವಾಯಿತು. ನಿರಂತರ ನೀರಿನ ಹರಿವಿಗೆ ಆಧುನಿಕ ನಗರ ಪ್ರದೇಶದಲ್ಲಿ ಅತ್ಯಾಧುನಿಕ ಎಚ್‌ಡಿಪಿಇ(ಹೈ ಡೆನ್ಸಿಟಿ ಪಾಲಿತೀನ್ ಪೈಪ್‌ಲೈನ್)ಗಳನ್ನು ಅಳವಡಿಸಿದರು. ಆದರೆ ಬಡಜನರು ವಾಸವಿದ್ದ ಹಾಗೂ ಹಳೆಯ ಪ್ರದೇಶಗಳಲ್ಲಿ ಇಂತಹ ಸೌಲಭ್ಯಗಳನ್ನು ಒದಗಿಸದೆ ಅವರನ್ನು ವಂಚಿತರನ್ನಾಗಿಸಿದರು. 2018ರ ಸಿಎಜಿ ಆಡಿಟಿಂಗ್ ಇಂದೋರ್‌ನ ಮುನ್ಸಿಪಾಲಿಟಿ ಕಾರ್ಪೊರೇಶನ್ ನೀರನ್ನು ಪರೀಶೀಲನೆಮಾಡಿ ಇದರಲ್ಲಿ ಫೀಕಲ್ ಕೋಲಿಫಾರ್ಮ್ ಮತ್ತು ಬೇರೆ ವಿಷಕಾರಕ ಅಂಶಗಳಿರುವುದನ್ನು ತಿಳಿಸಿದೆ. ಇದು ಎಚ್ಚರಿಕೆಯ ಗಂಟೆಯಾಗಬೇಕಿತ್ತು. ತಕ್ಷಣ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಬೇಕಿತ್ತು. ಆದರೆ ಬದಲಿ ಪೈಪ್‌ಲೈನ್ ಜೋಡಣೆ ಆಮೆಗತಿಯಲ್ಲಿ ಸಾಗಿತು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಂದೋರ್ ಮುನ್ಸಿಪಾಲಿಟಿ ಕಾರ್ಪೊರೇಶನ್, ತನ್ನ ಬಜೆಟ್‌ನ ಸುಮಾರು 25–30% ಅನ್ನು, ನೀರು ಹಾಗೂ ಒಳಚರಂಡಿ ವ್ಯವಸ್ಥೆಗೆ ಮೀಸಲಿಟ್ಟಿದೆ. ಇದರೊಂದಿಗೆ ಎಡಿಬಿ(ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್)ನ ಹಣಕಾಸಿನ ಬೆಂಬಲವೂ ಇದೆ. ಅಮೃತ್– AMRUT(Atal Mission for Rejuvenation and Urban Transformation) ಅನ್ನು 2015ರಲ್ಲಿ ಬಿಜೆಪಿ ಸರ್ಕಾರ ಪ್ರಾರಂಭಿಸಿತು. ಇದರ ಮುಖ್ಯ ಉದ್ದೇಶವು ಸರಿಯಾದ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ, ಸಾರಿಗೆ ವ್ಯವಸ್ಥೆ ಮತ್ತು ಹಸಿರು ಪ್ರದೇಶವನ್ನು ಖಾತ್ರಿಪಡಿಸುವುದಾಗಿದೆ. ಇದರೊಂದಿಗೆ SPML ಇನ್ಫ ಲಿಮಿಟೆಡ್ ಎಂಬ ಖಾಸಗಿ ಕಂಪನಿಯು 1073 ಕೋಟಿ ರೂ. ಮೊತ್ತದ ಪ್ರಾಜೆಕ್ಟ್‌ಅನ್ನು ಅಮೃತ್ ಯೋಜನೆ ಅಡಿ ನೀರಿನ ಸರಬರಾಜನ್ನು ಹೆಚ್ಚಿಸುವುದಕ್ಕಾಗೇ ನೀಡಿದೆ. ಇದಾಗಿಯೂ ಇಂತಹ ದುರಂತ!

ಇದಕ್ಕೆ ಸಂಬಂಧಿಸಿದಂತೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ರಾಜ್ಯವು ಹೇಳಿದುದೇನೆಂದರೆ, 'ಹಳೆಯ ಪೈಪ್‌ಲೈನ್‌ಗಳು ಹಲವೆಡೆ ಮುಂದುವರೆದರೂ ಶೆ.80ರಷ್ಟು ಕೆಲಸ ಪರಿಪೂರ್ಣಗೊಂಡಿದೆ. ಹೊಸ ಪೈಪ್‌ಲೈನ್‌ಗಳನ್ನು ನಿಧಾನವಾಗಿ ಅಳವಡಿಸಲಾಗುತ್ತಿದೆ' ಎಂದು. ಆದರೆ ನಿಧಾನವಾಗಲು ಕಾರಣವೇನೆಂದು ತಿಳಿಸಲಿಲ್ಲ. ಉಚ್ಚ ನ್ಯಾಯಾಲಯವು ಪ್ರತಿಕ್ರಿಯಿಸಿ, ಒಂದು ಮುಖ್ಯವಾದ ಸಂವಿಧಾನಕ ಅಂಶವನ್ನು ಎತ್ತಿಹಿಡಿದು, ಸ್ವಚ್ಛ ಕುಡಿಯುವ ನೀರು ಆರ್ಟಿಕಲ್ 21 ಅಡಿ 'ಜೀವದ ಹಕ್ಕುಗಳಲ್ಲಿ ಒಂದಾಗಿದೆ' ಎಂದಿದೆ. ಹಾಗೆಯೇ ಸಂಬಂಧಪಟ್ಟ ಅಧಿಕಾರಿಗಳಿಗೆ, ಕರ್ತವ್ಯ ನಿರ್ಲಕ್ಷಿಸಿದವರಿಗೆ ಛೀಮಾರಿ ಹಾಕಿ ತಕ್ಷಣವೇ ಜನರಿಗೆ ಸ್ವಚ್ಛ ಕುಡಿಯುವ ನೀರನ್ನು, ಸಂತ್ರಸ್ತರಿಗೆ ಅವಶ್ಯಕ ಆರೋಗ್ಯ ಸೌಲಭ್ಯಗಳನ್ನು ಒದಗಿಸುವಂತೆ ಹಾಗೂ ಪಾರದರ್ಶಕ ತುರ್ತು ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ತಾಕೀತು ಮಾಡಿದೆ.

ಕಲುಷಿತ ನೀರು, ಆಡಳಿತದ ವೈಫಲ್ಯವನ್ನು ಮುನ್ನೆಲೆಗೆ ತಂದರೆ, ಆಳ್ವಿಕರ ಪ್ರತಿಕ್ರಿಯೆ ಅವರ ನೈತಿಕ ದಿವಾಳಿತನವನ್ನು ಬಯಲುಗೊಳಿಸಿದೆ. ಸ್ಥಳೀಯ ಎಂಎಲ್‌ಎ ಮತ್ತು ಕ್ಯಾಬಿನೆಟ್ ಸಚಿವ, ಕೈಲಾಶ್ ವಿಜಯವರ್ಗೀಯ ಅವರಿಗೆ, ಸಾರ್ವಜನಿಕವಾಗಿ ಅವರ ಸರ್ಕಾರ ನೀಡಿದ ಭರವಸೆಗಳನ್ನು ಕುರಿತು, ದೊಡ್ಡ ಸಂಖ್ಯೆಯಲ್ಲಿ ಸಂತ್ರಸ್ತ ಕುಟುಂಬಗಳಿಗೆ ಇನ್ನೂ ಪರಿಹಾರ ಸಿಗದಿರುವುದರ ಕಾರಣ ಕೇಳಿದಾಗ, ಅವರು, ತಮ್ಮ ಲೋಪವನ್ನು ಒಪ್ಪಿಕೊಳ್ಳುವ ಬದಲಿಗೆ, ಪ್ರಶ್ನೆಯನ್ನು ಕೇಳಿದವರನ್ನೇ 'ಇಂತಹ ಅಸಂಬದ್ಧ ಪ್ರಶ್ನೆಗಳನ್ನು ಕೇಳಬೇಡಿ' ಎಂದು ರೇಗಿದ್ದಾರೆ! ಜನಸಾಮಾನ್ಯರ ಸಮಸ್ಯೆಗಳೆಡೆಗೆ ಜನಪ್ರತಿನಿಧಿಗಳ ಬೇಜವಾಬ್ದಾರಿತನಕ್ಕೆ ಇಂತಹ ಪ್ರತಿಕ್ರಿಯೆಗಳೇ ಸಾಕ್ಷಿ. ಇವರಿಗೆ ಜನರ ಸಾವುಗಳು ಒಂದು ಲೆಕ್ಕವೇ ಅಲ್ಲ. ಮತ್ತೊಂದೆಡೆ, ಮಧ್ಯಪ್ರದೇಶದಲ್ಲಿ ಈಗ ಚುನಾವಣೆ ಇಲ್ಲದ ಕಾರಣ, ಕೇಂದ್ರ ಸರ್ಕಾರ ನೊಂದವರಿಗೆ ಪರಿಹಾರವಾಗಿ ಒಂದು ಪೈಸೆ ಸಹ ನೀಡಿಲ್ಲ. ಕಣ್ಣೊರೆಸುವ ತಂತ್ರವಾಗಿ ಮಾತ್ರ ರಾಜ್ಯ ಸರ್ಕಾರ ಕೆಲವರ ಅಮಾನತು ಮತ್ತು ವರ್ಗಾವಣೆಯನ್ನು ಮಾಡಿತು. ಆದರೆ ಇದರಿಂದ ಜನಸಾಮಾನ್ಯರಿಗೆ ಬಂದ ಲಾಭವೇನು?

ಭಗೀರಥಪುರ ಒಂದು ಕಾರ್ಮಿಕ ನೆಲೆಯಾಗಿದೆ. ಕಳೆದ 5 ದಶಕಗಳಿಗಿಂತಲೂ ಹೆಚ್ಚುಕಾಲ ಅದು ಬಿಜೆಪಿಯ ಸುಭದ್ರ ಕೋಟೆಯಾಗಿದ್ದರೂ, IMC (ಇಂದೋರ್ ಮುನ್ಸಿಪಾಲ್ ಕಾರ್ಪೊರೇಷನ್) 25 ವರ್ಷಗಳಿಂದಲೂ ಬಿಜೆಪಿಯ ನಿಯಂತ್ರಣದಲ್ಲಿದ್ದರೂ ಕಲುಷಿತ ನೀರಿನ ಸಮಸ್ಯೆ ಇನ್ನೂ ಪರಿಹಾರ ಕಾಣದೆ ಉಳಿದಿರುವುದು ಒಂದು ವಿಪರ್ಯಾಸ!

CGWB (ಸೆಂಟ್ರಲ್ ಗ್ರೌಂಡ್ ವಾಟರ್ ಬೋರ್ಡ್) ನೀಡುವ ವಾರ್ಷಿಕ 2024ರ ವರದಿಯು, ಭಾರತದಲ್ಲಿ 779ರಲ್ಲಿ 440 ಜಿಲ್ಲೆಗಳನ್ನು (ಶೆ.56) ವಿಶ್ಲೇಷಣೆ ಮಾಡಿದೆ. ಅತಿಯಾದ ನೈಟ್ರೇಟ್ ಅಂಶದಿಂದ ಭಾರತದಲ್ಲಿ ಅಂತರ್ಜಲ ಕಲುಷಿತಗೊಳ್ಳುವುದು ಹೆಚ್ಚುತ್ತಿದೆ ಎಂದು ವರದಿಯು ತೋರಿಸಿದೆ. ಹಾಗೆಯೇ ರಾಜಸ್ಥಾನ ಹಾಗೂ ಹರಿಯಾಣದಲ್ಲಿ ಫ್ಲೋರೈಡ್ ಅಂಶ, ಹಾಗೂ ಇತರೆ ಭಾಗಗಳಲ್ಲಿ ಆರ್ಸೆನಿಕ್, ಯುರೇನಿಯಂ, ಕಬ್ಬಿಣ, ಸೀಸಗಳಿಂದಾಗಿ ಹೆಚ್ಚು ಕಲುಷಿತಗೊಂಡಿರುವುದರ ಬಗ್ಗೆ ಎಚ್ಚರಿಸಿದೆ. ಭಾರತದಾದ್ಯಂತ ಆರ್ಸೆನಿಕ್‌ನಿಂದಾಗಿ 660 ಲಕ್ಷ ಜನರು ಗಂಗಾ ನದಿ ಪ್ರದೇಶಗಳಲ್ಲಿ ಕ್ಯಾನ್ಸರ್‌ಗೆ ಬಲಿಯಾಗುತ್ತಿದ್ದಾರೆ. ಹೆಚ್ಚಿನ ನೈಟ್ರೇಟ್ ಅಂಶದಿಂದ ಮಕ್ಕಳಲ್ಲಿ 'ಬ್ಲೂ ಬೇಬಿ ಸಿಂಡ್ರೋಮ್' ಉಲ್ಬಣಗೊಳ್ಳುತ್ತಿದೆ. ನೀರಿನಲ್ಲಿಯ ಯುರೇನಿಯಂ ಮತ್ತು ಭಾರದ ಖನಿಜದ ಅಂಶ, ದೀರ್ಘಾವಧಿಯಲ್ಲಿ ವಿವಿಧ ಅಂಗಾಂಗಗಳ ಹಾಗೂ ನರವ್ಯೂಹದ ಮೇಲೆ ಪರಿಣಾಮ ಬೀರುತ್ತಿವೆ. ಉತ್ತರ ಪ್ರದೇಶದ ಬುಡಾಪುರ್‌ನಿಂದ ಹಿಡಿದು ಒಡಿಶಾದ ಭುವನೇಶ್ವರದವರೆಗೆ ಅಂತರ್ಜಲ ಸದ್ದಿಲ್ಲದೆ ವಿಷಕಾರಿಯಾಗಿ ಪರಿಣಾಮ ಬೀರುತ್ತಿದೆ ಹಾಗೂ ಇದರ ಅತಿ ಹೆಚ್ಚಿನ ಬೆಲೆ ತೆರುತ್ತಿರುವವರು ಬಡ ಕಾರ್ಮಿಕರೇ!

ಭಗೀರಥಪುರದ ದುರಂತವು, ಇಂದೋರ್‌ನ 'ಸ್ವಚ್ಛ ನಗರ' ಎಂಬ ಬಿರುದು ಜನರಿಗೆ ಸ್ವಚ್ಛ ನೀರನ್ನು ಖಾತ್ರಿಪಡಿಸುತ್ತದೆ ಎಂಬ ಗಾಳಿಗೋಪುರವನ್ನು ನುಚ್ಚುನೂರು ಮಾಡಿದೆ. ಕೇವಲ ಸ್ವಚ್ಛ ಬೀದಿಗಳು ಹಾಗೂ ಬಿರುದುಗಳು, ತುಕ್ಕು ಹಿಡಿದ ಪೈಪ್‌ಗಳು, ಬೇಜವಾಬ್ದಾರಿ ಆಡಳಿತ ಮತ್ತು ನಿರ್ದಯ ಸರ್ಕಾರಗಳಿಗೆ ಪರ್ಯಾಯವಲ್ಲ. ಇಂದೋರ್ ದುರಂತ ದೇಶಕ್ಕೆ ಹಿಡಿದ ಒಂದು ಕನ್ನಡಿ! ಇದು ನಮ್ಮೆಲ್ಲರ ಮುಂದೆ ಪ್ರಶ್ನೆಯೊಂದನ್ನು ಮುಂದಿಡುತ್ತದೆ. ಸಾಮಾನ್ಯ ಜನರಿಗೆ ಕನಿಷ್ಠ ಕುಡಿಯುವ ನೀರನ್ನು ಕೊಡದ ಅಭಿವೃದ್ಧಿಯ ಮಹತ್ವವೇನು? ಎಂದು. ಇಂತಹ ಅಭಿವೃದ್ಧಿ ಕೀವುಗಟ್ಟಿದ ಹುಣ್ಣುಗಳ ಮೇಲೆ ಪೌಡರ್ ಮತ್ತು ಸ್ನೋ ಹಾಕಿ ಮರೆಮಾಚಿದಂತಲ್ಲವೇ? ಸ್ವಚ್ಛ ಕುಡಿಯುವ ನೀರು ಐಷಾರಾಮಿ ಅಲ್ಲ. ಇದೊಂದು ಮಾರಾಟದ ವಸ್ತುವೂ ಅಲ್ಲ. ಇದು ಸಾಂವಿಧಾನಿಕ ಹಕ್ಕು. ಡಬಲ್ ಇಂಜಿನ್ ಹೆಗ್ಗಳಿಕೆಯ ಸರ್ಕಾರವು ಜನಸಾಮಾನ್ಯರಿಗೆ ಕನಿಷ್ಠ ಈ ಹಕ್ಕನ್ನೂ ಖಾತ್ರಿಪಡಿಸದೆ ಇರುವುದು 'ವಿಕಸಿತ ಭಾರತ' ಎಂಬುದು ಅದೆಷ್ಟು ಪೊಳ್ಳು ಘೋಷಣೆಯಾಗಿದೆ ಎಂಬುದನ್ನು ಎತ್ತಿ ತೋರಿಸುತ್ತದೆ.

ಇದೊಂದು ಎಚ್ಚರಿಕೆಯ ಗಂಟೆಯಾಗಲಿ! ಸಂವಿಧಾನ ಖಾತ್ರಿಪಡಿಸಿರುವ ನಮ್ಮ ಹಕ್ಕುಗಳಿಗಾಗಿ, ಜನಸಾಮಾನ್ಯರೆಲ್ಲರೂ ಶಕ್ತಿಯುತ ಹೋರಾಟಗಳನ್ನು ನಿರಂತರವಾಗಿ ಕಟ್ಟಿ ಬೆಳೆಸಿ, ಈ ಮೂಲಕ ಸರ್ಕಾರದ ಮೇಲೆ ಒತ್ತಡ ಹಾಕಿ ಮೂಲಭೂತ ಸೌಕರ್ಯಗಳನ್ನು ಖಾತ್ರಿ ಪಡಿಸುವಂತೆ ಆಗ್ರಹಿಸಬೇಕಿದೆ!



**06–03–2026: ಧಾರವಾಡ:** ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದು, 56,432 ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜನಸಾಮಾನ್ಯರ ವೇದಿಕೆ ಹಾಗೂ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯಿಂದ ಧಾರವಾಡದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಯುವ ಅಧಿವೇಶನವನ್ನು ಹಮ್ಮಿಕೊಳ್ಳಲಾಗಿತ್ತು. ಉದ್ಯೋಗಾಕಾಂಕ್ಷಿಗಳ ಹಕ್ಕೊತ್ತಾಯಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೂಡಲೇ ಬಗೆಹರಿಸಬೇಕೆಂದು ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು.

# ಸಭಾಪತಿಗಳ ಸಭಾತ್ಯಾಗವೆಂಬೋ ಪ್ರಹಸನ!

ಕರ್ನಾಟಕ ವಿಧಾನಸಭೆ ಅಧಿವೇಶನದಲ್ಲಿ ಸಚಿವರು ಮತ್ತು ಅಧಿಕಾರಿಗಳ ಬೇಜವಾಬ್ದಾರಿ, ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡದಿರುವುದು ಹಾಗೂ ಕಲಾಪಕ್ಕೆ ಗೈರಾಗಿದ್ದನ್ನು ಖಂಡಿಸಿ, ಸ್ಪೀಕರ್ ಯು.ಟಿ. ಖಾದರ್ ಅವರು ಅಸಮಾಧಾನಗೊಂಡು ಸಭಾತ್ಯಾಗ ಮಾಡಿದ ಅಪರೂಪದ ಘಟನೆ ನಡೆದಿದೆ. 230 ಪ್ರಶ್ನೆಗಳಲ್ಲಿ ಕೇವಲ 84ಕ್ಕೆ ಉತ್ತರ ಸಿಕ್ಕಿದ್ದಕ್ಕೆ ಗರಂ ಆದ ಸ್ಪೀಕರ್, ಕಲಾಪವನ್ನು ಮುಂದೂಡಿದರು. ವಿಧಾನಸಭೆಯಲ್ಲಿ ಶಾಸಕರು ಕೇಳಿದ ಪ್ರಶ್ನೆಗಳಿಗೆ ಅಧಿಕಾರಿಗಳು ಮತ್ತು ಸಚಿವರು ಲಿಖಿತ ಉತ್ತರ ನೀಡದಿರುವುದು ಹಾಗೂ ಸಚಿವರು ಸದನಕ್ಕೆ ಹಾಜರಾಗದಿರುವುದು, 'ಅಧಿಕಾರಿಗಳು ಮತ್ತು ಸಚಿವರ ಮೇಲೆ ಸಿಎಂ ಅವರಿಗೆ ಹಿಡಿತವಿಲ್ಲ' ಎಂಬಂತಹ ಸನ್ನಿವೇಶವಿದ್ದು, ಸ್ಪೀಕರ್ ಅಸಮಾಧಾನಕ್ಕೆ ಕಾರಣವಾಯಿತು. ಸ್ಪೀಕರ್ ಅವರ ಈ ಕ್ರಮಕ್ಕೆ ವಿರೋಧ ಪಕ್ಷದವರೂ ಸ್ವಾಗತ ಕೋರಿದ್ದು, ಇದು ಸರ್ಕಾರಕ್ಕೆ ಕಪ್ಪು ಚುಕ್ಕೆ ಎಂದಿದ್ದಾರೆ. ಸ್ಪೀಕರ್ ಸಿಟ್ಟಿಗೆ ಮೂವರು ಅಧಿಕಾರಿಗಳ ತಲೆದಂಡವಾಗಿದೆ. ನಂತರ, ಸ್ಪೀಕರ್ ಅವರ ಮನವೊಲಿಕೆ ಮತ್ತು ಅಧಿಕಾರಿಗಳ ಅಮಾನತಿನ ಬಳಿಕ ಕಲಾಪ ಪುನರಾರಂಭವಾಯಿತು. ಅದರೊಂದಿಗೆ ಸ್ಪೀಕರ್ ಅವರ ಈ ಕ್ರಮವನ್ನು 'ಆಹಾ–ಓಹೋ' ಎಂದು ಒಂದಷ್ಟು ಹೊಗಳುವುದರೊಂದಿಗೆ ಈ ಪ್ರಹಸನ ಅಂತ್ಯ ಕಂಡಿತು.

ಆದರೆ ಈ ಘಟನೆಯು ಪ್ರಜಾಪ್ರಭುತ್ವದಲ್ಲಿ ಜನರ ಹಕ್ಕಿನ ದೃಷ್ಟಿಯಿಂದ ಅತ್ಯಂತ ಗಂಭೀರವಾದ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಶಾಸಕರು ಕೇಳುವ ಪ್ರಶ್ನೆಗಳು ವೈಯಕ್ತಿಕವಲ್ಲ; ಅವು ಜನರ ತೆರಿಗೆ ಹಣದ ವ್ಯಯ, ಯೋಜನೆಗಳ ಅನುಷ್ಠಾನದ ಕುರಿತು ಜನರು ತಿಳಿಯುವ ಹಕ್ಕಿನ ಪ್ರತಿನಿಧಿಗಳಾಗಿವೆ. 230 ಪ್ರಶ್ನೆಗಳ ಪೈಕಿ ಕೇವಲ 84ಕ್ಕೆ ಉತ್ತರ ಸಿಕ್ಕಿದ್ದು ಎಂದರೆ, ಜನರ ಪ್ರಶ್ನೆಗಳಲ್ಲಿ ಶೇಕಡಾ 60 ಕ್ಕೂ ಹೆಚ್ಚಿನದನ್ನು ಸರ್ಕಾರ ಕಡೆಗಣಿಸಿದೆ ಎಂದರ್ಥ. ಇದು ಮಾಹಿತಿ ತಿಳಿಯುವ ಜನರ ಮೂಲಭೂತ ಹಕ್ಕಿನ ಮೇಲಿನ ಆಘಾತವಾಗಿದೆ. ಸಂಸದೀಯ ಪದ್ಧತಿಯಲ್ಲಿ, ಇಲಾಖೆಯ ವೈಫಲ್ಯಕ್ಕೆ ಅಧಿಕಾರಿಯಲ್ಲ, ಸಚಿವರೇ ನೇರವಾಗಿ ಸದನಕ್ಕೆ ಜವಾಬ್ದಾರರಾಗಿರುತ್ತಾರೆ. ಆದರೆ ಇಲ್ಲಿ ಅಧಿಕಾರಿಗಳನ್ನು ಅಮಾನತು ಮಾಡುವ ಮೂಲಕ ಸಚಿವರು ತಮ್ಮ ರಾಜಕೀಯ ಜವಾಬ್ದಾರಿಯಿಂದ ತಪ್ಪಿಸಿಕೊಂಡಂತಾಗಿದೆ. ಇದು, ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತಾಗಿದೆ. ಜನರ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸಿದ ಸಚಿವರು ಯಾವುದೇ ಶಿಸ್ತಿನ ಕ್ರಮವನ್ನು ಎದುರಿಸದೇ ಇದ್ದುದು, ಸರ್ಕಾರದ ಅಸಮರ್ಪಕತೆಯನ್ನು ಸೂಚಿಸುತ್ತದೆ. ಸ್ಪೀಕರ್ ಅವರೇ ಸಭಾತ್ಯಾಗ ಮಾಡುವಷ್ಟು ಪರಿಸ್ಥಿತಿ ಬೆಳೆದದ್ದು, ಸರ್ಕಾರಕ್ಕೆ ವಿಧಾನಸಭೆಯ ಮೇಲಿರುವ ಗೌರವ ಕುಸಿದಿದೆ ಎಂಬುದರ ಸಂಕೇತವಾಗಿದೆ. ವಿರೋಧ ಪಕ್ಷದ ನಾಯಕರು ಸರಿಯಾಗಿಯೇ ಇದನ್ನು ಖಂಡಿಸಿದ್ದಾರೆ. ಆದರೆ ಈ ಖಂಡನೆ–ಅಮಾನತುಗಳು ಇತ್ತೀಚೆಗೆ ಯಾಂತ್ರಿಕವಾಗಿದ್ದು ಕ್ಲೀಶೆಯ ಮಾತಾಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವೂ ಇದಕ್ಕೆ ಹೊರತಲ್ಲ. ಲೋಕಸಭಾ ಕಲಾಪಕ್ಕೆ ಹಾಜರಾಗಿ ಗಂಭೀರವಾಗಿ ಚರ್ಚೆಯಲ್ಲಿ ಪಾಲ್ಗೊಳ್ಳುವ ಪರಿಪಾಠವನ್ನು ಮಾನ್ಯ ಪ್ರಧಾನಮಂತ್ರಿಗಳೇ ಇಟ್ಟುಕೊಂಡಿಲ್ಲ. ಇನ್ನು ಬೇರೆಯವರ ಮಾತೇಕೆ? ಅಷ್ಟೇ ಅಲ್ಲ, ಇಂದು ವಿಧಾನಸಭೆಯನ್ನು ಒಂದು ಹರಟೆಯ ಕಟ್ಟೆಯಾಗಿ, ಬೀದಿ ಜಗಳಗಳ ತಾಣವಾಗಿ ಮಾಡಲಾಗಿದೆ. ಸದನದಲ್ಲಿ ಮಂಡಿಸಲಾಗುವ ಬಿಲ್‌ಗಳ ಬಗ್ಗೆ ಯಾವುದೇ ಗಂಭೀರ ಚರ್ಚೆ ನಡೆಯುವುದೇ ದುಸ್ತರ ಎಂಬ ಸ್ಥಿತಿ ಇದೆ.

ಚುನಾವಣೆಗೆ ಹೂಡಿದ ಬಂಡವಾಳವನ್ನು ಸಾವಿರ ಪಟ್ಟು ಗಳಿಸಲು ಜನರ ಸುಲಿಗೆ ಮಾಡುವುದರಲ್ಲೇ ಮುಳುಗಿದ ರಾಜಕಾರಣಿಗಳ ಬಗ್ಗೆ ಜನರಿಗೆ ನಿರೀಕ್ಷೆ ಬತ್ತಿ ಹೋಗಿ ಅವರು ಪ್ರತಿಭಟಿಸಿ ಬೀದಿಗಿಳಿಯತೊಡಗಿದ್ದಾರೆ.

# ಎಪ್‌ಸ್ಟೀನ್ ಫೈಲ್ಸ್: ಕೊಳೆತ ಬಂಡವಾಳವಾದದ ಪಾತಕ ಬಟಾಬಯಲು!

ಬಂಡವಾಳವಾದವು ತನ್ನ ಸಾವಿನಂಚಿನಲ್ಲಿದೆ. ಬಿಕ್ಕಟ್ಟು ಹೆಚ್ಚಾಗುತ್ತಿದ್ದಂತೆ ಅದು ಹೆಚ್ಚು ಹೆಚ್ಚು ಪ್ರತಿಗಾಮಿ ಹಾಗೂ ಅತ್ಯಂತ ಭ್ರಷ್ಟವಾಗುತ್ತದೆ ಹಾಗೂ ಅದರ ಕೆಸರು, ರಾಡಿ ಎಲ್ಲೆಡೆ ಹರಡಿಕೊಂಡು, ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಕೊಳೆತ ಬಂಡವಾಳಶಾಹಿ ವ್ಯವಸ್ಥೆಯ ಸೇವೆಗೈಯುತ್ತಿರುವ ಅಥವಾ ಅದಕ್ಕೆ ಬೆಂಬಲವಾಗಿ ನಿಂತಿರುವ ಎಲ್ಲರನ್ನೂ – ರಾಜಕಾರಣಿಗಳಿರಲಿ, ಶಿಕ್ಷಣ ಕ್ಷೇತ್ರದವರಿರಲಿ, ಇನ್ನಿತರ ಖ್ಯಾತ ಗಣ್ಯರೇ ಇರಲಿ, ಸಮಾಜದ ಮೇಲ್‌ಸ್ತರದ ಜನರ ಒಡನಾಡಿಗಳೇ ಇರಲಿ – ಇವರೆಲ್ಲರನ್ನೂ ತನ್ನ ತೆಕ್ಕೆಯೊಳಗೆ ಬಾಚಿಕೊಳ್ಳುತ್ತದೆ. ಇತ್ತೀಚಿನ ಎಪ್‌ಸ್ಟೀನ್ ಫೈಲ್ ಬಯಲು ಪಡಿಸಿರುವ ಅಂಶಗಳು ಈ ಜನರು ಇಳಿದಿರುವ ಕೀಳುಮಟ್ಟವನ್ನು ಸೂಚಿಸುತ್ತವೆ. ಈ ಕೊಳೆತ ಸಾಮಾಜಿಕ–ರಾಜಕೀಯ–ಆರ್ಥಿಕ ವ್ಯವಸ್ಥೆಯು ಹೇಗೆ ಇಂತಹ ವ್ಯಕ್ತಿಗಳು ಹುಟ್ಟುವುದಕ್ಕೆ ಕಾರಣವಾಗಿದೆ ಮತ್ತು ಹೇಗೆ ಅಪರಾಧಿಗಳಿಗೆ ಇದು ಶ್ರೀರಕ್ಷೆ ನೀಡುತ್ತದೆ ಎಂಬುದನ್ನು ಈ ಫೈಲ್‌ಗಳು ಎತ್ತಿ ತೋರಿಸುತ್ತವೆ.

### ಎಪ್‌ಸ್ಟೀನ್– ಯಾರೀತ?

ಆತ ಪದವೀಧರನಾಗಿರಲಿಲ್ಲ, ಆದರೂ 1970ರಲ್ಲಿ ನ್ಯೂಯಾರ್ಕಿನ ಒಂದು ಖಾಸಗಿ ಶಾಲೆ, ಡಾಲ್ಟನ್ ಶಾಲೆಯಲ್ಲಿ ಗಣಿತ ಮತ್ತು ಭೌತಶಾಸ್ತ್ರದ ಶಿಕ್ಷಕನಾಗಿದ್ದ. ಒಬ್ಬ ವಿದ್ಯಾರ್ಥಿಯ ತಂದೆ, ಈತನ ಬಗ್ಗೆ ಮೆಚ್ಚುಗೆ ಹೊಂದಿ, ವಾಲ್‌ಸ್ಟ್ರೀಟ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ – ಬೇರ್‌ಸ್ಟರ್ನ್‌ನ ಒಬ್ಬ ಹಿರಿಯ ಪಾಲುದಾರನ ಪರಿಚಯ ಮಾಡಿಕೊಟ್ಟರು ಎನ್ನಲಾಗಿದೆ. ಅಲ್ಪ ಸಮಯದಲ್ಲಿಯೇ ಎಪ್‌ಸ್ಟೀನ್ ಆ ಕಂಪನಿಯ ಪಾಲುದಾರನಾದ. ನ್ಯೂಯಾರ್ಕ್ ಟೈಮ್ಸ್ ಪ್ರಕಾರ, ಬೇರ್‌ಸ್ಟರ್ನ್ಸ್ ಕಂಪನಿಯು ಆತ ತನ್ನ ಪದವಿಯ ಕುರಿತು ತನ್ನ ಅರ್ಜಿಯಲ್ಲಿ ಸುಳ್ಳು ಹೇಳಿರುವುದರ ಬಗ್ಗೆ ಹಾಗೂ ಕಂಪನಿಯ ಮೂಲಕ ತನ್ನ ಗೆಳತಿಗಾಗಿ ಕೊಂಡುಕೊಂಡ ದುಬಾರಿ ಆಭರಣಗಳ ಕುರಿತು ಹಲವಾರು ಬಾರಿ ಪ್ರಶ್ನೆ ಮಾಡಿದೆ ಎಂದು ಹೇಳಲಾಗಿದೆ. ಆದರೂ 1980ರಲ್ಲಿ ಆತ ಖ್ಯಾತಿಯ ಉತ್ತುಂಗದಲ್ಲಿದ್ದ. ಒಂದು ಆಂತರಿಕ ತನಿಖೆಯು ಎಪ್‌ಸ್ಟೀನ್, ಭದ್ರತೆ ಮತ್ತು ವಿನಿಮಯ ಆಯೋಗದ ನಿಬಂಧನೆಗಳನ್ನು ಉಲ್ಲಂಘಿಸಿದ್ದಾನೆಂದು ಹೇಳಿತು. ಆತನಿಗೆ ದಂಡ ವಿಧಿಸಿ ಅಮಾನತ್ತಿನಲ್ಲಿ ಇಡಲಾಯಿತು. ಆದರೆ ಆತ ತಾನು ತಪ್ಪು ಮಾಡಿಲ್ಲವೆಂದು ಹೇಳುತ್ತಾ ಸಂಸ್ಥೆಯಿಂದ ಹೊರ ನಡೆದ. ಸ್ಪಷ್ಟವಾಗಿ, 'ಮೇಲಿ'ನವರೊಂದಿಗಿನ ಆತನ 'ಸಂಬಂಧ'ವು ಆತನನ್ನು ಕಾಪಾಡಿತು.

ಎಪ್‌ಸ್ಟೀನನ ಅದೃಷ್ಟ ಖುಲಾಯಿಸಿ 1982ರ ವೇಳೆಗೆ ಆತ ತನ್ನದೇ ಕಂಪನಿಯನ್ನು – ಜೆ.ಎಪ್‌ಸ್ಟೀನ್ ಅಂಡ್ ಕೋ – ಸೃಷ್ಟಿಸಿಕೊಂಡ, ಅತಿ ವೇಗವಾಗಿ ಕೋಟ್ಯಧಿಪತಿಯಾದ. ಅತ್ಯಂತ ಶ್ರೀಮಂತ ವ್ಯಕ್ತಿಗಳ, ಪ್ರಮುಖ ರಾಜಕಾರಣಿಗಳ ಮತ್ತು ರಾಜ ಮನೆತನದವರೊಂದಿಗೆ ಸಾಮಾಜಿಕ ಸಂಬಂಧವನ್ನು ಬೆಳೆಸಿಕೊಂಡ. ಬೇರ್‌ಸ್ಟರ್ನ್ ಕಂಪನಿಯಲ್ಲಿ ಮೇಲೇರುತ್ತಿರುವಾಗಲೇ ಅವನು ನ್ಯೂಯಾರ್ಕ್ ಅಥವಾ ಅಮೆರಿಕ ಮಾತ್ರವಲ್ಲದೇ ವಿಶ್ವದ ಅತಿ ದೊಡ್ಡ ಆರ್ಥಿಕ ಶಕ್ತಿಗಳೊಡನೆ ಒಡನಾಟ ಹೊಂದಿದ್ದ. ಅವನ ಪ್ರಭಾವ 1980ರ ದಶಕದಾದ್ಯಂತ ವಿಶ್ವದೆಲ್ಲೆಡೆ ಹರಡಿತ್ತು. 1990ರಲ್ಲಿ ಎಪ್‌ಸ್ಟೀನ್ ತನ್ನ ವ್ಯಾಪಾರವನ್ನು ಅಮೆರಿಕಾದ ವರ್ಜಿನ್ ದ್ವೀಪ ಸಮೂಹದ ಸೇಂಟ್ ಥಾಮಸ್ ದ್ವೀಪದಿಂದ ನಡೆಸುತ್ತಿದ್ದ. ಈ ದ್ವೀಪವು ತೆರಿಗೆ ಧಾಮವಾಗಿತ್ತು (ಹೆಸರಿಗೆ ಮಾತ್ರ ಅಥವಾ ಶೂನ್ಯ ತೆರಿಗೆ ಹೊಂದಿರುವುದು). ಆತ ನಂತರ ಅಲ್ಲಿಯೇ ಹತ್ತಿರದಲ್ಲಿ ಮತ್ತೊಂದು ದ್ವೀಪ, ಗ್ರೇಟ್ ಸೇಂಟ್ ಜೇಮ್ಸ್ ದ್ವೀಪವನ್ನು ಕೊಂಡುಕೊಂಡ. ಆತ ಅನೇಕ ಖಾಸಗಿ ಜೆಟ್‌ಗಳನ್ನು ಸಹ ಹೊಂದಿದ್ದ

ಆತ ಶೇರು ಮಾರುಕಟ್ಟೆಯಲ್ಲಿ ಗರಿಷ್ಠ ಲಾಭ ಮಾಡಿಕೊಳ್ಳುತ್ತಿದ್ದನಷ್ಟೇ ಅಲ್ಲ, ಅಮೆರಿಕಾದ ಅತ್ಯಂತ ಬಲಿಷ್ಠ ಅಧ್ಯಕ್ಷರಾದ ಬಿಲ್ ಕ್ಲಿಂಟನ್ ಮತ್ತು ಡೊನಾಲ್ಡ್ ಟ್ರಂಪ್‌ರವರೊಡನೆ ಆತ್ಮೀಯ ಸಂಬಂಧಗಳನ್ನು ಕುದುರಿಸಿಕೊಂಡಿದ್ದ. ಅವನು, ತನ್ನ ಸಂಪರ್ಕದಲ್ಲಿರುವವರಿಗೆ ನಿಯಮಗಳಿಗೊಳಪಟ್ಟೋ, ನಿಯಮಬಾಹಿರವಾಗಿಯೋ ಆರ್ಥಿಕ ಲಾಭಗಳನ್ನು ಗಳಿಸಿಕೊಡುವುದರ ಜೊತೆಗೆ, ಅವರ ವಿಕೃತ ಕಾಮನೆಗಳನ್ನೂ ತೃಪ್ತಿಪಡಿಸುತ್ತಿದ್ದ ಎಂದು ಆರೋಪಿಸಲಾಗಿದೆ. ಪಾಮ್ ಬೀಚಿನ 2005ರ ಪೊಲೀಸ್ ವರದಿಯು ಆತನ ಮೇಲಿದ್ದ ಕಳ್ಳ ಸಾಗಾಣಿಕೆ ಮತ್ತು ಲೈಂಗಿಕ ವ್ಯಾಪಾರದ ಮೇಲಿನ ಆರೋಪಗಳ ಬಗ್ಗೆ ಅಧಿಕೃತ ಪರಿಶೀಲನೆಗೆ ಚಾಲನೆ ನೀಡಿತು. ಅಪ್ರಾಪ್ತ ಬಾಲಕಿಯರಿಗೆ ಹಣ ನೀಡಿ (ಗಿರಾಕಿಗಳ ಗೋಪ್ಯತೆ ಕಾಪಾಡುವ ಸಲುವಾಗಿ) ಎಪ್‌ಸ್ಟೀನಿನ ಗಿರಾಕಿಗಳಿಗೆ 'ಮಸಾಜ್' ಮಾಡಲು ನಿಯೋಜಿಸಲಾಗಿತ್ತು ಹಾಗೂ ಅವರಿಂದ ಇತರರನ್ನು ಈ ಕೆಲಸಕ್ಕೆ ಸೇರಿಸಲು ಹಣ ನೀಡಿ ಪ್ರೇರೇಪಿಸಲಾಗಿತ್ತು ಎಂಬುದನ್ನು ತನಿಖೆಗಳು ಬಹಿರಂಗಗೊಳಿಸಿವೆ.

### ಎಪ್‌ಸ್ಟೀನ್ ಚಟುವಟಿಕೆಗಳ ಕುರಿತಾದ ತನಿಖೆ

2007ರಲ್ಲಿ ಎಪ್‌ಸ್ಟೀನಿನ ವಿರುದ್ಧ ಸಾಕಷ್ಟು ಸಾಕ್ಷಿಗಳು ದೊರೆತರೂ ಕಠಿಣ ಶಿಕ್ಷೆಯಿಂದ ಆತ ತಪ್ಪಿಸಿಕೊಂಡ. ಕಳ್ಳ ಸಾಗಾಣಿಕೆಯಾದ ಹುಡುಗಿಯರು ತಮ್ಮ ಹಕ್ಕುಗಳಿಂದ ವಂಚಿತರಾಗಿರುವ ಬಗ್ಗೆ ನ್ಯಾಯಾಲಯವೇ ಹೇಳಿಕೆ ನೀಡಿತು! 2018ರಲ್ಲಿ ಎಪ್‌ಸ್ಟೀನ್ ಅಥವಾ ಆತನ ಸಹಚರರಿಂದ ಲೈಂಗಿಕ ದೌರ್ಜನ್ಯಗಳಿಗೆ ಒಳಗಾಗಿದ್ದಾರೆ ಎನ್ನಲಾದ ಸುಮಾರು 80 ಸಂತ್ರಸ್ತೆಯರನ್ನು (ಬಹುತೇಕ ಹದಿಹರೆಯದ ಹುಡುಗಿಯರು) ಒಬ್ಬ ತನಿಖಾ ವರದಿಗಾರ ಗುರುತಿಸಿದ ಬಳಿಕ, ಮತ್ತೊಮ್ಮೆ ಆತನ ಮೇಲೆ ತನಿಖೆ ಶುರುವಾಗಿ ಆತ, ಲೈಂಗಿಕ ಕಳ್ಳ ಸಾಗಾಣಿಕೆಯ ಆಪಾದನೆಯ ಮೇಲೆ ಬಂಧನಕ್ಕೊಳಗಾದ. ಆದರೆ, ವಿಚಾರಣೆ ಪ್ರಾರಂಭವಾಗುವುದಕ್ಕೆ ಮುನ್ನವೇ ಆತ ಆಗಸ್ಟ್ 10, 2019ರಂದು ಮ್ಯಾನ್‌ಹಟನ್ ಕಾರಾಗೃಹದಲ್ಲಿ ನಿಗೂಢವಾಗಿ ಸಾವಿಗೀಡಾಗಿರುವುದು ಕಂಡುಬಂದಿತು. ಅದು ಆತ್ಮಹತ್ಯೆಯೋ, ಕೊಲೆಯೋ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

### ಎಪ್‌ಸ್ಟೀನ್ ಫೈಲ್ಸ್ ಬಿಡುಗಡೆ

ಈ ಫೈಲ್‌ಗಳ ದಾಖಲೆಗಳನ್ನು ಬಿಡುಗಡೆ ಮಾಡದಿರುವಂತೆ ಸಾಕಷ್ಟು ಒತ್ತಡಗಳಿದ್ದವು. 2025ರಲ್ಲಿ ಅಂತಿಮವಾಗಿ 1000 ಕ್ಕೂ ಹೆಚ್ಚು ಹುಡುಗಿಯರ, ಎಪ್‌ಸ್ಟೀನಿನ ದುರಾಕ್ರಮಣಕ್ಕೆ ಬಲಿಯಾದವರ ಒತ್ತಡದ ಮೇರೆಗೆ ಈ ದಾಖಲೆಗಳನ್ನು ಬಿಡುಗಡೆ ಮಾಡಲಾಯಿತು. ಎಪ್‌ಸ್ಟೀನ್ ಫೈಲ್ಸ್‌ನಲ್ಲಿ ಹಲವಾರು ವರ್ಷಗಳ ತನಿಖಾ ದಾಖಲೆಗಳು – ಫೋಟೋಗಳು, ಹಣಕಾಸಿಗೆ ಸಂಬಂಧಿಸಿದ ದಾಖಲೆಗಳು, ಇತ್ಯಾದಿ ಇವೆ. ಇದರ ಬಿಡುಗಡೆಯ ನಂತರ ಸಾರ್ವಜನಿಕ ಒತ್ತಡ ಹೆಚ್ಚಾಗಿದೆ, ಶಾಸನ ಕ್ರಮಗಳು ಜಾರಿಯಾಗಿವೆ. ಎಲ್ಲಾ ದಾಖಲೆಗಳು ಬಿಡುಗಡೆಯಾಗಿವೆಯೇ ಎಂಬುದರ ಕುರಿತು ಪ್ರಶ್ನೆಗಳಿವೆ. ಎಪ್‌ಸ್ಟೀನನ ಜೊತೆ ಹೆಸರು ತಳಕು ಹಾಕಿಕೊಂಡಿರುವವರೆಲ್ಲರೂ ತಪ್ಪಿತಸ್ಥರೆಂದು ಹೇಳಲಾಗದೆಂದು ವಾದಿಸಲಾಗಿದೆ. ಆದರೂ ಮೇಲ್‌ಸ್ತರದ ಜನರ ಹೆಸರು ಅಂಟಿಕೊಂಡಿರುವ ಅಂಶವು ಸಾಮಾಜಿಕವಾಗಿ ಮುಖ್ಯವಾಗುತ್ತದೆ. ಈ ಲೈಂಗಿಕ ಅಪರಾಧಿಯ ಜೊತೆ ಸಹಜ ರೀತಿಯಲ್ಲಿ ಸಂಬಂಧ ಹೊಂದಿರುವ ಪಟ್ಟಿಯಲ್ಲಿ ಮಾಜಿ ರಾಜಕೀಯ ನಾಯಕರು, ಉದ್ಯಮಿಗಳು, ಶಿಕ್ಷಣ ಕ್ಷೇತ್ರದ ಜನರು – ಎಲ್ಲರೂ ಇದ್ದಾರೆ. ಹಾಗೂ ಸಾಂದರ್ಭಿಕ ಸಾಕ್ಷಿಗಳು ಈ ಕಳ್ಳ ಸಾಗಾಣಿಕೆಗೊಳಪಟ್ಟ ಹುಡುಗಿಯರನ್ನು ಮೇಲ್‌ಸ್ತರದ ಜನರಿಗೆ 'ಮನರಂಜನೆ' ನೀಡಲು ಬಳಸಿಕೊಳ್ಳಲಾಗಿತ್ತು ಎಂಬುದನ್ನು ಸೂಚಿಸುತ್ತವೆ. ಈ ಪಟ್ಟಿಯಲ್ಲಿ ಅಮೆರಿಕಾದ ಅಧ್ಯಕ್ಷ ಟ್ರಂಪ್, ಉದ್ಯಮಿ ಎಲಾನ್ ಮಸ್ಕ್ ಮತ್ತು ಜಗತ್ತಿನ ಪ್ರಮುಖ ರಾಜಕೀಯ ವ್ಯಕ್ತಿಗಳ ಹೆಸರುಗಳೂ ಇವೆ. ಬ್ರಿಟನ್ನಿನ ಮಾಜಿ ಸೋಷಲೈಟ್ ಹಾಗೂ ಎಪ್‌ಸ್ಟೀನಿನ ಸಹಚರ ಗಿಸ್ ಲೇನ್ ನೋಯಲ್ ಮಾರಿಯನ್ ಮ್ಯಾಕ್ಸ್‌ವೆಲ್‌ಗೆ ಮಕ್ಕಳ ಮೇಲೆ ನಡೆಸಲಾಗಿರುವ ಲೈಂಗಿಕ ಅಪರಾಧಗಳಿಗೆ 20 ವರ್ಷ ಕಾರಾಗೃಹದ ಶಿಕ್ಷೆ ಘೋಷಣೆಯಾಗಿದೆ. ಅಮೆರಿಕ ಮಾತ್ರವಲ್ಲದೆ ಇಂಗ್ಲೆಂಡ್, ಆಸ್ಟ್ರೇಲಿಯಾ, ನಾರ್ವೆ, ಸ್ಲೋವಾಕಿಯಾ ಮತ್ತು ಭಾರತದ ಶ್ರೀಮಂತ ಹಾಗೂ ಬಲಿಷ್ಠ ವ್ಯಕ್ತಿಗಳ ಜೊತೆ ಎಪ್‌ಸ್ಟೀನ್‌ಗೆ ಸಂಬಂಧವಿದ್ದುದನ್ನು ಇತ್ತೀಚೆಗೆ ಬಿಡುಗಡೆಯಾದ ಮತ್ತಷ್ಟು ದಾಖಲೆಗಳು ಹೇಳುತ್ತವೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಲಾಭ, ಶೋಷಣೆ, ಸಾಂಸ್ಕೃತಿಕ ಅವನತಿಯ ಪರಿಣಾಮವಾಗಿ ಹಿಂದೆಯೂ ನಾವು ಅನೇಕ ಲೈಂಗಿಕ ಅಪರಾಧಗಳ ಘಟನೆಗಳನ್ನು ಕಂಡಿದ್ದೇವೆ. ಆದರೆ ಈಗ ಇದು ಜಾಗತೀಕರಣಗೊಂಡು ತನ್ನ ಬಾಹುಗಳನ್ನು ಎಲ್ಲೆಡೆ ಚಾಚಿದೆ. ಹಣ ಜಾಗತಿಕವಾಗಿ ವ್ಯಾಪಿಸಿಕೊಂಡು ಅಪರಾಧವು ಜಾಗತೀಕರಣಗೊಂಡಿದೆ. ಖಾಸಗಿ ಜೆಟ್ ಹಾಗೂ ದ್ವೀಪಗಳನ್ನು ಹೊಂದುವುದು ಕೇವಲ ಪ್ರತ್ಯೇಕ ಘಟನೆಗಳಲ್ಲ. ಇವು ಅಪರಾಧ ಹಾಗೂ ಅಪರಾಧಿಗಳಿಗೆ ನೀಡುವ ಶ್ರೀರಕ್ಷೆಗಳಾಗಿವೆ.

### ಭಾರತದ ನಂಟು

ಪ್ರಧಾನಮಂತ್ರಿಗೆ ಹತ್ತಿರದವರೆಂದು ಹೇಳಲಾಗಿರುವ ರಿಲಯನ್ಸ್ ಗುಂಪಿನ ಅನಿಲ್ ಅಂಬಾನಿ ಮತ್ತು ಎಪ್‌ಸ್ಟೀನ್ ನಡುವೆ ನಡೆದಿರುವ ಸಂಭಾಷಣೆಗಳ ದಾಖಲೆಗಳು ಬಿಡುಗಡೆಯಾಗಿವೆ. ಈ ಎಲ್ಲಾ ಸಂಭಾಷಣೆಗಳು 2008ರಲ್ಲಿ, ಎಪ್‌ಸ್ಟೀನ್ ಮೊದಲ ಬಾರಿ ಲೈಂಗಿಕ ಅಪರಾಧಗಳಿಗೆ ಬಂಧಿಸಲ್ಪಟ್ಟ ಅವಧಿಯಲ್ಲಿವೆ. ಎಪ್‌ಸ್ಟೀನ್ ಫೈಲ್ಸ್‌ನಲ್ಲಿ ಕಂಡುಬರುವ ಮತ್ತೊಂದು ಹೆಸರೆಂದರೆ ಹರದೀಪ್ ಸಿಂಗ್ ಪುರಿ. ಇವರು ಐಎಫ್‌ಎಸ್ ಅಧಿಕಾರಿಯಾಗಿದ್ದು, 2014 ರಲ್ಲಿ ಬಿಜೆಪಿ ಸೇರಲು ನಿವೃತ್ತಿ ಪಡೆದು ನಂತರ ಸಚಿವರಾದರು. 2014 ರಲ್ಲಿ ಇ–ಮೇಲ್ ಮೂಲಕ ಎಪ್‌ಸ್ಟೀನ್ ಜೊತೆ ಸಂಭಾಷಣೆ ನಡೆಸಿದ್ದಾರೆ. ಮ್ಯಾನ್‌ಹಟನ್‌ನಲ್ಲಿರುವ ಎಪ್‌ಸ್ಟೀನ್ ನಿವಾಸಕ್ಕೆ 2015, 2016 ಹಾಗೂ 2017ರಲ್ಲಿ ಭೇಟಿ ನೀಡಿದ್ದಾರೆ, ಭಾರತದ ಮಾಧ್ಯಮಗಳಿಗೆ ಇವೆಲ್ಲವೂ ಕಟ್ಟುನಿಟ್ಟಾಗಿ ವ್ಯಾಪಾರಕ್ಕೆ ಸಂಬಂಧಿಸಿದ್ದು ಎಂದು ಹೇಳಿದ್ದಾರೆ.

ಈ ಎಪ್‌ಸ್ಟೀನ್ ಫೈಲುಗಳು ಕೇವಲ ಒಂದು ಹಗರಣದ ವಿಷಯವಲ್ಲ. ಇದು, ಭಾರತವೂ ಸೇರಿದಂತೆ ವಿವಿಧ ದೇಶಗಳ ರಾಜಕೀಯ ನಾಯಕರಲ್ಲಿ ಕಂಡುಬರುವಂತಹ, ಹಣ, ರಾಜಕೀಯ ಅಧಿಕಾರ ಮತ್ತು ಅವನತಿ ಹೊಂದಿರುವ ಬೂರ್ಜ್ವಾ ಸಂಸ್ಕೃತಿಗಳ ನಡುವಣ ಅಪವಿತ್ರ ಮೈತ್ರಿಯ ದ್ಯೋತಕವಾಗಿದೆ. ಇದು ಅಪ್ರಾಪ್ತ ಬಾಲಕಿಯರ ಕಳ್ಳ ಸಾಗಾಣಿಕೆ ಹಾಗೂ ಲೈಂಗಿಕ ವ್ಯಾಪಾರ ಜಾಲವು ಹೇಗೆ ಒಂದು ದೊಡ್ಡ ವ್ಯಾಪಾರವಾಗಿದೆ ಎಂಬುದನ್ನು ಬಯಲು ಮಾಡಿದೆ. ಆಳುವ ಬಂಡವಾಳಶಾಹಿ ವರ್ಗ ಮತ್ತು ಅದರ ಸೇವೆಗೈವ ರಾಜಕೀಯ ನಾಯಕರು ದಕ್ಷತೆ ಮತ್ತು ಪ್ರಗತಿಯ ಭರವಸೆ ನೀಡುತ್ತಾರೆ. ಆದರೆ ಸಂಪತ್ತು ಕೆಲವರಲ್ಲೇ ಕ್ರೋಡೀಕರಣಗೊಂಡು, ಅಧಿಪತ್ಯ ಗಳಿಸಿದಾಗ, ಅದು ಕನಿಷ್ಠ ಕಾನೂನೆಡೆಗಿನ ಉತ್ತರದಾಯಿತ್ವವನ್ನೂ ಕಳೆದುಕೊಳ್ಳುತ್ತದೆ, ಪಾತಕವನ್ನೂ, ನೈತಿಕ ಅಧಃಪತನವನ್ನೂ ಕಾಪಾಡುತ್ತದೆ. ಎಪ್‌ಸ್ಟೀನ್ ತೀರಿಹೋಗಿದ್ದಾನೆ, ಮ್ಯಾಕ್‌ವೆಲ್ ಬಂಧಿತನಾಗಿದ್ದಾನೆ, ಆದರೆ ಅವರು ಹೀಗಾಗಲು ಬೆಂಬಲ ನೀಡಿದ ಆರ್ಥಿಕ, ಸಾಮಾಜಿಕ ಸಂರಚನೆಗಳು ಸುಭದ್ರವಾಗಿವೆ. ಈ ಫೈಲ್‌ಗಳು ನಮಗೆ ಈ ಮರಣಾಸನ್ನ, ಜೀವ ವಿರೋಧಿ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಲು ಪ್ರೇರೇಪಿಸಬೇಕು. ಇಲ್ಲದಿದ್ದರೆ ಇದು ಕೇವಲ ಈ ದುಷ್ಟ ವ್ಯವಸ್ಥೆಯ ಭೀಕರ ದಾಖಲೆಯಾಗಿ ಮಾತ್ರ ಉಳಿಯುತ್ತದೆ.

# ಚಿನ್ನದ ಬೆಲೆ ಏರುತ್ತಿರುವುದೇಕೆ? ಒಂದು ವಿಶ್ಲೇಷಣೆ

ಜಾಗತಿಕ ಮತ್ತು ದೇಶೀಯ ಮಾರುಕಟ್ಟೆಗಳಲ್ಲಿ ಚಿನ್ನದ ಬೆಲೆಯು ಹಿಂದೆಂದೂ ಕಾಣದ ಮಟ್ಟದ ಏರಿಕೆಯನ್ನು ಕಾಣುತ್ತಿದೆ. 2025ರ ಸಾಲಿನಲ್ಲಿಯೇ ಚಿನ್ನವು 53 ಬಾರಿ ತನ್ನದೇ ಆದ ಹಳೆಯ ದಾಖಲೆಗಳನ್ನು ಮುರಿದು ಹೊಸ ಎತ್ತರಕ್ಕೇರಿದೆ. ಪ್ರಸ್ತುತ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯು ಪ್ರತಿ ಔನ್ಸ್‌ಗೆ (1 ಔನ್ಸ್=28.35ಗ್ರಾಂ) 5,000 ಡಾಲರ್‌ಗಳ ಗಡಿ ದಾಟಿದೆ. 10 ಗ್ರಾಂಗೆ ರೂ. 1,60,000 ದಾಟಿದೆ. ಕೇವಲ ಚಿನ್ನ ಮಾತ್ರವಲ್ಲದೆ, ಬೆಳ್ಳಿ ಮತ್ತು ಪ್ಲಾಟಿನಂನಂತಹ ಅಮೂಲ್ಯ ಲೋಹಗಳ ಬೆಲೆಯಲ್ಲೂ ಇದೇ ರೀತಿಯ ಏರಿಕೆಯ ಪ್ರವೃತ್ತಿ ಕಂಡುಬರುತ್ತಿದೆ. ಈ ಹಠಾತ್ ಮತ್ತು ತೀವ್ರ ಬೆಲೆ ಏರಿಕೆಯು ಹೂಡಿಕೆದಾರರಲ್ಲಿ ಮತ್ತು ಸಾಮಾನ್ಯ ಜನರಲ್ಲಿ "ಈಗ ಚಿನ್ನದ ಬೆಲೆ ಇಷ್ಟು ವೇಗವಾಗಿ ಏರುತ್ತಿರುವುದೇಕೆ?" ಎಂಬ ಗಂಭೀರ ಪ್ರಶ್ನೆಯನ್ನು ಹುಟ್ಟುಹಾಕಿದೆ.

### ಚಿನ್ನದ ಸಂಚಯ ಮತ್ತು ಅದರ ಆರ್ಥಿಕ ಮಹತ್ವ

ಚಿನ್ನದ ಸಂಚಯ ಎಂದರೆ ವಿಶ್ವದಾದ್ಯಂತ ರಾಷ್ಟ್ರೀಯ ಕೇಂದ್ರೀಯ ಬ್ಯಾಂಕುಗಳು ಮತ್ತು ಸರ್ಕಾರಗಳು ಸಂಗ್ರಹಿಸಿಡುವ ಚಿನ್ನದ ಪ್ರಮಾಣ. ಈ ಮೀಸಲು ನಿಧಿಯು ಒಂದು ದೇಶದ ಆರ್ಥಿಕ ಸುರಕ್ಷತಾ ಪರದೆಯಾಗಿ ಕಾರ್ಯ ನಿರ್ವಹಿಸುತ್ತದೆ. ಇದು ರಾಷ್ಟ್ರೀಯ ಕರೆನ್ಸಿಯ ಮೌಲ್ಯಕ್ಕೆ ಬೆಂಬಲ ನೀಡುವುದಲ್ಲದೆ, ಆರ್ಥಿಕ ಅಸ್ಥಿರತೆಯ ಸಂದರ್ಭಗಳಲ್ಲಿ ರಕ್ಷಣಾ ಕವಚವಾಗಿ ಕಾರ್ಯನಿರ್ವಹಿಸುತ್ತದೆ. ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಉಂಟಾದಾಗ ಅಥವಾ ಹಣದುಬ್ಬರವು ಹೆಚ್ಚಾದಾಗ, ಚಿನ್ನವು ಅತ್ಯಂತ ವಿಶ್ವಾಸಾರ್ಹ ಆಸ್ತಿಯಾಗಿ ಹೊರಹೊಮ್ಮುತ್ತದೆ. ಇತಿಹಾಸದುದ್ದಕ್ಕೂ ಚಿನ್ನವನ್ನು ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಮೌಲ್ಯದ ಸುರಕ್ಷಿತ ಸಂಗ್ರಹವಾಗಿ ನೋಡಲಾಗಿದೆ.

### ಮೌಲ್ಯದ ನಿಯಮ: ಒಂದು ಮಾರ್ಕ್ಸ್‌ವಾದಿ ದೃಷ್ಟಿಕೋನ

ಬಂಡವಾಳಶಾಹಿ ಆರ್ಥಿಕತೆಯ ಮೂಲಭೂತ ತತ್ವಗಳನ್ನು ಅರ್ಥಮಾಡಿಕೊಳ್ಳದೆ ಈ ಬೆಲೆ ಏರಿಕೆಯನ್ನು ವಿಶ್ಲೇಷಿಸುವುದು ಅಸಾಧ್ಯ. ಮಹಾನ್ ಚಿಂತಕ ಕಾರ್ಲ್ ಮಾರ್ಕ್ಸ್ ವಿವರಿಸಿದ 'ಮೌಲ್ಯದ ನಿಯಮ' (Law of Value) ಇಲ್ಲಿ ಪ್ರಮುಖವಾಗುತ್ತದೆ. ಮಾರ್ಕ್ಸ್ ಪ್ರಕಾರ, ಯಾವುದೇ ಒಂದು ಸರಕಿನ ಮೌಲ್ಯವು ಅದರ ಬೆಲೆ ಅಥವಾ ಉಪಯುಕ್ತತೆಯಿಂದ ನಿರ್ಧರಿಸಲ್ಪಡುವುದಿಲ್ಲ; ಬದಲಿಗೆ ಅದರ ಉತ್ಪಾದನೆಗೆ ಅಗತ್ಯವಾದ 'ಸರಾಸರಿ ಅವಶ್ಯಕ ಸಾಮಾಜಿಕ ಶ್ರಮದ ಸಮಯ'ದಿಂದ ನಿರ್ಧರಿಸಲ್ಪಡುತ್ತದೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹಣವು ಒಂದು ವಿಶೇಷ ಸರಕಾಗಿದ್ದು, ಇದು ಇತರ ಎಲ್ಲಾ ಸರಕುಗಳ ಮೌಲ್ಯವನ್ನು ಅಳೆಯುವ ಸಾರ್ವತ್ರಿಕ ಸಮಬೆಲೆಯ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. ಮಾರ್ಕ್ಸ್ ತಮ್ಮ 'ದಾಸ್ ಕ್ಯಾಪಿಟಲ್' ಕೃತಿಯಲ್ಲಿ ಸ್ಪಷ್ಟಪಡಿಸಿದಂತೆ, ಹಣವು ಸ್ವತಃ ಒಂದು ಸರಕಾಗಿದ್ದು (ಐತಿಹಾಸಿಕವಾಗಿ ಚಿನ್ನ ಅಥವಾ ಬೆಳ್ಳಿ), ಇದು ಇತರ ಸರಕುಗಳ ವಿನಿಮಯ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಫ್ರೆಡ್ರಿಕ್ ಎಂಗೆಲ್ಸ್ ವಿವರಿಸುವಂತೆ, ವರ್ಗ ಸಮಾಜದಲ್ಲಿ ಶ್ರಮದ ವಿಭಜನೆ ಹೆಚ್ಚಾದಂತೆ ಮತ್ತು ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳದೆ ಕೇವಲ ವಿನಿಮಯದಲ್ಲಿ ತೊಡಗಿಸಿಕೊಳ್ಳುವ 'ವರ್ತಕ ವರ್ಗ'ದ ಉದಯದೊಂದಿಗೆ ಹಣ ಮತ್ತು ನಾಣ್ಯಗಳ ಬಳಕೆ ಅನಿವಾರ್ಯವಾಯಿತು. ಬಂಡವಾಳಶಾಹಿ ವ್ಯವಸ್ಥೆಯು ಹೆಚ್ಚು ಸಂಕೀರ್ಣಗೊಂಡಂತೆ, ಹಣವು ತನ್ನದೇ ಆದ ತರ್ಕವನ್ನು ಬೆಳೆಸಿಕೊಳ್ಳುತ್ತದೆ ಮತ್ತು ಜೀವನದ ಪ್ರತಿಯೊಂದು ಕ್ಷೇತ್ರವನ್ನೂ ತನ್ನ ಕಠೋರ ನಿಯಮಗಳಿಂದ ನಿಯಂತ್ರಿಸುತ್ತದೆ.

### ಚಿನ್ನದ ಬೆಲೆ ಏರಿಕೆಗೆ ಪ್ರೇರಕವಾಗಿರುವ ಜಾಗತಿಕ ಅಂಶಗಳು

* **ಆರ್ಥಿಕ ಅಸ್ಥಿರತೆ ಮತ್ತು ಹಣದುಬ್ಬರ:**

ಪ್ರಸ್ತುತ ಜಗತ್ತು 'ಫಿಯಟ್ ಕರೆನ್ಸಿ' (Fiat currency) ವ್ಯವಸ್ಥೆಯ ಮೇಲೆ ಅವಲಂಬಿತವಾಗಿದೆ. ಇದು ಯಾವುದೇ ಭೌತಿಕ ಸರಕಿನ (ಚಿನ್ನದಂತಹ) ಬೆಂಬಲವಿಲ್ಲದ ಹಣವಾಗಿದೆ. ಅಂದರೆ, ಇದು ಕೇವಲ ಜನರು ಸರ್ಕಾರದ ಸ್ಥಿರತೆಯ ಮೇಲಿಟ್ಟ ನಂಬಿಕೆಯ ಮೇಲಾಧಾರಿತವಾಗಿದ್ದು, ಕಾನೂನುಬದ್ಧವಾಗಿದೆ. ಆರ್ಥಿಕ ಅನಿಶ್ಚಿತತೆಯ ಸಮಯದಲ್ಲಿ ಹೂಡಿಕೆದಾರರು ಕರೆನ್ಸಿ ಅಪಮೌಲ್ಯದ ವಿರುದ್ಧ ರಕ್ಷಣೆಯಾಗಿ ಚಿನ್ನವನ್ನು ಆಶ್ರಯಿಸುತ್ತಾರೆ.

* **ಭೌಗೋಳಿಕ ರಾಜಕೀಯ ಉದ್ವಿಗ್ನತೆ:**

21ನೇ ಶತಮಾನವು ಭೀಕರ ಯುದ್ಧಗಳು ಮತ್ತು ಸಂಘರ್ಷಗಳಿಗೆ ಸಾಕ್ಷಿಯಾಗಿದೆ. ಪೂರ್ವ ಯುರೋಪ್ (ಉಕ್ರೇನ್), ಮಧ್ಯಪ್ರಾಚ್ಯದಲ್ಲಿನ ಸಂಘರ್ಷಗಳು ಮತ್ತು ಅಮೆರಿಕ–ಚೀನಾ ನಡುವಿನ ವ್ಯಾಪಾರ ಯುದ್ಧಗಳು ಮಾರುಕಟ್ಟೆಯಲ್ಲಿ ಭಯವನ್ನು ಸೃಷ್ಟಿಸಿವೆ. ಇಂತಹ ಸಮಯದಲ್ಲಿ ಹೂಡಿಕೆದಾರರು ರಾಜಕೀಯ ಅಪಾಯಗಳಿಂದ ಮುಕ್ತವಾಗಿರುವ ಚಿನ್ನದಂತಹ ಸುರಕ್ಷಿತ ಆಸ್ತಿಗಳಲ್ಲಿ ಹೂಡಿಕೆ ಮಾಡಲು ಮುಂದಾಗುತ್ತಾರೆ. ಪ್ರಬಲ ಸಾಮ್ರಾಜ್ಯಶಾಹಿ ರಾಷ್ಟ್ರಗಳು 'ದ್ರವಚಿನ್ನ' (ತೈಲ) ಮಾತ್ರವಲ್ಲದೆ, ಚಿನ್ನದ ಮೇಲೆ ನಿಯಂತ್ರಣ ಸಾಧಿಸಲು ಇತರ ದೇಶಗಳ ಮೇಲೆ ಆಕ್ರಮಣ ಮಾಡುವ ಅಥವಾ ಕೈಗೊಂಬೆ ಸರ್ಕಾರಗಳನ್ನು ಸ್ಥಾಪಿಸುವ ಪ್ರಯತ್ನ ಮಾಡುತ್ತಿರುವುದು ಜಾಗತಿಕ ರಾಜಕೀಯದಲ್ಲಿ ಪ್ರತಿಫಲಿಸುತ್ತಿದೆ.

* **ಅಮೆರಿಕದ ಡಾಲರ್ ಮೇಲಿನ ಅನಿಶ್ಚಿತತೆ:** ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು ಅಧಿಕಾರಕ್ಕೆ ಬಂದ ಕಾಲದಿಂದಲೂ ಜಾರಿಯಲ್ಲಿರುವ ಅನಿರೀಕ್ಷಿತ ಆರ್ಥಿಕ ನೀತಿಗಳು ಡಾಲರ್‌ನ ವಿಶ್ವಾಸಾರ್ಹತೆಯನ್ನು ಕುಗ್ಗಿಸಿವೆ. ಇದು ವಿದೇಶೀ ವಿನಿಮಯಕ್ಕಾಗಿ ಡಾಲರ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಅದರ ಬದಲು ಚಿನ್ನವನ್ನು ಸಂಗ್ರಹಿಸಲು ಅನೇಕ ದೇಶಗಳನ್ನು ಪ್ರೇರೇಪಿಸುವಂತೆ ಮಾಡಿದೆ.

### ಕೇಂದ್ರೀಯ ಬ್ಯಾಂಕುಗಳ ಖರೀದಿ ಅಬ್ಬರ

ವಿಶ್ವದಾದ್ಯಂತ ಕೇಂದ್ರೀಯ ಬ್ಯಾಂಕುಗಳು ಅಭೂತಪೂರ್ವ ಮಟ್ಟದಲ್ಲಿ ಚಿನ್ನವನ್ನು ಖರೀದಿಸುತ್ತಿವೆ. 2022 ಮತ್ತು 2024ರ ನಡುವೆ ಈ ಬ್ಯಾಂಕುಗಳು ವಾರ್ಷಿಕವಾಗಿ 1,000 ಟನ್‌ಗಳಿಗಿಂತ ಹೆಚ್ಚು ಚಿನ್ನವನ್ನು ಸಂಗ್ರಹಿಸಿವೆ. ಇದು ಕಳೆದ ದಶಕದ ಸರಾಸರಿಗಿಂತ ಎರಡು ಪಟ್ಟು ಹೆಚ್ಚು. ವಿಶ್ವ ಚಿನ್ನದ ಮಂಡಳಿಯ (World Gold Council) 2025ರ ಸಮೀಕ್ಷೆಯ ಪ್ರಕಾರ, 95% ಕೇಂದ್ರೀಯ ಬ್ಯಾಂಕುಗಳು ಮುಂದಿನ ದಿನಗಳಲ್ಲಿ ಚಿನ್ನದ ಮೀಸಲನ್ನು ಮತ್ತಷ್ಟು ಹೆಚ್ಚಿಸುವ ನಿರೀಕ್ಷೆಯಲ್ಲಿವೆ. ಚೀನಾ, ರಷ್ಯಾ, ಟರ್ಕಿ, ಭಾರತ ಮತ್ತು ಪೋಲೆಂಡ್ ಈ ಸಂಗ್ರಹದಲ್ಲಿ ಮುಂಚೂಣಿಯಲ್ಲಿವೆ.

ಈ ರೀತಿ ಸರ್ಕಾರಗಳ ಕೇಂದ್ರೀಯ ಬ್ಯಾಂಕುಗಳೇ ಚಿನ್ನವನ್ನು ಖರೀದಿಸಿರುವುದು ಅದರ ಬಗ್ಗೆ ಹೂಡಿಕೆದಾರರಲ್ಲಿ ಹೆಚ್ಚಿನ ವಿಶ್ವಾಸ ಮೂಡಿಸಿದೆ. ಒಂದೆಡೆ ಷೇರು ಮಾರುಕಟ್ಟೆಯ ತಲ್ಲಣ, ಇನ್ನೊಂದೆಡೆ ಚಿನ್ನದ ಮೇಲೆ ಹೆಚ್ಚಿದ ವಿಶ್ವಾಸ, ಚಿನ್ನಕ್ಕೆ ಬೇಡಿಕೆಯನ್ನು ವೃದ್ಧಿಸಿದೆ. 2022ರಿಂದ ಈ ಬೇಡಿಕೆ ನಿರಂತರವಾಗಿ ಏರುಗತಿಯಲ್ಲಿದೆ. ಇದರೊಂದಿಗೆ ಎಐ ತಂತ್ರಜ್ಞಾನದ ಅಭಿವೃದ್ಧಿಗೆ ಬೇಕಾದ ವಿವಿಧ ಬಗೆಯ ಚಿಪ್‌ಗಳ ಉತ್ಪಾದನೆ ಹೆಚ್ಚಳಗೊಂಡಿದೆ. ಇವುಗಳ ತಯಾರಿಗೆ ಚಿನ್ನದ ಅಗತ್ಯವಿದ್ದು, ಇಲ್ಲಿಯೂ ಚಿನ್ನದ ಬಳಕೆ ಹೆಚ್ಚಾಗಿದೆ. ಹೀಗೆ 2019ರಲ್ಲಿ ಜಾಗತಿಕವಾಗಿ ಸುಮಾರು 4,350 ಟನ್ ಚಿನ್ನ ಖರೀದಿಯಾಗಿದ್ದರೆ, 2025ರಲ್ಲಿ ಅದು ಮೊದಲ ಬಾರಿಗೆ 5,000 ಟನ್ ದಾಟಿದೆ. 2019ರಲ್ಲಿ 10ಗ್ರಾಂ ಚಿನ್ನಕ್ಕೆ ಸುಮಾರು ರೂ. 35,000 ಬೆಲೆ ಇದ್ದರೆ, 2025ರ ಕೊನೆಗೆ ಇದು ರೂ.1,35,000 ಮುಟ್ಟಿತು.

### ಭಾರತ ಮತ್ತು ರಿಸರ್ವ್ ಬ್ಯಾಂಕ್‌ನ (RBI) ಹೊಸ ಕಾರ್ಯತಂತ್ರ

ಭಾರತದ ಆರ್ಥಿಕತೆಯಲ್ಲಿ ಚಿನ್ನದ ಪಾತ್ರ ಬಹಳ ದೊಡ್ಡದು. ಇತ್ತೀಚಿನ ವರ್ಷಗಳಲ್ಲಿ ಭಾರತದ ರಿಸರ್ವ್ ಬ್ಯಾಂಕ್ ತನ್ನ ಚಿನ್ನದ ಸಂಗ್ರಹಣೆಯ ಕಾರ್ಯತಂತ್ರವನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡಿದೆ. 2025ರ ಮಾರ್ಚ್‌ನಲ್ಲಿ 77 ಬಿಲಿಯನ್ ಡಾಲರ್‌ಇದ್ದ ಭಾರತದ ಚಿನ್ನದ ಸಂಚಿತ ಮೌಲ್ಯವು 2026ರ ಜನವರಿ ವೇಳೆಗೆ 123 ಬಿಲಿಯನ್ ಡಾಲರ್‌ಗೆ ಏರಿದೆ. ಇದು ಕೇವಲ ಒಂದು ವರ್ಷದ ಒಳಗಿನ ಅವಧಿಯಲ್ಲಿ ಸುಮಾರು 60% ರಷ್ಟು ಭಾರಿ ಹೆಚ್ಚಳವಾಗಿದೆ. ಪ್ರಸ್ತುತ ಭಾರತದ ವಿದೇಶಿ ವಿನಿಮಯ ಮೀಸಲಿನಲ್ಲಿ ಚಿನ್ನದ ಪಾಲು 15% ಕ್ಕೆ ಏರಿದೆ.

ಇನ್ನೊಂದು ಗಮನಾರ್ಹ ಬೆಳವಣಿಗೆಯೆಂದರೆ ವಿದೇಶಗಳಲ್ಲಿ (ವಿಶೇಷವಾಗಿ ಬ್ಯಾಂಕ್ ಆಫ್ ಇಂಗ್ಲೆಂಡ್‌ನಲ್ಲಿ) ಸಂಗ್ರಹಿಸಿಟ್ಟಿದ್ದ ಚಿನ್ನವನ್ನು ಭಾರತಕ್ಕೆ ಮರಳಿ ತರುತ್ತಿರುವುದು (repatriation). 2025ರ ಅಂತ್ಯದ ವೇಳೆಗೆ ಭಾರತದ 65% ಕ್ಕಿಂತ ಹೆಚ್ಚು ಚಿನ್ನದ ಸಂಚಯವನ್ನು ದೇಶದೊಳಗಿನ ತಾಣಗಳಲ್ಲೇ ಸುರಕ್ಷಿತವಾಗಿ ಇರಿಸಲಾಗಿದೆ. 2022ರಲ್ಲಿ ಉಕ್ರೇನ್ ಯುದ್ಧದ ಕಾರಣ ನೀಡಿ ಜಿ 7 ರಾಷ್ಟ್ರಗಳು ರಷ್ಯಾದ ವಿದೇಶಿ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡ ನಂತರ, "ಚಿನ್ನವು ನಿಮ್ಮ ಕೈಯಲ್ಲಿ ಇಲ್ಲದಿದ್ದರೆ ಅದು ನಿಮ್ಮದಲ್ಲ" ಎಂಬ ಕಟು ಸತ್ಯ ದೇಶಗಳಿಗೆ ಮನವರಿಕೆಯಾಗಿದೆ. ಇದು 'ಡಿ–ಡಾಲರೈಸೇಶನ್' (De-dollarisation) ಪ್ರಕ್ರಿಯೆಯ ಭಾಗವಾಗಿದ್ದು, ಅಮೆರಿಕದ ಡಾಲರ್ ಮತ್ತು ಅದರ ನಿರ್ಬಂಧಗಳಿಂದ ಮುಕ್ತಿ ಪಡೆಯುವ ತಂತ್ರವಾಗಿದೆ.

### ಮಿತಿಗಳು ಮತ್ತು ಅಪಾಯಗಳು

ಚಿನ್ನದ ಸಂಗ್ರಹಣೆಯು ತನ್ನದೇ ಆದ ಮಿತಿಗಳನ್ನು ಹೊಂದಿದೆ. ಮೊದಲನೆಯದಾಗಿ, ಚಿನ್ನವು ಷೇರುಗಳು ಅಥವಾ ಬಾಂಡ್‌ಗಳಂತೆ ಯಾವುದೇ ಬಡ್ಡಿ ಆದಾಯವನ್ನು ನೀಡುವುದಿಲ್ಲ. ಎರಡನೆಯದಾಗಿ, ಭೌತಿಕ ಚಿನ್ನವನ್ನು ಸುರಕ್ಷಿತವಾಗಿಡಲು ಭಾರಿ ವಿಮೆ ಮತ್ತು ಸಂಗ್ರಹಣಾ ವೆಚ್ಚಗಳು ತಗಲುತ್ತವೆ. ಭಾರತವು ತನ್ನ ವಾರ್ಷಿಕ ಬೇಡಿಕೆಯ 90% ರಿಂದ 95% ರಷ್ಟು ಚಿನ್ನವನ್ನು ಆಮದಿನ ಮೂಲಕವೇ ಪೂರೈಸಿಕೊಳ್ಳುವುದರಿಂದ, ಅಂತರರಾಷ್ಟ್ರೀಯ ಬೆಲೆ ಏರಿಕೆಯು ನಮ್ಮ ಆಮದು ವೆಚ್ಚವನ್ನು ಹೆಚ್ಚಿಸಿ ಆರ್ಥಿಕತೆಯ ಮೇಲೆ ಒತ್ತಡ ಹೇರುತ್ತದೆ.

### ತೀರ್ಮಾನ: ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು

ಅಂತಿಮವಾಗಿ, ಚಿನ್ನದ ಬೆಲೆ ಏರಿಕೆ, ಕರೆನ್ಸಿ ಏರಿಳಿತಗಳು, ಜಾಗತಿಕ ಯುದ್ಧದ ಭೀತಿ ಮತ್ತು ಸಾಮಾನ್ಯ ಜನರ ಆದಾಯದ ಕುಸಿತ –ಇವೆಲ್ಲವೂ ತೀವ್ರ ಬಿಕ್ಕಟ್ಟಿನಲ್ಲಿರುವ ಮತ್ತು ವಿನಾಶದ ಅಂಚಿನಲ್ಲಿರುವ ಬಂಡವಾಳಶಾಹಿ ವ್ಯವಸ್ಥೆಯ ಲಕ್ಷಣಗಳಾಗಿವೆ. ಬಂಡವಾಳಶಾಹಿ ವ್ಯವಸ್ಥೆಯು ಇಂದು ಅತ್ಯಂತ ಕೊಳೆತ ಮತ್ತು ಅಧೋಗತಿಯ ಹಂತವನ್ನು ತಲುಪಿದೆ. ಒಂದು ಕಡೆ ಬೆರಳೆಣಿಕೆಯಷ್ಟು ಶತಕೋಟ್ಯಧಿಪತಿಗಳ ಬಳಿ ಸಂಪತ್ತು ಕೇಂದ್ರೀಕೃತವಾಗುತ್ತಿದ್ದರೆ, ಇನ್ನೊಂದೆಡೆ ಸಾಮಾನ್ಯ ಜನರು ಬಡತನದಲ್ಲಿ ನರಳುತ್ತಿದ್ದಾರೆ.

ಈ ಆರ್ಥಿಕ ವಿದ್ಯಮಾನಗಳು ಬಂಡವಾಳಶಾಹಿ ವ್ಯವಸ್ಥೆಯು ಸೃಷ್ಟಿಸಿರುವ ಅನಿಶ್ಚಿತತೆಯ ಫಲಿತಾಂಶವಾಗಿವೆ. ಮಾನವ ಜೀವನದ ಅಗತ್ಯತೆಗಳಿಗಿಂತ ಲಾಭಕ್ಕೆ ಆದ್ಯತೆ ನೀಡುವ ಈ ವ್ಯವಸ್ಥೆಯು ಇಂದು ತನ್ನನ್ನು ತಾನು ರಕ್ಷಿಸಿಕೊಳ್ಳಲು ಚಿನ್ನದ ಹಿಂದೆ ಓಡುತ್ತಿದೆ. ಶ್ರೇಷ್ಠ ಚಿಂತಕರಾದ ಮಾರ್ಕ್ಸ್ ಮತ್ತು ಲೆನಿನ್ ವಿವರಿಸಿದಂತೆ, ಈ ಶೋಷಕ ವ್ಯವಸ್ಥೆಯನ್ನು ಕ್ರಾಂತಿಕಾರಿ ಬದಲಾವಣೆಯ ಮೂಲಕ ಕಿತ್ತೊಗೆಯದ ಹೊರತು ಜನಸಾಮಾನ್ಯರಿಗೆ ಈ ಆರ್ಥಿಕ ಸಂಕೋಲೆಗಳಿಂದ ಮುಕ್ತಿ ಸಿಗುವುದಿಲ್ಲ.

---

## ಉತ್ತರ ಪ್ರದೇಶ: ಹುತಾತ್ಮರ ಪ್ರತಿಮೆ ಧ್ವಂಸ! ಮನುಕುಲದ ವಿರುದ್ಧ ಅಪರಾಧ ಕೃತ್ಯ : ಎಸ್‌ಯುಸಿಐ(ಸಿ) ಖಂಡನೆ!

**26–03–2026: ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್‌ರವರ ಪತ್ರಿಕಾ ಹೇಳಿಕೆ:**

"ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ, 1925ರ 'ಕಾಕೋರಿ ಪಿತೂರಿ' (Kakori Action) ಇಡೀ ಭಾರತದಾದ್ಯಂತ ಸ್ವಾತಂತ್ರ್ಯ ಪ್ರೇಮಿಗಳಿಗೆ ಸ್ಫೂರ್ತಿ ನೀಡಿದ ಒಂದು ಐತಿಹಾಸಿಕ ಘಟನೆಯಾಗಿದೆ. ಈ ಹೋರಾಟದಲ್ಲಿ ರಾಮ್‌ಪ್ರಸಾದ್ ಬಿಸ್ಮಿಲ್, ಅಶ್ಫಾಕುಲ್ಲಾ ಖಾನ್ ಮತ್ತು ರೋಷನ್ ಸಿಂಗ್ ಅವರು ನಗುನಗುತಲೇ ಗಲ್ಲುಗಂಬವನ್ನೇರಿ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನೇ ಬರೆದರು. ಉತ್ತರ ಪ್ರದೇಶದ ಷಹಜಹಾನ್‌ಪುರದ ಸಾರ್ವಜನಿಕರು ಈ ಹುತಾತ್ಮರ ಬಗ್ಗೆ ಇರುವ ಅಪಾರ ಗೌರವ ಮತ್ತು ಭಾವುಕತೆಯ ಸಂಕೇತವಾಗಿ 1972ರಲ್ಲಿ ನಗರದ ಮಧ್ಯಭಾಗದಲ್ಲಿ ಅವರ ಪ್ರತಿಮೆಗಳನ್ನು ಸ್ಥಾಪಿಸಿದ್ದರು. ಆದರೆ, ಉತ್ತರ ಪ್ರದೇಶದ ಬಿಜೆಪಿ ಸರ್ಕಾರವು ನಗರದ ಸೌಂದರ್ಯೀಕರಣದ ಹೆಸರಿನಲ್ಲಿ ಮಾರ್ಚ್ 23 ರಂದು ಆ ಪ್ರತಿಮೆಗಳನ್ನು ಧ್ವಂಸಗೊಳಿಸಿದೆ.

ಈ ಸರ್ಕಾರದ ಈ ಕೃತ್ಯವು ಆಕಸ್ಮಿಕವಾದುದಲ್ಲ. ಇದು ಅವರ ಸುದೀರ್ಘ ನೀತಿಯ ಪ್ರತಿಫಲನವಾಗಿದೆ. ಆರ್‌ಎಸ್‌ಎಸ್‌ನ ಗುರೂಜಿ ಗೋಲ್ವಾಲ್ಕರ್ ಪ್ರಕಾರ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧದ ಭಾರತದ ಸ್ವಾತಂತ್ರ್ಯ ಹೋರಾಟವು ದೇಶಭಕ್ತಿಯಲ್ಲ, ಬದಲಿಗೆ 'ಪ್ರತಿಗಾಮಿ' ಚಟುವಟಿಕೆಯಾಗಿತ್ತು. ಹಾಗಾಗಿ, ಅವರು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸುವರ್ಣ ಅಧ್ಯಾಯಗಳನ್ನು ಅಳಿಸಿಹಾಕಲು ಬಯಸುತ್ತಿದ್ದಾರೆ.

ಸರ್ಕಾರದ ಇಂತಹ ಅಪರಾಧ ಚಟುವಟಿಕೆಗಳನ್ನು ವಿರೋಧಿಸಲು ಮತ್ತು ಈ ಕೆಳಗಿನ ಬೇಡಿಕೆಗಳಿಗಾಗಿ ಮುಂದೆ ಬರುವಂತೆ ನಾವು ಭಾರತದ ಜನತೆಗೆ ಕರೆ ನೀಡುತ್ತೇವೆ:

* ತಕ್ಷಣವೇ ಆ ಪ್ರತಿಮೆಗಳನ್ನು ಪೂರ್ಣ ಗೌರವದೊಂದಿಗೆ ಮರುಸ್ಥಾಪಿಸಬೇಕು.
* ಈ ಘೋರ ಕೃತ್ಯದಲ್ಲಿ ಭಾಗಿಯಾದವರನ್ನು ಕೂಡಲೇ ಶಿಕ್ಷಿಸಬೇಕು."

# ಭಾರತೀಯ ರೈಲ್ವೆ: ಕಾರ್ಪೋರೇಟ್ ಲೂಟಿಯ ಬಲಿಪಶು!

ಕೆಲಸ ಹುಡುಕುತ್ತ ದೊಡ್ಡ ನಗರಕ್ಕೆ ತೆರಳುವ ವಲಸೆ ಕಾರ್ಮಿಕ, ತನ್ನ ಕಷ್ಟಾರ್ಜಿತ ಉಳಿತಾಯದೊಂದಿಗೆ ತೀರ್ಥಯಾತ್ರೆಗೆ ಸಜ್ಜಾದ ಒಬ್ಬ ವಯಸ್ಸಾದ ಭಕ್ತ, ಉದ್ಯೋಗಾಕಾಂಕ್ಷಿ ಯುವಕ ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿ, ಇವರೆಲ್ಲರ ಪ್ರಯಾಣದ ಮೊದಲ ಆಯ್ಕೆ ರೈಲ್ವೆಯಾಗಿದೆ. ಅನೇಕ ಕಷ್ಟಗಳನ್ನು ಎದುರಿಸುತ್ತಾ ಕಿಕ್ಕಿರಿದು ತುಂಬಿದ ಬೋಗಿಗಳಲ್ಲಿ ಇವರು ಪ್ರಯಾಣಿಸಲು ಮುಂದಾಗುತ್ತಾರೆ. ನಮ್ಮ ದೇಶದ ಕೋಟ್ಯಂತರ ಸಾಮಾನ್ಯ ಜನರಿಗೆ ಕೈಗೆಟುಕುವ ದರದ, ಸುಲಭವಾಗಿ ಲಭ್ಯವಿರುವ ಮತ್ತು ಸುರಕ್ಷಿತ ಪ್ರಯಾಣಕ್ಕಾಗಿ ಉಳಿದಿರುವ ಏಕೈಕ ಆಯ್ಕೆಯೆಂದರೆ ರೈಲು ಪ್ರಯಾಣ ಮಾತ್ರ. ಆದರೆ, ರೈಲ್ವೆ ಇಂದು ದುಬಾರಿಯಾಗುತ್ತಿದ್ದು, ಸಾಮಾನ್ಯರ ಕೈಗೆಟುಕದಂತಾಗುತ್ತಿದೆ. ಈ ಬೆಳವಣಿಗೆಗೆ ಕೇಂದ್ರದಲ್ಲಿ ಆಡಳಿತ ನಡೆಸಿದ ಬಂಡವಾಳಶಾಹಿ ಸರ್ಕಾರಗಳ ಜನವಿರೋಧಿ ನೀತಿಗಳೇ ಕಾರಣ– ಅದರಲ್ಲೂ ಭಾರತೀಯ ರೈಲ್ವೆಯಂತಹ ಬೃಹತ್ ಸಾರ್ವಜನಿಕ ಉದ್ದಿಮೆಯ ಖಾಸಗೀಕರಣ ಅಥವಾ ಕಾರ್ಪೊರೇಟೀಕರಣವೇ ಇದಕ್ಕೆ ಮೂಲ ಕಾರಣ.

## ಸಾರ್ವಜನಿಕ ಹಣದಿಂದ ನಿರ್ಮಾಣಗೊಂಡ ದೇಶದ ಜೀವನಾಡಿ

ಭಾರತೀಯ ರೈಲ್ವೆ ವಿಶ್ವದ ಅತಿದೊಡ್ಡ ರೈಲ್ವೆ ವ್ಯವಸ್ಥೆಗಳಲ್ಲಿ ಒಂದಾಗಿದೆ. ಪ್ರಸ್ತುತ, ಪ್ರತಿದಿನ 13,000 ರಿಂದ 13,500 ಪ್ರಯಾಣಿಕರ ರೈಲುಗಳನ್ನು ಮತ್ತು 11,000 ರಿಂದ 11,500 ಕ್ಕೂ ಹೆಚ್ಚು ಸರಕು ಸಾಗಣೆ ರೈಲುಗಳನ್ನು ಓಡಿಸುತ್ತಿದ್ದು, ದೇಶಾದ್ಯಂತ 7,000ಕ್ಕೂ ಹೆಚ್ಚು ನಿಲ್ದಾಣಗಳನ್ನು ಸಂಪರ್ಕಿಸುತ್ತಿದೆ. ಪ್ರತಿದಿನ ಸರಿಸುಮಾರು 2.3 ರಿಂದ 2.5 ಕೋಟಿ ಪ್ರಯಾಣಿಕರು ರೈಲಿನಲ್ಲಿ ಪ್ರಯಾಣಿಸುತ್ತಾರೆ. ಇದರ ಜೊತೆಗೆ, 68,000 ಕಿಲೋಮೀಟರ್‌ಗಿಂತಲೂ ಹೆಚ್ಚಿನ ವಿಸ್ತಾರವಾದ ಮಾರ್ಗದ ಮೂಲಕ, ಭಾರತೀಯ ರೈಲ್ವೆಯು ವಾರ್ಷಿಕವಾಗಿ 160 ಕೋಟಿ ಟನ್‌ಗಳಿಗೂ ಹೆಚ್ಚು ಸರಕನ್ನು ಸಾಗಿಸುತ್ತದೆ. ರೈಲ್ವೆ ವ್ಯವಸ್ಥೆಯಾದ್ಯಂತ ಸುಮಾರು 1,300 ಸರಕು ಸಾಗಣೆ ಶೆಡ್‌ಗಳು ಕಾರ್ಯನಿರ್ವಹಿಸುತ್ತಿವೆ. ಸುಮಾರು 3,00,000 ಲೋಡಿಂಗ್ ಕಾರ್ಮಿಕರು ಗುತ್ತಿಗೆ ಆಧಾರದ ಮೇಲೆ ಇಲ್ಲಿ ಕೆಲಸ ಮಾಡುತ್ತಿದ್ದಾರೆ.

ಸ್ವಾತಂತ್ರ್ಯಕ್ಕೆ ಮುನ್ನವೇ, ರೈಲ್ವೆಯು ಪರಸ್ಪರ ಸಂಪರ್ಕವಿಲ್ಲದ ವಿವಿಧ ಪ್ರಾಂತ್ಯಗಳ ಜನರನ್ನು ಬೆಸೆಯಲು ಸಹಾಯ ಮಾಡಿದ್ದಲ್ಲದೆ, ರಾಷ್ಟ್ರೀಯ ಏಕತೆ ಮತ್ತು ಸ್ವಾತಂತ್ರ್ಯ ಹೋರಾಟಕ್ಕೂ ಮಹತ್ವದ ಸೇವೆ ಸಲ್ಲಿಸಿದೆ. ಖಂಡಿತವಾಗಿಯೂ, ಸ್ವತಂತ್ರ ಭಾರತದ ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆಯಲ್ಲಿ ರೈಲ್ವೆ ವಹಿಸಿದ ಪಾತ್ರವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ನಿಜವಾಗಿಯೂ, ರೈಲ್ವೆ ಈ ದೇಶದ ಜೀವನಾಡಿ.

ಸ್ವಾತಂತ್ರ್ಯ ಬಂದ ತಕ್ಷಣ ದೇಶದ ಕೈಗಾರಿಕೀಕರಣದ ಪ್ರಕ್ರಿಯೆಯು ಬಂಡವಾಳಶಾಹಿ ಹಾದಿಯಲ್ಲಿ ಆರಂಭವಾದಾಗ, ಯಾವ ಬಂಡವಾಳಶಾಹಿಯೂ ಕಲ್ಲಿದ್ದಲು, ವಿದ್ಯುತ್, ರಸ್ತೆಗಳು, ರೈಲ್ವೆ ಮತ್ತು ದೂರಸಂಪರ್ಕದಂತಹ ಪ್ರಮುಖ ಮತ್ತು ಮೂಲಭೂತ ವಲಯಗಳನ್ನು ಸ್ಥಾಪಿಸಲು ಮುಂದಾಗಲಿಲ್ಲ. ಇಂತಹ ವಲಯಗಳಲ್ಲಿ ಲಾಭಾಂಶ ಬರಲು ದೀರ್ಘಕಾಲ ಕಾಯಬೇಕಾಗಿತ್ತು. ಮತ್ತು ಇಲ್ಲಿ ಹೂಡಿಕೆಗೆ ಬೃಹತ್ ಪ್ರಮಾಣದ ಬಂಡವಾಳದ ಅಗತ್ಯವಿತ್ತು. ಆದರೆ ಈ ಪ್ರಮುಖ ವಲಯಗಳನ್ನು ಸ್ಥಾಪಿಸದ ಹೊರತು, ಯಾವುದೇ ಬಂಡವಾಳಶಾಹಿಗೆ ತಕ್ಷಣದ ಲಾಭವನ್ನು ಗಳಿಸಲು ಗ್ರಾಹಕ ವಸ್ತುಗಳನ್ನು ಉತ್ಪಾದಿಸುವ ಮತ್ತು ಮಾರುಕಟ್ಟೆ ಸೃಷ್ಟಿಸುವ ಸ್ಥಿತಿ ಇರಲಿಲ್ಲ. ಆಗ ಆಳುವ ಬಂಡವಾಳಶಾಹಿ ವರ್ಗದ ಹಿತಾಸಕ್ತಿಯನ್ನು ಪೂರೈಸಲು ಮುಂದಾದ ಭಾರತ ಸರ್ಕಾರವು, ತೆರಿಗೆಯ ಮೂಲಕ ಸಂಗ್ರಹಿಸಿದ ಸಾರ್ವಜನಿಕ ಹಣದಿಂದ ಈ ಪ್ರಮುಖ, ಮೂಲಭೂತ ವಲಯಗಳನ್ನು ಆರಂಭಿಸಿತು. ಹೀಗೆ ಸಾರ್ವಜನಿಕ ವಲಯದ ಪರಿಕಲ್ಪನೆಯಾಗಿ ರೈಲ್ವೆಯ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಯಿತು. ಭಾರತದ ಆರ್ಥಿಕತೆಯನ್ನು ಆಗ 'ಮಿಶ್ರ ಆರ್ಥಿಕತೆ' ಎಂದು ಕರೆಯಲಾಗಿದ್ದರೂ, ನೆಹರೂ ಅವರ ಆರ್ಥಿಕ ನೀತಿಯ ಮೂಲ ಸಾರವು ಭಾರತದ ಬಂಡವಾಳಶಾಹಿಯ ಅಭಿವೃದ್ಧಿಯೇ ಆಗಿತ್ತು.

## ಯೋಜಿತ ರೀತಿಯಲ್ಲಿ ಖಾಸಗೀಕರಣ

ಭಾರತೀಯ ರೈಲ್ವೆಯ ಖಾಸಗೀಕರಣವನ್ನು 1994 ರಲ್ಲಿ ಪಿ.ವಿ. ನರಸಿಂಹರಾವ್ ಪ್ರಧಾನಿಯಾಗಿದ್ದ ಕಾಂಗ್ರೆಸ್ ನೇತೃತ್ವದ ಒಕ್ಕೂಟ ಸರ್ಕಾರವು ಸಮಗ್ರ ಜಾಗತೀಕರಣ ಯೋಜನೆಯ ಭಾಗವಾಗಿ ಪ್ರಾರಂಭಿಸಿತು. ನಂತರ, ಎಲ್ಲಾ ಕೇಂದ್ರ ಸರ್ಕಾರಗಳು ಇದನ್ನು ಮುಂದುವರಿಸಿಕೊಂಡು ಬಂದಿವೆ. ಈ ನಿಟ್ಟಿನಲ್ಲಿ ಮಹತ್ವದ ಕ್ರಮಗಳನ್ನು ಮೊದಲು ಕೈಗೊಂಡಿದ್ದು ವಾಜಪೇಯಿ ಪ್ರಧಾನಿಯಾಗಿದ್ದ ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಸ್ಥಾಪಿಸಿದ ರಾಕೇಶ್ ಮೋಹನ್ ಸಮಿತಿ (2001), ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ರಚಿಸಿದ ಸ್ಯಾಮ್ ಪಿತ್ರೋಡಾ ಸಮಿತಿ (2011) ಮತ್ತು ಪ್ರಸ್ತುತ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಸ್ಥಾಪಿಸಿದ ವಿವೇಕ್ ದೇವರಾಯ್ ಸಮಿತಿ (2014) ಖಾಸಗೀಕರಣದ ಅಬ್ಬರವನ್ನು ಮುಂದುವರಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಈ ಹಿಂದೆ ಭಾರತೀಯ ರೈಲ್ವೆಯ ಒಂದೇ ಸೂರಿನಡಿ ನಿರ್ವಹಿಸಲ್ಪಡುತ್ತಿದ್ದ ವಿವಿಧ ವಿಭಾಗಗಳನ್ನು ಈಗ ಖಾಸಗಿ ಬಂಡವಾಳಕ್ಕೆ ಮುಕ್ತಗೊಳಿಸಲಾಗುತ್ತಿದೆ. ರಾಕೇಶ್ ಮೋಹನ್ ಸಮಿತಿಯು ಭಾರತೀಯ ರೈಲ್ವೆಯು ಕೇವಲ ಸರಕು ಮತ್ತು ಪ್ರಯಾಣಿಕರ ಸಾಗಣೆಯಂತಹ ತನ್ನ "ಮೂಲ ಚಟುವಟಿಕೆಗಳಲ್ಲಿ" ಮಾತ್ರ ತೊಡಗಿಸಿಕೊಳ್ಳಬೇಕು ಮತ್ತು ಉಳಿದ ಎಲ್ಲಾ "ಮೂಲವಲ್ಲದ ಚಟುವಟಿಕೆಗಳನ್ನು" ಹೊರಗುತ್ತಿಗೆ ನೀಡಬೇಕು ಅಥವಾ ಕಾರ್ಪೊರೇಟೀಕರಣಗೊಳಿಸಬೇಕು ಎಂದು ಶಿಫಾರಸು ಮಾಡಿದೆ. ಸ್ಯಾಮ್ ಪಿತ್ರೋಡಾ ಸಮಿತಿಯು ಸಾರ್ವಜನಿಕ–ಖಾಸಗಿ ಸಹಭಾಗಿತ್ವದ (ಪಿಪಿಪಿ) ಹೆಸರಿನಲ್ಲಿ ಖಾಸಗೀಕರಣವನ್ನು ಇನ್ನಷ್ಟು ಮುನ್ನೆಲೆಗೆ ತಂದಿತು. ಪಿಪಿಪಿಯಲ್ಲಿ ಖಾಸಗಿ ಕಂಪನಿಗೆ ಲಾಭದ ಭರವಸೆ ಇರುತ್ತದೆ, ಆದರೆ ಸರ್ಕಾರವು ನಷ್ಟದ ಅಪಾಯವನ್ನು ಹೊರಬೇಕಾಗುತ್ತದೆ. ವಿವೇಕ್ ದೇವರಾಯ್ ಸಮಿತಿಯು ಪೂರ್ಣ ಪ್ರಮಾಣದ ಖಾಸಗೀಕರಣಕ್ಕೆ ಪ್ರಮುಖ ಕ್ರಮಗಳನ್ನು ಶಿಫಾರಸು ಮಾಡಿದೆ. ಇದರ ಭಾಗವಾಗಿಯೇ, ಪ್ರತ್ಯೇಕ ರೈಲ್ವೆ ಬಜೆಟ್ ಅನ್ನು ರದ್ದುಗೊಳಿಸಲಾಯಿತು. ಈ ಸಮಿತಿಯು ರೈಲ್ವೆಯನ್ನು 'ಹಳಿ ನಿರ್ವಹಣಾ ಕಂಪನಿ' ಮತ್ತು ಖಾಸಗಿ ಸಂಸ್ಥೆಗಳೊಂದಿಗೆ ಸ್ಪರ್ಧಿಸುವ 'ರೈಲು ಕಾರ್ಯಾಚರಣಾ ಕಂಪನಿಗಳಾಗಿ' ವಿಭಜಿಸಲು ಶಿಫಾರಸು ಮಾಡಿದೆ. ಇದು ಪ್ರಯಾಣಿಕ ಮತ್ತು ಸರಕು ರೈಲುಗಳನ್ನು ಓಡಿಸುವಂತಹ "ಮೂಲ ಚಟುವಟಿಕೆಗಳನ್ನು" ಸಹ ಖಾಸಗೀಕರಣಕ್ಕೆ ಮುಕ್ತಗೊಳಿಸಿತು, ಕೇವಲ ಹಳಿಗಳ ನಿರ್ವಹಣೆಯನ್ನು ಮಾತ್ರ ಸರ್ಕಾರದ ಬಳಿ ಉಳಿಸಿತು. ಈಗ, ಈ ಹಳಿಗಳ ನಿರ್ವಹಣೆಯನ್ನು ಸಹ ಬಹುಪಾಲು ಖಾಸಗಿ ಆಪರೇಟರ್‌ಗಳಿಗೆ ಹೊರಗುತ್ತಿಗೆ ನೀಡಲಾಗುತ್ತಿದೆ. ಹಿಂದೆ ಭಾರತೀಯ ರೈಲ್ವೆ ನಿರ್ವಹಿಸುತ್ತಿದ್ದ ಚಟುವಟಿಕೆಗಳನ್ನು ಪ್ರತ್ಯೇಕಿಸಲು IRCON, IRCTC, IRFC, CONCOR, MRVC, RVNL, KRCL, DFCCIL, HSRCL, RAILTEL, RITES, RLDA, IRSDC ಮುಂತಾದ ಸುಮಾರು ಎರಡು ಡಜನ್ ಸಾರ್ವಜನಿಕ ವಲಯದ ನಿಗಮಗಳನ್ನು ರಚಿಸಲಾಗಿದೆ. ಯೋಜನೆಯ ಪ್ರಕಾರ ಇವುಗಳನ್ನು ಹಂತ ಹಂತವಾಗಿ ಖಾಸಗೀಕರಣಗೊಳಿಸಲಾಗುತ್ತಿದೆ.

2021ರಲ್ಲಿ ಪ್ರಯಾಣಿಕ ಮತ್ತು ಸರಕು ರೈಲುಗಳನ್ನು ಓಡಿಸುವ "ಮೂಲ ಚಟುವಟಿಕೆಗಳ" ಖಾಸಗೀಕರಣ ಪ್ರಾರಂಭವಾದಾಗ, ಆಯ್ದ 109 ಲಾಭದಾಯಕ ಮಾರ್ಗಗಳಲ್ಲಿ 150 ಖಾಸಗಿ ಪ್ರಯಾಣಿಕ ರೈಲುಗಳನ್ನು ಪರಿಚಯಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು. ಹೆಚ್ಚು ಆದಾಯ ತರುವ ಮಾರ್ಗಗಳನ್ನು ಖಾಸಗಿ ಆಪರೇಟರ್‌ಗಳಿಗೆ ಹಸ್ತಾಂತರಿಸಲಾಗುತ್ತಿದೆ, ಆದರೆ ನಷ್ಟ ಉಂಟಾಗುವ ವಿಭಾಗಗಳನ್ನು ರೈಲ್ವೆಯ ಬಳಿಯೇ ಉಳಿಸಿಕೊಳ್ಳಲಾಗುತ್ತಿದೆ.



## ಮೋದಿ ನೇತೃತ್ವದ ಬಿಜೆಪಿ ಸರ್ಕಾರದಿಂದ ಸಂಪೂರ್ಣ ಖಾಸಗೀಕರಣಕ್ಕೆ ಒತ್ತು

ಪ್ರಸ್ತುತ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ನೀತಿಗಳು ರೈಲ್ವೆ ಸಾರಿಗೆಯ ಮೂಲ ಉದ್ದೇಶವನ್ನೇ ಬದಲಾಯಿಸಿವೆ. ಜನಸಾಮಾನ್ಯರ ಆದ್ಯತೆಯನ್ನು ಬದಿಗೊತ್ತಿ, ವಂದೇ ಭಾರತ್, ಅಮೃತ್ ಭಾರತ್, ದುರೊಂತೊ, ತೇಜಸ್ ಮತ್ತು ಶತಾಬ್ದಿಯಂತಹ ಐಷಾರಾಮಿ, ಅತೀ ವೇಗದ ರೈಲುಗಳಿಗೆ ಒತ್ತು ನೀಡಲಾಗುತ್ತಿದೆ. ಇವು ಕೇವಲ ಬೆರಳೆಣಿಕೆಯಷ್ಟು ಶ್ರೀಮಂತರ ಹಿತಾಸಕ್ತಿಯನ್ನಷ್ಟೇ ಕಾಯುತ್ತಿವೆ. ಒಂದು ವಂದೇ ಭಾರತ್ ಬೋಗಿಯ ವೆಚ್ಚವು ಸಾಮಾನ್ಯ ಎಕ್ಸ್‌ಪ್ರೆಸ್ ರೈಲುಗಳಲ್ಲಿ ಬಳಸುವ ಬೋಗಿಗಳ ವೆಚ್ಚಕ್ಕಿಂತ ಸುಮಾರು ಮೂರು ಪಟ್ಟು ಹೆಚ್ಚಾಗಿದೆ. ಕೈಗೆಟುಕುವ ದರದಲ್ಲಿ ಲಭ್ಯವಿದ್ದ ಪ್ಯಾಸೆಂಜರ್ ರೈಲುಗಳನ್ನು ವ್ಯವಸ್ಥಿತವಾಗಿ ಕಡಿಮೆ ಮಾಡಲಾಗುತ್ತಿದೆ. ದರ ಏರಿಸಿ ಹೆಚ್ಚಿನ ಹಣ ವಸೂಲಿ ಮಾಡಲು ಸಾಮಾನ್ಯ ಸ್ಲೀಪರ್ ಬೋಗಿಗಳನ್ನು ತೆಗೆದುಹಾಕಿ, ಎಸಿ ಸ್ಲೀಪರ್ ಬೋಗಿಗಳನ್ನು ಅಳವಡಿಸಲಾಗುತ್ತಿದೆ. ಸುಮಾರು ಶೇ. 90ರಷ್ಟು ಸ್ಲೀಪರ್ ಬೋಗಿಗಳನ್ನು ಎಸಿ ಬೋಗಿಗಳನ್ನಾಗಿ ಪರಿವರ್ತಿಸಲಾಗಿದೆ. ಪರಿಣಾಮವಾಗಿ, ರೈಲು ಪ್ರಯಾಣವು ದೊಡ್ಡ ಸಂಖ್ಯೆಯ ಜನರಿಗೆ ಎಟುಕದಂತಾಗುತ್ತಿದೆ. ವಿಧಿಯಿಲ್ಲದೆ ರೈಲುಗಳಲ್ಲಿ ಪ್ರಯಾಣಿಸುವವರಿಂದ ಕಾಯ್ದಿರಿಸದ ಮತ್ತು ಸ್ಲೀಪರ್ ಬೋಗಿಗಳು ಕಿಕ್ಕಿರಿದು ತುಂಬುತ್ತಿದ್ದು, ಶೌಚಾಲಯಗಳಿಗೂ ಹೋಗಲು ಆಸ್ಪದ ಇರುವುದಿಲ್ಲ. ಐಆರ್‌ಸಿಟಿಸಿ ಮೂಲಕ 2019 ರಲ್ಲಿ ಪ್ರಾರಂಭಿಸಲಾದ ಎರಡು ಖಾಸಗಿ 'ತೇಜಸ್' ರೈಲುಗಳಲ್ಲಿ, ವಿಮಾನಯಾನ ದರಗಳಂತೆಯೇ, ಪ್ರಯಾಣ ದರವು ಬೇಡಿಕೆಗೆ ಅನುಗುಣವಾಗಿ ದಿನದಿಂದ ದಿನಕ್ಕೆ ಬದಲಾಗುತ್ತದೆ. ಖಾಸಗಿ ರೈಲುಗಳ ಸಮಯಪಾಲನೆಯನ್ನು ಖಚಿತಪಡಿಸಿಕೊಳ್ಳಲು ಇತರ ರೈಲುಗಳನ್ನು ಬಿಟ್ಟು ಖಾಸಗಿ ರೈಲುಗಳಿಗೆ ಆದ್ಯತೆ ನೀಡುವಂತೆ ರೈಲ್ವೆ ಕಾರ್ಮಿಕರಿಗೆ ಸೂಚಿಸಿರುವುದರಿಂದ, ಇತರ ರೈಲುಗಳಿಗೆ ನಿಶ್ಚಿತ ಸಮಯವೆಂಬುದೇ ಇಲ್ಲದೆ, ಕಾಯುತ್ತ ಕುಳಿತಿರುವವರಿಂದ ಪ್ಲಾಟ್‌ಫಾರಂಗಳು ತುಂಬಿ ತುಳುಕುತ್ತವೆ.

ಆರಂಭದಲ್ಲಿ 1.1 ಲಕ್ಷ ಕೋಟಿ ರೂ. ಗೆ ಅಂದಾಜಿಸಲಾಗಿದ್ದ ಮುಂಬೈ ಮತ್ತು ಅಹಮದಾಬಾದ್ ನಡುವಿನ ಬುಲೆಟ್ ರೈಲು ಯೋಜನೆಯ ವೆಚ್ಚವು, ಈಗ 1.98 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಈ ಯೋಜನೆ ಯಾರಿಗಾಗಿ? ಕಷ್ಟಪಟ್ಟು ದುಡಿಯುವ ಸಾಮಾನ್ಯ ಜನರಿಗಾಗಿಯೇ ಅಥವಾ ಅಂಬಾನಿ–ಅದಾನಿಯಂತಹ ಉನ್ನತ ವರ್ಗದವರಿಗಾಗಿಯೇ?

ಪಾರ್ಸೆಲ್ ಸೇವೆ, ಸಾರ್ವಜನಿಕ ಹಣದಿಂದ ಅಭಿವೃದ್ಧಿಪಡಿಸಲಾದ ವೇಟಿಂಗ್ ಹಾಲ್‌ಗಳು, ಸಾರ್ವಜನಿಕ ಶೌಚಾಲಯಗಳು, ಕುಡಿಯುವ ನೀರಿನ ಪೂರೈಕೆ ಮತ್ತು ಪಾರ್ಕಿಂಗ್ ಸ್ಥಳಗಳಂತಹ ಸೌಲಭ್ಯಗಳನ್ನು ಖಾಸಗಿ ಗುತ್ತಿಗೆದಾರರಿಗೆ ಹಸ್ತಾಂತರಿಸಲಾಗುತ್ತಿದೆ. ಈ ಮೊದಲು, ರೈಲ್ವೆ ಕ್ಯಾಟರಿಂಗ್ ವಿಭಾಗವು ಕೈಗೆಟುಕುವ ದರದಲ್ಲಿ ಉತ್ತಮ ಗುಣಮಟ್ಟದ ಆಹಾರವನ್ನು ಒದಗಿಸುತ್ತಿತ್ತು ಮತ್ತು ಒಂದು ಲಕ್ಷಕ್ಕೂ ಹೆಚ್ಚು ಕಾರ್ಮಿಕರಿಗೆ ಉದ್ಯೋಗ ನೀಡಿತ್ತು. ಆದರೆ ಇಂಡಿಯನ್ ರೈಲ್ವೆ ಕ್ಯಾಟರಿಂಗ್ ಅಂಡ್ ಟೂರಿಸಂ ಕಾರ್ಪೊರೇಷನ್ ಲಿಮಿಟೆಡ್‌ಗೆ(IRCTC) ವಹಿಸಿದ ನಂತರ, ಕ್ಯಾಟರಿಂಗ್ ಲಾಭವನ್ನು ಈಗ ಖಾಸಗಿ ಗುತ್ತಿಗೆದಾರರು ಕಬಳಿಸುತ್ತಿದ್ದಾರೆ. ಐಆರ್‌ಸಿಟಿಸಿ ಪ್ರತಿದಿನ ಸುಮಾರು 15 ಲಕ್ಷ ಊಟಗಳನ್ನು ಮಾರಿ ಅಪಾರ ಲಾಭ ಗಳಿಸುತ್ತಿದೆ, ಆದರೆ ಕಾರ್ಮಿಕರ ಹಕ್ಕುಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಅಲ್ಲದೆ, ಆಹಾರದ ಗುಣಮಟ್ಟವು ಗಣನೀಯವಾಗಿ ಕುಸಿದಿದೆ. ಆಹಾರದಲ್ಲಿ ಕೀಟಗಳು ಮತ್ತು ಸತ್ತ ಹಲ್ಲಿಗಳು ಸಹ ಕಂಡುಬರುತ್ತಿವೆ.

## ಸಿಬ್ಬಂದಿ ಕಡಿತ, ಸುರಕ್ಷತೆಗೆ ಧಕ್ಕೆ

ಖಾಸಗೀಕರಣದ ಕ್ರಮಗಳ ನಂತರ ಖಾಯಂ ಉದ್ಯೋಗಿಗಳ ಸಂಖ್ಯೆ ಸತತವಾಗಿ ಕುಸಿಯುತ್ತಿದೆ. ಭಾರತೀಯ ರೈಲ್ವೆಯಲ್ಲಿ 13,61,519 ಮಂಜೂರಾದ ಹುದ್ದೆಗಳಿದ್ದವು. 2024ರ ವೇಳೆಗೆ ಈ ಸಂಖ್ಯೆಯು 12,52,180ಕ್ಕೆ ಇಳಿಕೆಯಾಗಿದೆ. 2010ರಿಂದ ಈಚೆಗೆ, ಮಂಜೂರಾದ ಹುದ್ದೆಗಳ ಪೈಕಿ ಶೇ. 57.7 ರಷ್ಟು ಅಂದರೆ 1,67,633 ವರ್ಕ್‌ಶಾಪ್ ಕುಶಲಕರ್ಮಿಗಳ ಹುದ್ದೆಗಳನ್ನು ರದ್ದುಗೊಳಿಸಲಾಗಿದೆ. ಈ ಕೆಲಸಗಳನ್ನು ಈಗ ಹೊರಗುತ್ತಿಗೆ ನೀಡಲಾಗುತ್ತಿದೆ ಅಥವಾ ಗುತ್ತಿಗೆ ಕಾರ್ಮಿಕರಿಗೆ ವಹಿಸಲಾಗುತ್ತಿದೆ. ಸಿಗ್ನಲಿಂಗ್, ಕಾರ್ಯಾಚರಣೆ, ಎಂಜಿನಿಯರಿಂಗ್ ಮತ್ತು ಎಲೆಕ್ಟ್ರಿಕಲ್ ವಿಭಾಗಗಳಲ್ಲಿ ಖಾಲಿ ಇರುವ ಹುದ್ದೆಗಳು ಹಾಗೆಯೇ ಉಳಿದಿವೆ. ಲೋಕೋ ಪೈಲಟ್‌ಗಳು, ಹಳಿ ನಿರ್ವಹಣೆದಾರರು ಮತ್ತು ರೈಲು ವ್ಯವಸ್ಥಾಪಕರಂತಹ ನಿರ್ಣಾಯಕ ಹುದ್ದೆಗಳನ್ನು ಭರ್ತಿ ಮಾಡದೆ ಖಾಲಿ ಬಿಡಲಾಗಿದೆ.

ಇರುವ ಉದ್ಯೋಗಿಗಳು ಸತತವಾಗಿ 12 ರಿಂದ 20 ಗಂಟೆಗಳ ಕಾಲ ಕೆಲಸ ಮಾಡುವ ಒತ್ತಾಯಕ್ಕೊಳಪಡುತ್ತಿದ್ದಾರೆ. ವಿಶ್ರಾಂತಿಯ ಕೊರತೆ, ಮಾನಸಿಕ ಒತ್ತಡ ಮತ್ತು ಅತಿಯಾದ ದಣಿವು ಅಪಘಾತಗಳಿಗೆ ಪ್ರಮುಖ

8ನೇ ಪುಟಕ್ಕೆ

## ರಾಯಚೂರು, ಎಐಕೆಕೆಎಂಎಸ್: ದಕ್ಷಿಣ ಭಾರತ ಅಧ್ಯಯನ ಶಿಬಿರ

# ಚರ್ಚೆ: ಕೃಷಿ ಕ್ಷೇತ್ರದಲ್ಲಿ ಬಂಡವಾಳಶಾಹಿ ಆರ್ಥಿಕತೆಯ ಉಗಮ

"ಇಂದು ಒಂದಾದ ಮೇಲೊಂದು ರೈತ–ಕೃಷಿ ವಿರೋಧಿ ನೀತಿಗಳನ್ನು ಕೇಂದ್ರ ಬಿಜೆಪಿ ಸರ್ಕಾರ ಜಾರಿಗೆ ತರುತ್ತಿದೆ. ಅಥವಾ, ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ವ್ಯಕ್ತವಾದಂತೆ, ಕೇವಲ ಅಲಂಕಾರಿಕ ಯೋಜನೆಗಳನ್ನು ರಾಜ್ಯ ಸರ್ಕಾರ ಘೋಷಿಸುತ್ತದೆಯೇ ಹೊರತು, ರೈತರ ನಿಜವಾದ ಹಕ್ಕೊತ್ತಾಯಗಳಾದ ಬೆಂಬಲ ಬೆಲೆ, ರಾಜ್ಯ ಸರ್ಕಾರದ ಖರೀದಿ, ನರೇಗಾ ಮುಂದುವರಿಕೆ, ಹಾಲು ಉತ್ಪಾದಕರಿಗೆ ನ್ಯಾಯಯುತ ಬೆಲೆಗಳು ಬಜೆಟ್‌ನಲ್ಲಿ ಕಾಣಿಸುವುದಿಲ್ಲ. ಎಲ್ಲಾ ರಾಜ್ಯ ಸರ್ಕಾರಗಳೂ ಕೇಂದ್ರದ ದಾರಿಯನ್ನೇ ತುಳಿಯುತ್ತಿವೆ. ಈ ನೀತಿಗಳನ್ನು ಯಾರ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ತರಲಾಗುತ್ತಿದೆ ಎನ್ನುವುದು ಮುಖ್ಯ. ಇಲ್ಲವಾದರೆ ರೈತ ಚಳುವಳಿಗಳು ಕೇವಲ ಕೆಲವು ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗುತ್ತವೆ. ಆದರೆ ಸಮಸ್ಯೆಯನ್ನು ಮೂಲಭೂತವಾಗಿ ಬಗೆಹರಿಸಲು ಸಾಧ್ಯವಾಗುವುದಿಲ್ಲ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಆರಂಭದಲ್ಲೇ, ಅಖಿಲ ಭಾರತ ರೈತ–ಕೃಷಿ ಕಾರ್ಮಿಕ ಸಂಘಟನೆಯ (ಎಐಕೆಕೆಎಂಎಸ್) ಸಂಸ್ಥಾಪಕರು ಮತ್ತು ಮಹಾನ್ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್, ಅಂದಿನ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ, ಶೋಷಕ ಬಂಡವಾಳಶಾಹಿ ವರ್ಗ ಅಧಿಕಾರಕ್ಕೆ ಬಂದಿದೆ; ಸಾಮಾನ್ಯ ಜನತೆಗೆ ನಿಜವಾದ ಸ್ವಾತಂತ್ರ್ಯ ದೊರಕಿಲ್ಲ. ಬಂಡವಾಳಿಗರಿಂದ ದುಡಿಯುವ ಜನರ ಶೋಷಣೆ ನಡೆಯುತ್ತದೆ, ಸರ್ಕಾರಗಳು ಅವರ ಹಿತವನ್ನು ಕಾಪಾಡುತ್ತವೆ. ಆದ್ದರಿಂದ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸುವ ಹೋರಾಟ ನಡೆಯಬೇಕು ಎಂದು ಕರೆಯಿತ್ತರು. ಅವರು ವಿಶೇಷವಾಗಿ ಅಂದಿನ ದಿನಗಳಲ್ಲೇ ಕೃಷಿಯೊಳಗೂ ಬಂಡವಾಳಶಾಹಿ ಆರ್ಥಿಕತೆ ಬಂದಿದೆ; ಕೇವಲ ಊಳಿಗಮಾನ್ಯ ವ್ಯವಸ್ಥೆಯ ಪಳೆಯುಳಿಕೆಗಳಿವೆ ಎಂದು ತಮ್ಮ ಅಮೋಘ ವಿಶ್ಲೇಷಣೆಯೊಂದಿಗೆ ತೋರಿಸಿಕೊಟ್ಟರು.

ಆದರೆ ಅಂದಿನ ಎಡಪಕ್ಷಗಳ ರೈತ ಸಂಘಟನೆಗಳು ನಮ್ಮ ದೇಶದಲ್ಲಿ ಜಮೀನ್ದಾರಿ ಪದ್ಧತಿಯಿದೆ ಮತ್ತು ಭಾರತ ಅರೆ ವಸಾಹತು ದೇಶವಾಗಿದೆ ಎಂದು ಹೇಳುತ್ತಾ ಗಾಳಿಯಲ್ಲಿ ಗುದ್ದಾಟ ನಡೆಸಿದರು. ಹಾಗಾಗಿ ಅವರ ಹೋರಾಟ ಅನ್ಯಾಯಗಳ ಗಂಗೋತ್ರಿಯಾದ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋಗಲಿಲ್ಲ; ಬದಲಿಗೆ ಅವರು ಬಂಡವಾಳಿಗರ ಸ್ನೇಹಿತರಾದರು. ಆದ್ದರಿಂದ ಎಐಕೆಕೆಎಂಎಸ್, ಕಾಮ್ರೇಡ್ ಶಿವದಾಸ್ ಘೋಷರ ಚಿಂತನೆಗಳ ಆಧಾರದ ಮೇಲೆ ಕ್ರಾಂತಿಕಾರಿ ರೈತ ಚಳುವಳಿಯನ್ನು ಕಟ್ಟುತ್ತಿದೆ. ಈ ನಿಟ್ಟಿನಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರನ್ನು ವೈಚಾರಿಕವಾಗಿ ಸಿದ್ಧಗೊಳಿಸುವ ಉದ್ದೇಶದಿಂದ, ರೈತ–ಕೃಷಿ ಕಾರ್ಮಿಕರ ಸಮಸ್ಯೆಗಳ ಕುರಿತು ಆಳವಾಗಿ ಅರಿತುಕೊಳ್ಳುವ ಗುರಿಯೊಂದಿಗೆ 'ದಕ್ಷಿಣ ಭಾರತ ಮಟ್ಟದ ರೈತ–ಕೃಷಿ ಕಾರ್ಮಿಕರ ಅಧ್ಯಯನ ಶಿಬಿರ'ವನ್ನು ಸಂಘಟಿಸಲಾಗಿತ್ತು.

ಕರ್ನಾಟಕದ ರಾಯಚೂರಿನಲ್ಲಿ ಫೆಬ್ರವರಿ 21 ಮತ್ತು 22 ರಂದು ಎರಡು ದಿನಗಳ ಕಾಲ ನಡೆದ ಶಿಬಿರದಲ್ಲಿ ಕರ್ನಾಟಕ, ತಮಿಳು ನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಪುದುಚೇರಿ ರಾಜ್ಯಗಳಿಂದ ರೈತ–ಕೃಷಿ ಕಾರ್ಮಿಕರ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಶಿಬಿರವನ್ನು ಎಐಕೆಕೆಎಂಎಸ್ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಸತ್ಯವಾನ್ ಮತ್ತು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಂಕರ್ ಘೋಷ್ ನಡೆಸಿಕೊಟ್ಟರು.

ಕಾ. ಸತ್ಯವಾನ್ ಅಧ್ಯಯನ ಶಿಬಿರದ ಉದ್ದೇಶದ ಕುರಿತು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದರು: "ಭಾರತದಲ್ಲಿ ನಾವು ಕೇವಲ ರೈತರು, ಕೃಷಿ ಕಾರ್ಮಿಕರು, ಗ್ರಾಮೀಣ ಬಡಜನತೆ ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ಪ್ರಬಲ ಹೋರಾಟ ಕಟ್ಟುವುದಷ್ಟೇ ಅಲ್ಲ, ಅಂತಿಮವಾಗಿ ನಮ್ಮನ್ನು, ಸಮಾಜವನ್ನು ಮತ್ತು ಕೃಷಿಯನ್ನೂ ವಿಮುಕ್ತಿಗೊಳಿಸಬೇಕು. ಈ ಅಧ್ಯಯನ ಶಿಬಿರದ ಉದ್ದೇಶ ಕೇವಲ ತಿಳುವಳಿಕೆ ಮೂಡಿಸುವುದಷ್ಟೇ ಅಲ್ಲ; ರೈತ–ಕಾರ್ಮಿಕರನ್ನು ಹೇಗೆ ವೈಚಾರಿಕವಾಗಿ ಸಿದ್ಧಗೊಳಿಸಬೇಕೆಂದರೆ, ಅವರು ಸ್ಥಳೀಯ ಪಟ್ಟಭದ್ರ ಹಿತಾಸಕ್ತಿಗಳ, ರಾಜ್ಯದ ಆಳ್ವಿಕರ, ಏಕಸ್ವಾಮ್ಯಾಧಿಪತಿಗಳ, ಕಾರ್ಪೊರೇಟ್ ಮನೆತನಗಳ, ಅಂದರೆ ಬಂಡವಾಳಶಾಹಿಗಳ ವಿರುದ್ಧ ಪ್ರಬಲ ಹೋರಾಟವನ್ನು ಕಟ್ಟುವಂತಾಗಬೇಕು. ಇಂದಿನ ರೈತ ಚಳುವಳಿಯು ಹಿಂದಿನಂತಲ್ಲ. ಈಗ ಸಾಕಷ್ಟು ಬದಲಾವಣೆಗಳಾಗಿವೆ. ಭೂಮಿಯ ಸಂಬಂಧಗಳು ಬದಲಾಗುತ್ತಿವೆ. ಭೂಮಿ ಮಾರಾಟದ ಸರಕು, ಕೃಷಿ ಉತ್ಪನ್ನಗಳು ಮಾರುಕಟ್ಟೆಯ ಸರಕುಗಳಾಗಿವೆ. ಸರ್ಕಾರ ಸಹಕಾರ ವ್ಯವಸ್ಥೆಯನ್ನು ನಾಶ ಮಾಡುತ್ತಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರೈತ ಉತ್ಪಾದಕರ ಸಂಘಟನೆಯು (ಎಫ್‌ಪಿಓ)ಜಾರಿಯಾಗುತ್ತಿದೆ. ಇದು ಅಂತಿಮವಾಗಿ ಕೆಲವೇ ಜನರ ಹಿಡಿತಕ್ಕೆ ಹೋಗುತ್ತದೆ. ಕೃಷಿ ಒಳಸುರಿಗಳ ಬೆಲೆ ತೀವ್ರವಾಗಿ ಹೆಚ್ಚಾಗುತ್ತಿದೆ. ಕೇಂದ್ರ ಸರ್ಕಾರ ಬೆಂಬಲ ಬೆಲೆ ಕಾನೂನುಬದ್ಧಗೊಳಿಸದೆ ವಚನಭ್ರಷ್ಟವಾಗಿದೆ. ಬೀಜ ಮಸೂದೆ ರೈತರಿಂದ ಬೀಜ ಕಸಿದುಕೊಂಡಿದೆ. ರಸಗೊಬ್ಬರ, ಬೀಜ, ಮುಂತಾದವುಗಳಿಗೆ ಸಬ್ಸಿಡಿ ಕಡಿತ ಮಾಡಲಾಗಿದೆ. ಜಾಗತೀಕರಣದ ನಂತರ ಬಂದ ಪೇಟೆಂಟ್ ರೈತರ ಪಾರಂಪರಿಕ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ. ಗ್ರಾಮೀಣ ಬಡಜನತೆ ಉದ್ಯೋಗದ ಅವಕಾಶದಿಂದ ವಂಚಿತರಾಗಿದ್ದಾರೆ."

ಅವರು ಕೊನೆಯಲ್ಲಿ, "ಶೋಷಿತ ವರ್ಗದ ಜನತೆ ಸಮಸ್ಯೆಗಳು ಎಲ್ಲಿಂದ ಬರುತ್ತಿವೆ ಎನ್ನುವುದನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು. ರೈತರು, ಕೃಷಿ ಕಾರ್ಮಿಕರು ಮತ್ತು ಗ್ರಾಮೀಣ ಬಡಜನತೆಯೆಡೆಗೆ ಈ ವಿಚಾರಗಳನ್ನು ಕೊಂಡೊಯ್ದು, ಅವರನ್ನು ಕ್ರಾಂತಿಕಾರಿ ರೈತ ಸಂಘಟನೆಯಾದ ಎಐಕೆಕೆಎಂಎಸ್ ಅಡಿಯಲ್ಲಿ ಸಂಘಟಿಸಿ, ಪ್ರಸಕ್ತ ಶೋಷಕ ವ್ಯವಸ್ಥೆಯಾದ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟ ಕಟ್ಟುವತ್ತ ಮುನ್ನಡೆಸಬೇಕು" ಎಂದು ಕರೆಯಿತ್ತರು.

ಕಾ. ಶಂಕರ್ ಘೋಷ್, ಸ್ವಾತಂತ್ರ್ಯಪೂರ್ವದಲ್ಲಿ ಭಾರತದ ಕೃಷಿಯಲ್ಲಿ ಬಂಡವಾಳವಾದ ಹೇಗೆ ಬೆಳೆಯಿತು ಎನ್ನುವುದರ ಬಗ್ಗೆ ದೀರ್ಘವಾಗಿ ಚರ್ಚೆ ನಡೆಸುತ್ತಾ ಹೇಳಿದರು: "ಭಾರತದಲ್ಲಿ ಬ್ರಿಟಿಷರು ಕಾಲಿಡುವ ಮುನ್ನವೇ ವ್ಯಾಪಾರಿ ಬಂಡವಾಳ ಸಾಕಷ್ಟು ಬೆಳೆದಿತ್ತು. ಭಾರತದ ಉತ್ಪನ್ನಗಳು ದೂರದ ದೇಶಗಳಲ್ಲಿ ಮಾರಾಟವಾಗುತ್ತಿದ್ದವು. ಬ್ರಿಟಿಷರು ಭಾರತಕ್ಕೆ ಕೊಳ್ಳಲು ಬಂದರೇ ಹೊರತು ಮಾರಾಟಕ್ಕಲ್ಲ. ಇಲ್ಲಿನ ಹತ್ತಿ, ಮಸ್ಲಿನ್ ಬಟ್ಟೆ, ಸಾಂಬಾರ ಪದಾರ್ಥಗಳು, ಮುಂತಾದವುಗಳನ್ನು ಕೊಳ್ಳಲು ಫ್ರೆಂಚರು, ಪೋರ್ಚುಗೀಸರು ಮತ್ತು ಬ್ರಿಟಿಷರು ಬರುತ್ತಿದ್ದರು. ಆಗ ಈಸ್ಟ್ ಇಂಡಿಯಾ ಕಂಪೆನಿ ವ್ಯಾಪಾರಿ ಬಂಡವಾಳದ ಕಂಪೆನಿಯಾಗಿತ್ತು. ಅದು ನಂತರದಲ್ಲಿ ಇಲ್ಲಿನ ಸ್ಥಳೀಯ ರಾಜರುಗಳನ್ನು – ಟಿಪ್ಪು ಸುಲ್ತಾನ್, ಸಿರಾಜ್–ಉದ್–ದೌಲಾರನ್ನು ಸೋಲಿಸಿ ಮೊದಲು ಬಂಗಾಲ, ನಂತರದಲ್ಲಿ ಮದ್ರಾಸ್ ಹಾಗೂ ನಂತರದಲ್ಲಿ ದಕ್ಷಿಣ ಭಾಗದಲ್ಲಿ ಅಧಿಕಾರವನ್ನು ಸ್ಥಾಪಿಸಿತು.

ಅದಕ್ಕೂ ಮೊದಲು ಭಾರತದಲ್ಲಿ ಭೂಮಿ ಯಾರ ಸ್ವಂತ ಆಸ್ತಿಯೂ ಆಗಿರಲಿಲ್ಲ. ಅದರ ಮೇಲೆ ರಾಜನಿಗೂ ವೈಯಕ್ತಿಕ ಹಕ್ಕಿರಲಿಲ್ಲ. ಬ್ರಿಟಿಷರು ಖಾಯಂ ಕಂದಾಯದ ಹೆಸರಿನಲ್ಲಿ ಜನರಿಗೆ ನಿಗದಿತ ಕಂದಾಯ ಪದ್ಧತಿಯನ್ನು ಜಾರಿಗೆ ತಂದರು. ಕಂದಾಯ ವಸೂಲಿಯ ಜವಾಬ್ದಾರಿಯನ್ನು ಜಮೀನ್ದಾರರಿಗೆ ನೀಡಿದರು. ಇದು ಜಮೀನ್ದಾರರಿಗೆ ರೈತರನ್ನು ಮತ್ತು ಕೃಷಿ ಕಾರ್ಮಿಕರನ್ನು ಶೋಷಣೆ ಮಾಡಲು ಅವಕಾಶ ನೀಡಿತು. ಜೊತೆಗೆ ಅವರಿಗೆ ಬ್ರಿಟಿಷರ ಬೆಂಬಲವಿತ್ತು. ಬ್ರಿಟಿಷ್ ಸರ್ಕಾರ ಕಂದಾಯವನ್ನು ಹಣದ ರೂಪದಲ್ಲಿ ಸಂಗ್ರಹಿಸಲು ಆರಂಭಿಸಿತು. ಇದರಿಂದ ಕೃಷಿ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಮಾರಾಟದ ವಸ್ತುವಾದವು. ಅವನ್ನು ಮಾರಾಟ ಮಾಡದೆ ರೈತರಿಗೆ ಹಣವನ್ನು ಪಡೆಯಲು ಬೇರೆ ದಾರಿಯಿರಲಿಲ್ಲ. ಈ ಉತ್ಪನ್ನಗಳನ್ನು ಭಾರತದ ಮತ್ತು ಬ್ರಿಟನ್ನಿನ ವ್ಯಾಪಾರಿ ಬಂಡವಾಳಿಗರು ಅಲ್ಪ ಬೆಲೆಗೆ ಖರೀದಿಸಿ, ದುಬಾರಿ ಬೆಲೆಗೆ ಮಾರಾಟ ಮಾಡಿದರು. ಇದು ಭಾರತದ ಭೂ ಸಂಬಂಧದಲ್ಲಿ ಮೂಲಭೂತ ಬದಲಾವಣೆ ತಂದಿತು.

ಇದರಿಂದ ಕೃಷಿ ಉತ್ಪಾದನೆಯ ಉದ್ದೇಶವು ಸ್ವಂತ ಅನುಭೋಗದ ಬದಲು ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಉತ್ಪಾದನೆ ಮಾಡುವಂತೆ ಬದಲಾಯಿತು. ಇಲ್ಲಿಂದ ಬಂಡವಾಳಶಾಹಿ ವ್ಯವಸ್ಥೆಯ ಪ್ರಕ್ರಿಯೆಯು ಆರಂಭವಾಯಿತು. ಆದ್ದರಿಂದ ಭಾರತಕ್ಕೆ ಸ್ವಾತಂತ್ರ್ಯ ಬರುವ ಮುನ್ನವೇ ಕೃಷಿಯಲ್ಲಿ ಬಂಡವಾಳವಾದದ ಬೆಳವಣಿಗೆಯಾಗಿತ್ತು. ಬಂಡವಾಳಿಗರು ಅಧಿಕಾರಕ್ಕೆ ಬಂದ ಮೇಲೆ ಕೃಷಿಯಲ್ಲಿ ಭೂ ಸಂಬಂಧಗಳು ಸಂಪೂರ್ಣವಾಗಿ ಬಂಡವಾಳಶಾಹಿ ಸಂಬಂಧವಾಗಿ ಬೆಳೆದವು."

ಅವರು, ಸ್ವಾತಂತ್ರ್ಯ ಹಾಗೂ ಜಾಗತೀಕರಣದ ನಂತರ ಸಂದರ್ಭವನ್ನು ವಿವರಿಸುತ್ತಾ ಹೇಳಿದರು: "ಸ್ವಾತಂತ್ರ್ಯಾನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್, ಭೂಮಿಯನ್ನು ಭೂಹೀನ ರೈತರಿಗೆ ವಿತರಣೆ ಮಾಡಲಿಲ್ಲ. 'ಭೂಹೀನ ರೈತರಿಗೆ ಭೂಮಿ' ಕೊಡಬೇಕು ಎಂದು ಸ್ವಾತಂತ್ರ್ಯ ಹೋರಾಟಗಾರರಾದ ನೇತಾಜಿ, ಭಗತ್ ಸಿಂಗ್, ಶೇಖ್ ಅಬ್ದುಲ್ಲಾ ಮತ್ತು ಕ್ರಾಂತಿಕಾರಿ ಪಂಥದ ಇನ್ನಿತರ ನಾಯಕರು ಆಗ್ರಹಿಸಿದರು. ಆದರೆ ಗಾಂಧಿವಾದಿಗಳು, ಸಾವರ್ಕರ್, ಗೋಲ್ವಾರ್ಕರ್, ಆರ್‌ಎಸ್‌ಎಸ್, ಮುಸ್ಲಿಂ ಮೂಲಭೂತವಾದಿಗಳು ವಿರೋಧಿಸಿದರು. ನೆಹರೂ ಸಹ ಭೂ ಸುಧಾರಣೆ ಮಾಡಲಿಲ್ಲ. ಅಂದಿನಿಂದಲೂ ಬೇನಾಮಿ ಭೂಮಿಯನ್ನು ಭೂಹೀನ ರೈತರಿಗೆ ನೀಡಬೇಕೆಂದು ಎಐಕೆಕೆಎಂಎಸ್ ಒತ್ತಾಯಿಸುತ್ತಲೇ ಬಂದಿದೆ. ನಂತರ ನಡೆದ ಭೂ ಸುಧಾರಣೆಗಳು ಕೇವಲ ಬಾಯುಪಚಾರಕ್ಕೆ ಸೀಮಿತವಾದವು.

ನಂತರದಲ್ಲಿ ಕೃಷಿ ನೀತಿಗಳನ್ನು ಮಾರ್ಪಾಡಿಸಿ ಬಂಡವಾಳಿಗರಿಗೆ ಪೂರಕವಾಗುವಂತೆ ಕೃಷಿ ಅಭಿವೃದ್ಧಿಯನ್ನು ಮಾಡಲಾಯಿತು. ಬೀಜ, ರಸಗೊಬ್ಬರ, ಕೀಟನಾಶಕ, ಮುಂತಾದ ಕೃಷಿ ಒಳಸುರಿಗಳ ಕಾಯ್ದೆಗಳನ್ನು ಬದಲಾಯಿಸಿ, ಖಾಸಗಿ ಕಂಪೆನಿಗಳ ಮಡಿಲಿಗೆ ಹಾಕಲಾಯಿತು. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳನ್ನು ಜಾರಿಗೊಳಿಸಿದ ಮೇಲಂತೂ ಈ ಪ್ರಕ್ರಿಯೆಯು ವೇಗವನ್ನು ಪಡೆಯಿತು. ಈಗ ಕೃಷಿಯನ್ನು ಸಂಪೂರ್ಣವಾಗಿ ದೈತ್ಯ ಕಾರ್ಪೊರೇಟ್ ಕಂಪೆನಿಗಳ ಕಪಿಮುಷ್ಟಿಗೆ ಕೊಡುವುದು ನಡೆಯುತ್ತಿದೆ. ರೈತರು ಬೀಜ, ರಸಗೊಬ್ಬರ, ಕೀಟನಾಶಕ, ಮುಂತಾದವುಗಳಿಗೆ ಕಾರ್ಪೊರೇಟ್ ಕಂಪೆನಿಗಳ ಕೃಪಾಕಟಾಕ್ಷದಲ್ಲಿರಬೇಕು, ದುಬಾರಿ ಹಣ ತೆರಬೇಕು. ಆದರೆ ಆದಾಯ ಮಾತ್ರ ಇಳಿಮುಖವಾಗುತ್ತಿದೆ. ಇದರಿಂದಾಗಿ ರೈತರ ಆತ್ಮಹತ್ಯೆ ಹೆಚ್ಚಾಗುತ್ತಿದೆ.

ಆದರೆ ರೈತರು ಬಲಹೀನರಲ್ಲ. ವಾಸ್ತವದಲ್ಲಿ ಸರ್ಕಾರ ಬಲಹೀನ. ದೆಹಲಿಯಲ್ಲಿ ನಡೆದ ರೈತ ಚಳುವಳಿಯು ಅದನ್ನು ಸಾಬೀತುಪಡಿಸಿದೆ. ಈ ಅಧ್ಯಯನ ಶಿಬಿರವು ಹೋರಾಟದ ಮುಂದಿನ ಹಾದಿಯನ್ನು ಸ್ಪಷ್ಟವಾಗಿ ತೋರಿಸಿದೆ. ರೈತರು ಮತ್ತು ಕೃಷಿ ಕಾರ್ಮಿಕರು ಸಂಘಟಿತರಾಗಬೇಕು. ಸರ್ಕಾರ ತಾನು ಜಾರಿಗೆ ತಂದ ಮೂರು ಕರಾಳ ಕೃಷಿ ನೀತಿಗಳನ್ನು ವಾಪಸ್ ತೆಗೆದುಕೊಳ್ಳುವಂತೆ ಮಾಡಿ ರೈತರು ಇತಿಹಾಸ ಸೃಷ್ಟಿಸಿದರು. ಈಗ ಜಾರಿಯಾಗುತ್ತಿರುವ ಕೃಷಿ ನೀತಿಗಳ ವಿರುದ್ಧ ಅದೇ ರೀತಿ ಇತಿಹಾಸವನ್ನು ಸೃಷ್ಟಿ ಮಾಡುತ್ತಾರೆ. ನಾವು ಹೋರಾಡುತ್ತೇವೆ, ನಾವು ಗೆಲ್ಲುತ್ತೇವೆ" ಎಂದು ಹೇಳಿದರು.

ಎಐಕೆಕೆಎಂಎಸ್ ರಾಷ್ಟ್ರೀಯ ಉಪಾಧ್ಯಕ್ಷರಾದ ಕಾ. ಸುನೀತ್ ಕುಮಾರ್, 'ಮೈಸೂರು ಸಂಸ್ಥಾನದಲ್ಲಿ ಭೂ ಸಂಬಂಧಗಳು', ಅಖಿಲ ಭಾರತ ಸೆಕ್ರೆಟೇರಿಯಟ್ ಸದಸ್ಯರಾದ ಕಾ. ಆಜ಼ೀಜ಼್, 'ಕೇರಳದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಭೂ ಸಂಬಂಧಗಳು' ಮತ್ತು ಮತ್ತೊಬ್ಬ ಅಖಿಲ ಭಾರತ ಸೆಕ್ರೆಟೇರಿಯಟ್ ಸದಸ್ಯರಾದ ಕಾ. ಗಿರೀಶ್ 'ಹೈದರಾಬಾದಿನ ನಿಜಾಮನ ಕಾಲದ ಭೂಸಂಬಂಧಗಳು' ಕುರಿತು ವಿಷಯ ಮಂಡನೆ ಮಾಡಿದರು. ಎಐಕೆಕೆಎಂಎಸ್ ಕರ್ನಾಟಕ ರಾಜ್ಯ ಅಧ್ಯಕ್ಷರಾದ ಕಾ. ಶಶಿಧರ್, ಕಾರ್ಯದರ್ಶಿಗಳಾದ ಕಾ. ಭಗವಾನ್ ರೆಡ್ಡಿ ಮತ್ತು ಅಖಿಲ ಭಾರತ ಸೆಕ್ರೆಟೇರಿಯಟ್ ಸದಸ್ಯರಾದ ಕಾ.ನಾಗಮ್ಮಾಳ್ ಉಪಸ್ಥಿತರಿದ್ದರು.

---

(ಪುಟ 7ರಿಂದ........)

## ಭಾರತೀಯ ರೈಲ್ವೆ: ಕಾರ್ಪೊರೇಟ್ ಲೂಟಿಯ ಬಲಿಪಶು

ಕಾರಣಗಳಾಗುತ್ತಿವೆ. ಇತ್ತೀಚೆಗೆ, 72 ಪುರುಷ ರೈಲು ಲೋಕೋ ಪೈಲಟ್‌ಗಳು ವಿಭಾಗೀಯ ರೈಲ್ವೆ ವ್ಯವಸ್ಥಾಪಕರಿಗೆ ಪತ್ರ ಬರೆದು, ಅತಿಯಾದ ದೈಹಿಕ ಮತ್ತು ಮಾನಸಿಕ ಒತ್ತಡ, ಅನಿಯಮಿತ ಕೆಲಸದ ಪರಿಸ್ಥಿತಿಗಳು ಮತ್ತು ಆಡಳಿತ ಮಂಡಳಿಯ ಒತ್ತಡದಿಂದಾಗಿ ಸೇವೆಯಲ್ಲಿ ಮುಂದುವರಿಯಲು ಸಾಧ್ಯವಾಗುತ್ತಿಲ್ಲ ಎಂದು ಸ್ವಯಂ ನಿವೃತ್ತಿ ಕೋರಿದ್ದಾರೆ. ಸುರಕ್ಷತೆಗೆ ಸಂಬಂಧಿಸಿದ ಕೆಲಸಗಳಲ್ಲಿ ನಿಯೋಜಿಸಲಾದ ಗುತ್ತಿಗೆ ಕಾರ್ಮಿಕರಿಗೆ ಸರಿಯಾದ ತರಬೇತಿ ಅಥವಾ ರಕ್ಷಣಾ ಸಾಧನಗಳನ್ನು ನೀಡಲಾಗುತ್ತಿಲ್ಲ. ರೈಲ್ವೆ ಅಪಘಾತಗಳು ಈಗ ಸಹಜ ವಿದ್ಯಮಾನಗಳಾಗಿ ಮಾರ್ಪಟ್ಟಿವೆ. ಜೂನ್ 2023 ರಲ್ಲಿ ಒಡಿಶಾದ ಬಾಲಾಸೋರ್‌ನಲ್ಲಿ ಸಂಭವಿಸಿದ ಕೋರಮಂಡಲ್ ಎಕ್ಸ್‌ಪ್ರೆಸ್ ಅಪಘಾತವು 288 ಜನರ ಪ್ರಾಣವನ್ನು ಬಲಿಪಡೆಯಿತು ಮತ್ತು 1,000ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡರು.

### ರೈಲ್ವೆ ಕಾರ್ಮಿಕರು ಮತ್ತು ಪ್ರಯಾಣಿಕರ ಒಗ್ಗಟ್ಟು ಅನಿವಾರ್ಯ

ಖಾಸಗೀಕರಣದ ನೀತಿಯ ವಿರುದ್ಧ ವ್ಯಾಪಕ ಸಾರ್ವಜನಿಕ ಚರ್ಚೆ ಮತ್ತು ಸಾಮೂಹಿಕ ಸುದೀರ್ಘ ಹೋರಾಟವು ಈ ಹೊತ್ತಿನ ಅವಶ್ಯಕತೆಯಾಗಿದೆ. ಕೈಗೆಟಕುವ ದರದ ಮತ್ತು ಸುರಕ್ಷಿತ ರೈಲು ಸಾರಿಗೆಯನ್ನು ರಕ್ಷಿಸಲು, ರೈಲ್ವೆ ಕಾರ್ಮಿಕರು ಮತ್ತು ಪ್ರಯಾಣಿಕರ ನಡುವಿನ ಒಗ್ಗಟ್ಟು ಅತ್ಯಗತ್ಯ. 1974ರ ಬೃಹತ್ ರೈಲ್ವೆ ಮುಷ್ಕರವು ಸಂಘಟಿತ ಐಕ್ಯತೆಯ ಬಲವನ್ನು ಪ್ರದರ್ಶಿಸಿತ್ತು. ಕಾರ್ಮಿಕರು ಮತ್ತು ಸಾರ್ವಜನಿಕರು 'ಜನ ಸಮಿತಿ'ಗಳನ್ನು ಹೋರಾಟದ ಸಾಧನಗಳಾಗಿ ರೂಪಿಸಿಕೊಂಡು ಒಗ್ಗೂಡಿದಾಗ ಮತ್ತು ದೇಶಾದ್ಯಂತ ನಿರಂತರ ಚಳುವಳಿಯನ್ನು ರೂಪಿಸಿದಾಗ, ಅದು ಮಾತ್ರವೇ ಭಾರತೀಯ ರೈಲ್ವೆಯ ಖಾಸಗೀಕರಣವನ್ನು ತಡೆಯುವಂತೆ ಸರ್ಕಾರದ ಮೇಲೆ ಒತ್ತಡ ಹೇರುತ್ತದೆ.


## ಎಐಡಿಎಸ್‌ಓ ಸಂಘಟಿತ ಕಲ್ಯಾಣ ಕರ್ನಾಟಕ ವಲಯ ಮಟ್ಟದ ವಿದ್ಯಾರ್ಥಿ–ಪೋಷಕರ ಬೃಹತ್ ಸಮಾವೇಶ

# ಜನರ ಒಕ್ಕೊರಲಿನ ಆಗ್ರಹ: ‘ನಮ್ಮೂರ ಶಾಲೆ ಉಳಿಯಲಿ!’



ಮಾತನಾಡುತ್ತಿರುವವರು ಶ್ರೀ. ಅಲ್ಲಮಪ್ರಭು ಬೆಟ್ಟದೂರು


ಶ್ರೀ. ರಾಘವೇಂದ್ರ ಕುಷ್ಟಗಿ


ಶ್ರೀ. ಚಾಮರಸ ಪಾಟೀಲ್

ರಾಜ್ಯಾದ್ಯಂತ ನಾಲ್ಕು ತಿಂಗಳುಗಳಿಂದ, ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳಲ್ಲಿ ತಮ್ಮ ಹಳ್ಳಿ–ನಗರಗಳಲ್ಲಿನ ಶಾಲೆಗಳನ್ನು ವಿಲೀನಗೊಳಿಸುವ ಸರ್ಕಾರದ ಜನ–ವಿರೋಧಿ, ಶಿಕ್ಷಣ–ವಿರೋಧಿ ಕ್ರಮವನ್ನು ಪ್ರತಿಭಟಿಸುತ್ತಾ, ‘ನಮ್ಮೂರ ಶಾಲೆ’ ಉಳಿಯಲಿ ಎಂಬ ಒಕ್ಕೊರಲಿನ ಕೂಗು ಪ್ರತಿಧ್ವನಿಸುತ್ತಲೇ ಇದೆ. ಇದಕ್ಕೆ ಮತ್ತೊಂದು ಭಾವನಾತ್ಮಕ ಮತ್ತು ಸ್ಫೂರ್ತಿದಾಯಕ ಗರಿಯಾಗಿದ್ದು, 14–3–2026ರಂದು ಕಲಬುರಗಿಯಲ್ಲಿ ನಡೆದ ಕರ್ನಾಟಕ ವಲಯ ಮಟ್ಟದ ವಿದ್ಯಾರ್ಥಿಗಳು ಮತ್ತು ಪೋಷಕರ ಬೃಹತ್ ಸಮಾವೇಶ. ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರದ ನೂರಾರು ಹಳ್ಳಿಗಳಿಂದ ‘ಬಡ ಮಕ್ಕಳ ಬೆಳಕನ್ನು ಕಸಿಯಲು ಬಿಡೆವು’, ‘ನಮ್ಮೂರ ಶಾಲೆ, ನಮ್ಮ ಅಸ್ತಿತ್ವ’, ‘ನಮ್ಮ ಶಾಲೆ ನಮ್ಮ ಸ್ವತ್ತು’ ಎಂದು ಸಾರುತ್ತ ಬಂದ ಜನತೆಯ ಘೋಷಣೆಗಳು ಕಲಬುರಗಿಯ ಇಡೀ ನಗರವನ್ನು ಆವರಿಸಿದ್ದವು. ಈ ಸಮಾವೇಶಕ್ಕೆ ಬಂದವರು ತಮ್ಮ ಇಡೀ ಬದುಕಿನ ಆಧಾರವಾದ, ವರ್ಷದ ಸಂಪಾದನೆಯ ಕೆಲಸಗಳಾದ ರಾಶಿ, ಕಟಾವು ಹೀಗೆ ಎಲ್ಲವನ್ನು ಬಿಟ್ಟು ಸರ್ಕಾರಿ ಶಾಲೆಗಳು ಉಳಿಯಲೇಬೇಕೆಂದು ಎದೆಯೆತ್ತಿ ನಿಂತರು. ಶಾಲೆ ಉಳಿಸಲು ಸಜ್ಜಾದ ಸೈನ್ಯವು ಗುಂಪು ಗುಂಪಾಗಿ, ಕೆಲವರು ರೈಲು, ಬಸ್‌ಗಳಲ್ಲಿ ಬಂದರೆ, ಇನ್ನು ಬಹುತೇಕರು ಹಳ್ಳಿಗಳಲ್ಲಿ ಮನೆ ಮನೆಯಲ್ಲೂ ಡಬ್ಬಿ ಹಿಡಿದು ದೇಣಿಗೆ ಸಂಗ್ರಹಿಸಿ ಬೇರೆ ಬೇರೆ ಗಾಡಿಗಳನ್ನು ಮಾಡಿಕೊಂಡು ಸಮಾವೇಶದ ಸ್ಥಳಕ್ಕೆ ಧಾವಿಸಿದರು. ಇನ್ನು ತಾಂಡಾದ ಜನತೆ! ಕಲಬುರಗಿಯ ಗ್ರಾಮಗಳಿಂದಲೇ 5 ಕಿ. ಮೀ ದೂರದಲ್ಲಿರುವ ಬುಡಕಟ್ಟು ಪ್ರದೇಶ. ಇಂತಹ ತಾಂಡಾಗಳ ಜನರಿಗೆ ಅಸ್ತಿತ್ವ ಬಂದದ್ದೇ ಅಲ್ಲಿರುವ ಸರ್ಕಾರಿ ಶಾಲೆಯಿಂದ. ಅಲ್ಲಿ ವಾಸವಿರುವ ಹೆಣ್ಣುಮಕ್ಕಳಿಗೆ ಶಿಕ್ಷಣದ ಘಮಲೇ ತಾಕಿಲ್ಲ. ಅಂತಹ ಹೆಣ್ಣುಮಕ್ಕಳು ನಮ್ಮ ಪಾಡೇ ನಮ್ಮ ಮಕ್ಕಳ ಪಾಲಿಗೂ ಬರಲು ಬಿಡುವುದಿಲ್ಲ, ‘ಜೀವ ಕೊಟ್ಟೇವು, ಶಾಲೆ ಮುಚ್ಚಲು ಬಿಡುವುದಿಲ್ಲ’ ಎಂದು ಸಮರ ಸಾರಿ ಬಂದದ್ದು ನಿಜಕ್ಕೂ ಭಾವುಕ ಕ್ಷಣ. 150 ಕಿಲೋಮೀಟರ್ ದೂರದ ಹಳ್ಳಿಗಳಿಂದ ಮೇಲೆ ಸೂರು ಸಹ ಇಲ್ಲದ ಗಾಡಿಗಳಲ್ಲಿ ಎಳೆಯ ಮಕ್ಕಳು, ವಯೋವೃದ್ಧರು ಬಂದು ಕೂಗಿದ್ದು ಒಂದೇ, ‘ಕೆಕೆಆರ್‌ಡಿಬಿ ಹಣದ ದುರ್ಬಳಕೆ ಸಲ್ಲದು’, ‘ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಬೇಡವೇ ಬೇಡ’! ಅವರೆಲ್ಲರೂ ಸರ್ಕಾರಿ ಶಾಲೆಗಳನ್ನು ನಾಶ ಮಾಡಲು ಹೊರಟವರ ಸರ್ವನಾಶ ಮಾಡಲು ಸಿದ್ಧವೆಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಸಮಾವೇಶವನ್ನು ಉದ್ದೇಶಿಸಿ ಶ್ರೀ. ರಾಘವೇಂದ್ರ ಕುಷ್ಟಗಿ (ಸಂಸ್ಥಾಪಕರು, ಹೈದರಾಬಾದ್ ಕರ್ನಾಟಕ ಜನಾಂದೋಲನ ಕೇಂದ್ರ), ಶ್ರೀ. ಅಲ್ಲಮಪ್ರಭು ಬೆಟ್ಟದೂರು (ಹಿರಿಯ ಸಾಹಿತಿಗಳು, ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ಕರ್ನಾಟಕ ಅಧ್ಯಕ್ಷರು), ಶ್ರೀ. ಚಾಮರಸ ಪಾಟೀಲ್ (ಗೌರವಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ), ಡಾ. ಚಂದ್ರ ಗಿರೀಶ್ (ಪ್ರಾಂಶುಪಾಲರು, ವಿದ್ಯಾನಿಧಿ ಪದವಿಪೂರ್ವ ಕಾಲೇಜು, ರಾಯಚೂರು), ಕಾ. ಶರಣಪ್ಪ ಉದ್ಬಾಳ್ (ಎಐಡಿವೈಓ ರಾಜ್ಯಾಧ್ಯಕ್ಷರು), ಕಾ. ವಿ.ಜಿ. ದೇಸಾಯಿ (ಎಐಯುಟಿಯುಸಿ ಕಲಬುರಗಿ ಜಿಲ್ಲಾಧ್ಯಕ್ಷರು), ಕಾ. ಎಂ.ಎನ್. ಮಂಜುಳಾ (ಎಐಎಂಎಸ್‌ಎಸ್ ರಾಜ್ಯಾಧ್ಯಕ್ಷೆ), ಕಾ. ಭಗವಾನ್ ರೆಡ್ಡಿ (ಎಐಕೆಕೆಎಂಎಸ್ ರಾಜ್ಯ ಕಾರ್ಯದರ್ಶಿ) ಮತ್ತು ಕಾ. ಕೆ.ಎಸ್. ಅಶ್ವಿನಿ (ಎಐಡಿಎಸ್‌ಓ ರಾಜ್ಯಾಧ್ಯಕ್ಷೆ) ಮಾತನಾಡಿದರು. ಸಮಾವೇಶದ ಅಧ್ಯಕ್ಷತೆಯನ್ನು ನಿರ್ವಹಿಸಿದ್ದು, ಕಾ. ಅಭಯಾ ದಿವಾಕರ್ (ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷೆ).


ಡಾ. ಚಂದ್ರ ಗಿರೀಶ್


‘ನಮ್ಮೂರ ಶಾಲೆ ಉಳಿಸಲು’ ಪ್ರತಿಜ್ಞೆ ಕೈಗೊಳ್ಳುತ್ತಿರುವ ಪ್ರತಿನಿಧಿಗಳು



ಧಾರವಾಡ: ಜನ್ನತ್ ನಗರದ ಚರಂಡಿ, ಕಸ ವಿಲೇವಾರಿ, ತ್ಯಾಜ್ಯ ಸಂಸ್ಕರಣಾ ಘಟಕ, ಇವುಗಳ ಸಮಸ್ಯೆ ಬಗೆಹರಿಸಲು ಆಗ್ರಹಿಸಿ ಎಸ್‌ಯುಸಿಐ (ಸಿ) ಪಕ್ಷದ ಉತ್ತರ ಸ್ಥಳೀಯ ಸಮಿತಿಯ ನೇತೃತ್ವದಲ್ಲಿ ಹುಬ್ಬಳ್ಳಿ–ಧಾರವಾಡ ವಲಯ ಕಚೇರಿ–12 ವಲಯ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಿದ ಜನತೆ



ಬಳ್ಳಾರಿ: ಕೇಂದ್ರ ಬಿಜೆಪಿ ಸರ್ಕಾರದ ರೈತ–ಕಾರ್ಮಿಕ–ಜನ ವಿರೋಧಿ ವಿದ್ಯುಚ್ಛಕ್ತಿ (ತಿದ್ದುಪಡಿ) ಮಸೂದೆ 2025, ವಿರೋಧಿಸಿ ಎಐಪಿಎಫ್ (All India Powermen's Federation), ಎಐಕೆಕೆಎಂಎಸ್, ಎಐಯುಟಿಯುಸಿ ಹಾಗೂ ಅಖಿಲ ಭಾರತ ವಿದ್ಯುತ್ ಗ್ರಾಹಕರ ಸಂಘ (AIECA)ಗಳು ಜಂಟಿಯಾಗಿ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಈ ಮಸೂದೆಯ ಪ್ರತಿಕೃತಿ ದಹಿಸಿದವು.

# ಅಸ್ಸಾಂ: ಅಲ್ಪಸಂಖ್ಯಾತರ ವಿರುದ್ಧ ವಿಷಕಾರಿದ ಮುಖ್ಯಮಂತ್ರಿ

ನಮ್ಮ ಸಮಾಜವನ್ನು ಹತ್ತು ಹಲವು ಸಮಸ್ಯೆಗಳು ಪೀಡಿಸುತ್ತಿದ್ದರೂ ಅವನ್ನೆಲ್ಲಾ ಕಡೆಗಣಿಸಿ, ಜನರನ್ನು ವಿಭಜಿಸಲು, ಅಲ್ಪಸಂಖ್ಯಾತ ಸಮುದಾಯದ ವಿರುದ್ಧ ದ್ವೇಷವನ್ನು ಉಗುಳುತ್ತಾ, ಒಂದು ಜನ ಸಮುದಾಯವನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇವೆ. ಇತ್ತೀಚೆಗೆ ಆಡಳಿತಾರೂಢ ಬಿಜೆಪಿ ನಾಯಕರ ನಡುವೆ ಈ ವಿಷಯದಲ್ಲಿ ಸ್ಪರ್ಧೆಯೇ ನಡೆಯುತ್ತಿದೆ. ಯಾರು ಇನ್ನೊಬ್ಬರಿಗಿಂತ ಹೆಚ್ಚು ನಿರ್ಲಜ್ಜವಾಗಿ ದ್ವೇಷಪ್ರಚಾರ ನಡೆಸಬಲ್ಲರು ಮತ್ತು ಆಳ್ವಿಕ ಏಕಸ್ವಾಮ್ಯಾಧಿಪತಿಗಳ ಮೆಚ್ಚುಗೆ ಪಡೆಯಬಲ್ಲರು ಎಂಬುದೇ ಅವರ ಗುರಿಯಾದಂತಿದೆ.

ಒಂದು ಕಾಲದಲ್ಲಿ ಅನುರಾಗ್ ಠಾಕೂರ್ ಎಂಬುವರು (ಇಂದು ಕೇಂದ್ರ ಸಚಿವರು) ಧಾರ್ಮಿಕ ಅಲ್ಪಸಂಖ್ಯಾತರನ್ನು ಗುಂಡಿಕ್ಕಲು ಕರೆ ನೀಡಿದ್ದರು ಎಂಬುದು ನೆನಪಿಗೆ ಬರುತ್ತದೆ. ಈಗ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, ಕ್ರೂರ ಕೋಮುವಾದಿ ಹಿಂದುತ್ವದ ಮುಖವಾಗಿದ್ದು, ಎಲ್ಲರನ್ನೂ ಮೀರಿದ್ದಾರೆ. ಇತ್ತೀಚೆಗೆ ಅವರು ಅಸ್ಸಾಂ ರಾಜ್ಯದ ಬಂಗಾಳಿ ಮಾತನಾಡುವ ಮುಸ್ಲಿಮರ ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರಕ್ಕೆ ಕರೆ ನೀಡಿದ್ದು, ಅವರಿಗೆ ಭೂಮಿ, ಸಾರಿಗೆ ಮತ್ತು ಜೀವನೋಪಾಯ ನಿರಾಕರಿಸುವಂತೆ ಜನರಿಗೆ ಹೇಳಿ, ಅವರು ರಾಜ್ಯವನ್ನು ತೊರೆಯುವಂತೆ ಮಾಡುವುದಾಗಿ ಹೇಳಿದ್ದಾರೆ.

ಅವರು ಫೆಬ್ರುವರಿ 7ರಂದು ಅಸ್ಸಾಂ ಬಿಜೆಪಿ ಘಟಕದ ಅಧಿಕೃತ (X)(ಟ್ವಿಟ್ಟರ್) ಖಾತೆಯಲ್ಲಿ ಒಂದು ವೀಡಿಯೊ ಪೋಸ್ಟ್ ಮಾಡಿದ್ದು, ಅದರಲ್ಲಿ ಅವರು ಮುಸ್ಲಿಮರನ್ನು ಸಮೀಪದಿಂದ ಗುಂಡಿಕ್ಕುವಂತೆ ಸಂಜ್ಞೆ ಮಾಡಿರುವುದು ಕಂಡುಬರುತ್ತದೆ. ಜನಜೀವನಮಟ್ಟದ ವೇಗವಾದ ಕುಸಿತ, ಹೆಚ್ಚುತ್ತಿರುವ ದಾರಿದ್ರ್ಯ ಮತ್ತು ದುಃಖದಿಂದ ಜನರ ಗಮನವನ್ನು ತಿರುಗಿಸಲು ಅವರು ಮತ್ತೇನು ತಾನೇ ಮಾಡಬಹುದು!

ಅಸ್ಸಾಂನಲ್ಲಿ ಬಂಗಾಳಿ ಮಾತನಾಡುವ ಮುಸ್ಲಿಂ ಜನಾಂಗ ರಾಜ್ಯದ ಅತ್ಯಂತ ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಲ್ಲಿ ಒಂದು. ತಲೆಮಾರುಗಳಿಂದ ಇಲ್ಲಿ ವಾಸಿಸುತ್ತಿದ್ದರೂ, ಅವರನ್ನು ಆರ್‌ಎಸ್‌ಎಸ್-ಬಿಜೆಪಿ ನಾಯಕರು "ಬಾಹ್ಯರು" ಅಥವಾ "ನುಸುಳುಕೋರರು" ಎಂದು ಚಿತ್ರಿಸುತ್ತಿದ್ದಾರೆ. ಈ ಚಿತ್ರಣದಿಂದಾಗಿ ಇವರ ವಿರುದ್ಧ ತೆರವು ಕಾರ್ಯಾಚರಣೆಗಳು, ಅವರಿಗೆ ಮತದಾನದ ಹಕ್ಕನ್ನು ನಿರಾಕರಿಸುವುದು ಮತ್ತು ಉದ್ದೇಶಪೂರ್ವಕವಾಗಿ ಅವರನ್ನು ಆಡಳಿತಾತ್ಮಕ ಕ್ರಮಗಳಿಗೆ ಗುರಿಯಾಗಿಸುವುದು, ಇವೆಲ್ಲಾ ನಡೆದಿವೆ

ಅವರನ್ನು "ವಿದೇಶಿಗಳು" ಎಂದು ಲೇಬಲ್ ಹಾಕಿ ದೇಶದಿಂದ ಹೊರಹಾಕುವುದು ಭಾರತೀಯ ಸಂವಿಧಾನದ ವಿಧಿಗಳಿಗೆ ವಿರುದ್ಧವಾಗಿದೆ. ಅಸ್ಸಾಂ ಮುಖ್ಯಮಂತ್ರಿ ಮತ್ತು ಆರ್‌ಎಸ್‌ಎಸ್-ಬಿಜೆಪಿ ಕೂಟದಿಂದ ಧಾರ್ಮಿಕ ಅಲ್ಪಸಂಖ್ಯಾತರಾದ ಬಡ ಮತ್ತು ನೈಜ ಭಾರತೀಯ ನಾಗರಿಕರ ವಿರುದ್ಧ ನಡೆಯುತ್ತಿರುವ ನಿರಂತರ ದ್ವೇಷಪ್ರಚಾರದ ಬಗ್ಗೆ ಗಂಭೀರ ಚಿಂತೆ ವ್ಯಕ್ತಪಡಿಸಿ, ಎಸ್‌ಯುಸಿಐ(ಸಿ)ಪಕ್ಷದ ಅಸ್ಸಾಂ ರಾಜ್ಯ ಕಾರ್ಯದರ್ಶಿ ಕಾ. ಚಂದ್ರಲೇಖಾ ದಾಸ್ ಅವರು, 03-02-26ರಂದು ಪ್ರಕಟಿಸಿದ ಹೇಳಿಕೆಯಲ್ಲಿ, ಅಸ್ಸಾಂನಲ್ಲಿ ಬಡ ಕೂಲಿ ಕಾರ್ಮಿಕರ ಮೇಲೆ ನಡೆದ ಇತ್ತೀಚಿನ ದಾಳಿ ರಾಜ್ಯದ ತೀರ ಕೆಳಮಟ್ಟದ ಸಾಮಾಜಿಕ-ರಾಜಕೀಯ ಸ್ಥಿತಿಯನ್ನು ತೋರಿಸುತ್ತದೆ ಎಂದು ಹೇಳಿದ್ದಾರೆ. "ಬಹಳವೇ ಬಡವರು ಮತ್ತು ಪರಿಶ್ರಮಿಗಳಾದ, ನೈಜ ಭಾರತೀಯ ನಾಗರಿಕರಾದ ಈ ಜನರಲ್ಲಿ ಹೆಚ್ಚಿನವರು ಕಷ್ಟಪಟ್ಟು ಜೀವನ ಸಾಗಿಸುವ ರೈತಾಪಿ ವರ್ಗದವರಾಗಿದ್ದು, ರಾಜ್ಯದ ಆರ್ಥಿಕತೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಇವರ ಮೇಲೆ ದಾಳಿ ಮಾಡುವುದು ಕಾನೂನುಬಾಹಿರ ಮಾತ್ರವಲ್ಲ, ಅಮಾನವೀಯವೂ ಹೌದು. ಈ ನಿರಂತರ ದ್ವೇಷಪ್ರಚಾರವು ಸಾಮುದಾಯಿಕ ಸೌಹಾರ್ದತೆಯನ್ನು ಹಾನಿಗೊಳಿಸುವುದರ ಜೊತೆಗೆ ರಾಜ್ಯದ ಆರ್ಥಿಕತೆಯ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ. ಒಂದು ಸಮುದಾಯದ ಬಡ ಜನರು ಮತ್ತೊಂದು ಸಮುದಾಯದ ಬಡ ಜನರ ಹಕ್ಕುಗಳನ್ನು ಯಾವತ್ತೂ ಕಸಿದುಕೊಳ್ಳುವುದಿಲ್ಲ; ಬದಲಾಗಿ ಶೋಷಕ ಬಂಡವಾಳಶಾಹಿ ಆಡಳಿತದ ವಿರುದ್ಧ ಅವರೆಲ್ಲಾ ಒಟ್ಟಾಗಿ ಹೋರಾಡಿದಾಗ ಅವರ ಏಕತೆ ಮತ್ತಷ್ಟು ಬಲಗೊಳ್ಳುತ್ತದೆ. ಒಗ್ಗಟ್ಟಿನ ಚಳವಳಿಯ ಸಾಂಸ್ಕೃತಿಕ ವಾತಾವರಣದಲ್ಲಿ ಎಲ್ಲಾ ರೀತಿಯ ವಿಭಜನೆ, ಕೋಪ, ಪರಸ್ಪರ ದ್ವೇಷ ಮತ್ತು ದುರುದ್ದೇಶಗಳು ನಾಶವಾಗುತ್ತವೆ.

ಎಸ್‌ಯುಸಿಐ(ಸಿ)ಪಕ್ಷವು, ರಾಜ್ಯದ ಜನರಿಗೆ ಈ ಮುಗ್ಧ ಬಡ ಪರಿಶ್ರಮಿ ಜನರೊಂದಿಗೆ ನಿಲ್ಲುವಂತೆ ಮತ್ತು ಆಳುವ ವರ್ಗದ ಸೇವಕರಿಂದ ನಡೆಸಲ್ಪಡುವ ದ್ವೇಷಪ್ರಚಾರಕ್ಕೆ ಬಲಿಯಾಗದಂತೆ ಕರೆ ನೀಡುತ್ತದೆ. ಕೋಮು ಸೌಹಾರ್ದತೆ, ಪರಸ್ಪರ ಸ್ನೇಹ ಮತ್ತು ಸೋದರತೆಯನ್ನು ಬಲಪಡಿಸಿ ಜನವಿರೋಧಿ ಶಕ್ತಿಗಳ ಕುತಂತ್ರಗಳನ್ನು ಸೋಲಿಸಬೇಕೆಂದು ಮನವಿ ಮಾಡುತ್ತದೆ."

(ಪುಟ 2ರಿಂದ........)

## ಅಮೆರಿಕ-ಇಸ್ರೇಲ್‌ನಿಂದ ಇರಾನ್ ಮೇಲೆ ಯುದ್ಧ

ಭಾಗದಲ್ಲಿ ಶಾಂತಿಗೆ ದೊಡ್ಡ ಅಪಾಯ ಕಾದಿದೆ ಎಂದು ಅಮೆರಿಕಾ ಹೇಳುತ್ತಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಧ್ಯಮದವರಿಗೆ ಉತ್ತರಿಸುತ್ತಾ, "ಮಧ್ಯಪ್ರಾಚ್ಯ ದೇಶಗಳಲ್ಲಿ ಅಲ್ಲದೆ, ಜಗತ್ತಿನಾದ್ಯಂತ ಶಾಂತಿ ನೆಲೆಸುವವರೆಗೂ, ನಿರಂತರವಾಗಿ ಬಾಂಬ್ ದಾಳಿ ನಡೆಯುತ್ತದೆ. ನನಗೆ ಬೇಕಾಗಿರುವುದು ಜನತೆಯ ಸ್ವಾತಂತ್ರ್ಯ" ಎಂದು ಹೇಳುತ್ತಾರೆ. 'ದೆವ್ವದ ಬಾಯಿಯಲ್ಲಿ ರಾಮ ಮಂತ್ರ' ಎಂಬ ನುಡಿಗಟ್ಟು ನೆನಪಾಗುತ್ತದೆ. ಸುಳ್ಳು ಆರೋಪಗಳ ಮೇಲೆ ಅನೇಕ ದೇಶಗಳ ಮೇಲೆ ದಾಳಿ ಎಸಗಿ ಅಲ್ಲಿನ ಜನಜೀವನವನ್ನು ಸರ್ವನಾಶ ಮಾಡುವ, ಅಲ್ಲಿರುವ ಸರ್ಕಾರಗಳನ್ನೇ ಬುಡಮೇಲು ಮಾಡುವ, ಬೇರೆ ದೇಶಗಳ ಅಧ್ಯಕ್ಷರನ್ನು ಅಪಹರಿಸಿಕೊಂಡು ಹೋಗುವ, ತನ್ನ ಏಜೆಂಟ್‌ರನ್ನು ಬಿಟ್ಟು ಆಂತರಿಕ ಯುದ್ಧಗಳನ್ನು ಸೃಷ್ಟಿಸುವ ಅಮೆರಿಕಾದ ಅಧ್ಯಕ್ಷರು ಶಾಂತಿಯ ಬಗ್ಗೆ ಮಾತನಾಡುವುದು ದೊಡ್ಡ ಅಪಹಾಸ್ಯವೇ ಸರಿ!!

### ಪ್ರತಿ ದೇಶಕ್ಕೂ ಇದೆ ಆತ್ಮರಕ್ಷಣೆಯ ಹಕ್ಕು

ತನ್ನ ಮಾರುಕಟ್ಟೆ ವಿಸ್ತರಣೆಯ ಸಾಮ್ರಾಜ್ಯಶಾಹಿ ಹಿತಾಸಕ್ತಿಗಾಗಿ ಅಮೆರಿಕಾ, 2003ರಲ್ಲಿ ಇರಾಕ್‌ನಿಂದ ಹಿಡಿದು 2011ರಲ್ಲಿ ಲಿಬಿಯಾದವರೆಗೂ ಈ ದೇಶಗಳನ್ನು ಎಲ್ಲಾ ರೀತಿಯಿಂದಲೂ ಧ್ವಂಸಗೊಳಿಸಿದೆ. ರಾಜಕೀಯವಾಗಿ ತನ್ನ ಕೈಗೊಂಬೆ ಸರ್ಕಾರಗಳನ್ನು ಆಯಾ ದೇಶಗಳಲ್ಲಿ ರಚಿಸಿದೆ. ಇದರ ಮುಂದುವರಿಕೆಯಾಗಿ ಈಗ ಇರಾನ್‌ನಲ್ಲಿ ಕಾರ್ಯಾಚರಣೆ ಮಾಡುತ್ತಿದೆ. ಇರಾನ್‌ನ ಸರ್ವೋಚ್ಚ ನಾಯಕ ಖಮೇನಿಯನ್ನು ಕೊಲೆಗೈದು ಹದ್ದು ಮೀರಿ ವರ್ತಿಸಿದೆ. ಇಂತಹ ಸಂದರ್ಭದಲ್ಲಿ ಇರಾನ್‌ಗೆ ತನ್ನ ರಕ್ಷಣೆ ಮಾಡಿಕೊಳ್ಳದೆ ಬೇರೇನು ದಾರಿ ಉಳಿದಿದೆ? ಅಮೆರಿಕಾದ ದಾಳಿಗೆ ಪ್ರತಿಯಾಗಿ ಇರಾನ್ ದಾಳಿ ನಡೆಸಿದ್ದು ಖಂಡಿತವಾಗಿ ನ್ಯಾಯಸಮ್ಮತವಾಗಿದೆ. ಇದರಿಂದ ಜಗತ್ತಿನ ಶಾಂತಿಗೆ ಅಪಾಯ ಎಂದು ಹೇಳುವುದು ಸರಿಯಲ್ಲ. ಅಮೆರಿಕಾ, ಎಲ್ಲಾ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕಾನೂನುಗಳನ್ನು ಕಾಲ ಕೆಳಗೆ ಹೊಸಕಿ ಹಾಕುತ್ತಿರುವಾಗ, ತನ್ನ ದೇಶದ ಸಾರ್ವಭೌಮತೆ ಹಾಗೂ ಸ್ವಾತಂತ್ರ್ಯವನ್ನು ಕಾಪಾಡಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲು ಇರಾನ್‌ಗೆ ಸಂಪೂರ್ಣ ಅಧಿಕಾರವಿದೆ.

### ಆರ್ಥಿಕತೆಯ ಮಿಲಿಟರೀಕರಣ

ಅಮೆರಿಕಾ, ಇರಾನ್ ಹಾಗೂ ಪಶ್ಚಿಮ ಏಷಿಯಾ ದೇಶಗಳ ಮೇಲೆ ದಾಳಿ ಎಸಗಲು, ಅಲ್ಲಿರುವ ತೈಲ ಸಂಪತ್ತನ್ನು ವಶಪಡಿಸಿಕೊಳ್ಳುವುದಷ್ಟೇ ಅಲ್ಲದೆ, ಇನ್ನು ಬೇರೆ ಕಾರಣಗಳೂ ಇವೆ. ಬಗೆಹರಿಸಲಾಗದ ತೀವ್ರತರ ಮಾರುಕಟ್ಟೆಯ ಬಿಕ್ಕಟ್ಟಿನಿಂದ ಹೊರಬರಲು ಎಲ್ಲಾ ಸಾಮ್ರಾಜ್ಯಶಾಹಿ ದೇಶಗಳು, ಶಸ್ತ್ರಾಸ್ತ್ರ ಖರೀದಿ ಹಾಗೂ ಆರ್ಥಿಕತೆಯ ಮಿಲಿಟರೀಕರಣಕ್ಕೆ ಮೊರೆ ಹೋಗುತ್ತಿವೆ. ಸರ್ಕಾರಗಳೇ ಮಿಲಿಟರಿ ಉಪಕರಣಗಳನ್ನು ಖರೀದಿ ಮಾಡುವ ಮೂಲಕ, ಕೃತಕವಾಗಿ ಉತ್ಪಾದನೆಯನ್ನು ಕೊಂಚ ಚುರುಕುಗೊಳಿಸುತ್ತವೆ. ಆರ್ಥಿಕತೆ ಮಿಲಿಟರೀಕರಣಗೊಂಡಷ್ಟು, ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳು ಯುದ್ಧದ ವಾತಾವರಣ ಸೃಷ್ಟಿಸುತ್ತವೆ. ಇದಲ್ಲದೆ ಇರಾನ್ ಮೇಲೆ ಅಮೆರಿಕಾ ದಾಳಿಗೆ ಮತ್ತೊಂದು ಕಾರಣವೆಂದರೆ, ಇರಾನ್ ತನ್ನ ತೈಲ, ಗ್ಯಾಸ್ ರಫ್ತು ಮಾಡಲು ಹಾಗೂ ವಿದೇಶಿ ವಿನಿಮಯಕ್ಕೆ, ಅಮೆರಿಕಾ ಡಾಲರ್ ಬದಲಿಗೆ ಯುರೋ ಹಾಗೂ ಇತರ ಕರೆನ್ಸಿಯನ್ನು ಬಳಸಲು ಮುಂದಾಗಿದ್ದು. ತೈಲದ ವ್ಯಾಪಾರವು ಅಮೆರಿಕಾ ಡಾಲರ್‌ನಲ್ಲಿ ನಡೆದರೆ, ಅಮೆರಿಕಾಗೆ ಅತಿಹೆಚ್ಚು ಲಾಭವಾಗುತ್ತದೆ. ದೇಶದ ಹೊರಗೆ ಅಮೆರಿಕಾದ ಡಾಲರ್ ಚಲಾವಣೆ ಹೆಚ್ಚುತ್ತದೆ. ಬೇರೆ ದೇಶಗಳು ಡಾಲರ್ ವಿನಿಮಯಕ್ಕಾಗಿ ಹಲವಾರು ಸೇವೆ ಹಾಗೂ ಸರಕುಗಳನ್ನು ನೀಡಬೇಕಾಗುತ್ತದೆ. ಅಮೆರಿಕಾ ತನ್ನದೇ ಹಣವನ್ನು ಹೆಚ್ಚೆಚ್ಚು ಮುದ್ರಿಸುತ್ತಾ, ಬೇರೆ ದೇಶಗಳಿಂದ ಪಡೆದ ಸಾಲವನ್ನು ತೀರಿಸಬಹುದು. ಈ ಹಿಂದೆ ಇರಾಕ್, ಅಮೆರಿಕಾ ಡಾಲರ್‌ಗೆ ಸಡ್ಡು ಹೊಡೆದಿದ್ದರ ಪರಿಣಾಮವಾಗಿ, ಅಮೆರಿಕಾದ ಮಿಲಿಟರಿ ಕಾರ್ಯಾಚರಣೆಯನ್ನು ಎದುರಿಸಬೇಕಾಯಿತು. 2006ರಲ್ಲಿ ಇರಾನ್ ದೇಶವು ಡಾಲರ್ ಮೇಲಿನ ಅವಲಂಬನೆಯಿಂದ ಹೊರ ಬಂದಿದ್ದರ ಪರಿಣಾಮವಾಗಿ, ಅದರ ಮೇಲೆ ಆರ್ಥಿಕ ದಿಗ್ಬಂಧನಗಳನ್ನು ಹೇರಲಾಯಿತು. ಎಲ್ಲಾ ತೈಲ ಶ್ರೀಮಂತ ದೇಶಗಳು ಇದೇ ರೀತಿ ಅಮೆರಿಕಾ ಡಾಲರ್‌ನ್ನು ತ್ಯಜಿಸಲು ಮುಂದಾದರೆ, ಅಮೆರಿಕಾ ಘೋರ ಪರಿಸ್ಥಿತಿಗೆ ತಳ್ಳಲ್ಪಡುತ್ತದೆ. ಅಮೆರಿಕಾದ ಸಾಮ್ರಾಜ್ಯಶಾಹಿಗಳಿಗೆ ಇದೇ ಭಯ ಕಾಡುತ್ತಿದೆ.

ಮಹಾನ್ ಮಾರ್ಕ್ಸ್‌ವಾದಿ ಚಿಂತಕರು ಹಾಗೂ ಎಸ್‌ಯುಸಿಐ (ಸಿ) ಪಕ್ಷದ ಸಂಸ್ಥಾಪಕ ಕಾರ್ಯದರ್ಶಿಗಳಾದ ಕಾಮ್ರೇಡ್ ಶಿವದಾಸ್ ಘೋಷ್ ಅವರು 6 ದಶಕಗಳ ಹಿಂದೆ ತಿಳಿಸಿರುವ ವಿಚಾರಗಳನ್ನು ಇಲ್ಲಿ ನೆನಪಿಸಿಕೊಳ್ಳುವುದು ಅಗತ್ಯವಾಗಿದೆ. "ಬಂಡವಾಳಶಾಹಿ-ಸಾಮ್ರಾಜ್ಯಶಾಹಿಗಳು ಮಾರುಕಟ್ಟೆ ಬಿಕ್ಕಟ್ಟನ್ನು ತಡೆಯಲು, ಬಂಡವಾಳಶಾಹಿ ಮಾರುಕಟ್ಟೆಯಲ್ಲಿ ತಾತ್ಕಾಲಿಕವಾಗಿಯಾದರೂ ಚೇತರಿಕೆ ಕಾಣುವಂತೆ ಮಾಡಲು, ಕೃತಕವಾಗಿ ಮಿಲಿಟರಿ ಉಪಕರಣಗಳ ಬಳಕೆಯನ್ನು ಉತ್ತೇಜಿಸುತ್ತಾರೆ. ಈ ಮಿಲಿಟರೀಕರಣವು ಪರಿಸ್ಥಿತಿಯನ್ನು ತಿಳಿಗೊಳಿಸುವುದು ದೂರದ ಮಾತು, ಬದಲಿಗೆ ವೈರುಧ್ಯ ಹಾಗೂ ಬಿಕ್ಕಟ್ಟನ್ನು ಮತ್ತಷ್ಟು ಹೆಚ್ಚಿಸುತ್ತದೆ. ಬಿಕ್ಕಟ್ಟು ತೀವ್ರವಾದಷ್ಟು ಆರ್ಥಿಕತೆ ಮತ್ತಷ್ಟು ಮಿಲಿಟರೀಕರಣಗೊಳ್ಳುತ್ತದೆ." ಮಿಲಿಟರೀಕರಣದಿಂದ ಶಸ್ತ್ರಾಸ್ತ್ರಗಳ ಸಂಗ್ರಹ ಹೆಚ್ಚುತ್ತದೆ, ಸ್ಪರ್ಧೆ ಏರ್ಪಡುತ್ತದೆ ಹಾಗೂ ಕೊನೆಗೆ ಯುದ್ಧವು ಸ್ಫೋಟಗೊಳ್ಳುತ್ತದೆ. ಹಾಗಾಗಿ, ಸಾಮ್ರಾಜ್ಯಶಾಹಿ ದೇಶಗಳು ಒಂದಲ್ಲಾ ಒಂದು ಕಡೆ ಸ್ಥಳೀಯ, ಪ್ರಾದೇಶಿಕ, ಭಾಗಶಃ ಹಾಗೂ ದೊಡ್ಡ ಮಟ್ಟದ ಯುದ್ಧಗಳನ್ನು ಸೃಷ್ಟಿಸುತ್ತವೆ. ಪ್ಯಾಲೆಸ್ಟೈನ್, ಉಕ್ರೇನ್, ಯಮೆನ್ ಸೇರಿದಂತೆ ಈಗಿನ ಇರಾನ್ ದೇಶ ಎದುರಿಸುತ್ತಿರುವ ಯುದ್ಧ ದಾಳಿಗಳು ಇದಕ್ಕೆ ಉದಾಹರಣೆಯಾಗಿವೆ.

### ಜಿಯೋನಿಸ್ಟ್ ಇಸ್ರೇಲ್ ಜೊತೆ ದನಿಗೂಡಿಸಿದ ಭಾರತದ ಪ್ರಧಾನಮಂತ್ರಿಗಳು

ನಮ್ಮ ಪ್ರಧಾನಮಂತ್ರಿಗಳು ಇರಾನ್ ಮೇಲಿನ ದಾಳಿ ಪ್ರಾರಂಭವಾಗುವ ಕೆಲವೇ ದಿನಗಳ ಮುನ್ನ ಇಸ್ರೇಲ್‌ಗೆ ತೆರಳಿ, ಭಾರತದ ಕಾರ್ಪೋರೇಟ್ ಮಾಲೀಕರ ಹಿತಾಸಕ್ತಿಯಲ್ಲಿ ಶಸ್ತ್ರಾಸ್ತ್ರ ಒಪ್ಪಂದವೊಂದನ್ನು ಮಾಡಿಕೊಂಡು ಬಂದರು. ಇಸ್ರೇಲ್ ದೇಶವು ಪ್ಯಾಲೆಸ್ಟೈನ್‌ನ ಗಾಜ಼ಾದಲ್ಲಿ 1 ಲಕ್ಷ ಜನರನ್ನು ಕಗ್ಗೊಲೆ ಮಾಡಿದೆ. ಸಂತ್ರಸ್ತ ಕೇಂದ್ರದಲ್ಲಿ ಒಂದು ಹಿಡಿ ಅನ್ನಕ್ಕಾಗಿ ವಾಸವಾಗಿದ್ದ, ಹಸಿದ ಮಕ್ಕಳು ಹಾಗೂ ಮಹಿಳೆಯರ ಮೇಲೆ ಬಹಿರಂಗವಾಗಿ ಗುಂಡಿನ 11ನೇ ಪುಟಕ್ಕೆ






# 23, ಮಾರ್ಚ್: ಮಹಾನ್ ಕ್ರಾಂತಿಕಾರಿ ಭಗತ್‌ಸಿಂಗ್ ಹುತಾತ್ಮ ದಿನ


ಎಐಡಿಎಸ್‌ಓ–ಹಾಸನ


ಎಐಡಿಎಸ್‌ಓ–ದಾವಣಗೆರೆ


ಎಐಡಿಎಸ್‌ಓ–ಬಳ್ಳಾರಿ


ಎಐಕೆಕೆಎಂಎಸ್–ಬಳ್ಳಾರಿ


ಎಐಡಿವೈಓ–ಧಾರವಾಡ


ಎಐಡಿಎಸ್‌ಓ–ತುಮಕೂರು

**ನಮ್ಮ ಮುಂದಳಗಳಾದ ಎಐಡಿಎಸ್‌ಓ, ಎಐಡಿವೈಓ, ಎಐಕೆಕೆಎಂಎಸ್ ಈ ದಿನವನ್ನು ಬಹಳ ಶ್ರದ್ಧೆಯಿಂದ ರಾಜ್ಯಾದ್ಯಂತ ಆಚರಿಸಿದವು. ಎಐಡಿಎಸ್‌ಓ, ನಮ್ಮೂರ ಶಾಲೆ ಉಳಿಸಿ ಪ್ರತಿಜ್ಞಾ ದಿನವನ್ನಾಗಿ ಹಲವಾರು ಮೈದಾನಗಳು, ಉದ್ಯಾನವನಗಳು, ಶಾಲೆಗಳು, ಹಳ್ಳಿಗಳು ಹಾಗೂ ಕೊಳೆಗೇರಿಗಳು ಸೇರಿದಂತೆ ನೂರಾರು ಕಡೆ ಅವರ ಹುತಾತ್ಮ ದಿನದ ಕಾರ್ಯಕ್ರಮಗಳನ್ನು ಸಂಘಟಿಸಿತ್ತು.**

ಭಗತ್‌ಸಿಂಗ್ ನೇಣಿಗೇರುವ ಹಿಂದಿನ ದಿನ, ಅಂದರೆ, 1931ರ ಮಾರ್ಚ್ 22ರಂದು ಅವರ ಕೆಲ ಸಹಯೋಧರು ಅವರನ್ನು ಜೈಲಿನಿಂದ ಪರಾರಿಯಾಗಿಸಲು ಯೋಜನೆ ಸಿದ್ಧಪಡಿಸಿದ್ದರು. ಈ ಪ್ರಸ್ತಾಪವನ್ನು ಖಡಾಖಂಡಿತವಾಗಿ ತಿರಸ್ಕರಿಸಿದ ಭಗತ್ ತಮ್ಮ ಲೇಖನದಲ್ಲಿ ಹೀಗೆ ಹೇಳಿದ್ದರು: **"ಬದುಕಬೇಕೆಂಬ ಹಂಬಲ ಸ್ವಾಭಾವಿಕ. ಅದು ನನ್ನಲ್ಲೂ ಇದೆ. ನಾನು ಅದನ್ನು ಮುಚ್ಚಿಡಲು ಬಯಸುವುದಿಲ್ಲ. ಆದರೆ ಅದು ಷರತ್ತುಬದ್ಧ. ನಾನು ಬಂಧಿಯಾಗಿ ಅಥವಾ ನಿರ್ಬಂಧದ ಅಡಿಯಲ್ಲಿ ಬದುಕಬೇಕೆಂದು ಇಚ್ಛಿಸುವುದಿಲ್ಲ. ನನ್ನ ಹೆಸರು ಇಂದು 'ಭಾರತದ ಕ್ರಾಂತಿ'ಯ ಪ್ರತೀಕವಾಗಿ ಹೋಗಿದೆ. ನಾನು ನೇಣಿನಿಂದ ಇಂದು ತಪ್ಪಿಸಿಕೊಂಡರೆ, ನನ್ನ ಆ ದೌರ್ಬಲ್ಯ ಜನರ ಮುಂದೆ ಬಂದೇ ಬರುತ್ತದೆ ಮತ್ತು ಆಗ ಈ ಕ್ರಾಂತಿಕಾರಿ ಪ್ರತೀಕವು ಮಬ್ಬಾಗುತ್ತದೆ ಅಥವಾ ಅದು ಸಂಪೂರ್ಣವಾಗಿ ನಾಶವಾಗುತ್ತದೆ. ಬದಲಿಗೆ, ನಾನೇನಾದರೂ ಧೈರ್ಯದಿಂದ, ನಗುನಗುತ್ತಾ ನೇಣುಗಂಬವನ್ನು ಏರಿದರೆ, ಅದು ಇಡೀ ದೇಶದ ತಾಯಂದಿರಿಗೆ ಪ್ರೇರಣೆ ನೀಡುತ್ತದೆ ಹಾಗೂ ಅವರು ತಮ್ಮ ಮಕ್ಕಳೂ ಕೂಡ 'ಭಗತ್‌ಸಿಂಗ್'ನಂತೆ ಆಗಬೇಕು ಎಂದು ಆಶಿಸುತ್ತಾರೆ. ಆಗ ಮಾತ್ರ, ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಜೀವತ್ಯಾಗಕ್ಕೆ ಸಿದ್ಧರಾಗುವವರ ಸಂಖ್ಯೆ ಅಪಾರವಾಗಿ ಹೆಚ್ಚುತ್ತದೆ."** ತಮ್ಮ ಜೀವವನ್ನು ಉಳಿಸಿಕೊಳ್ಳುವ ಅವಕಾಶವಿದ್ದರೂ ಕೂಡ, ದೇಶದ ವಿದ್ಯಾರ್ಥಿ–ಯುವಜನರು ಸ್ವಾತಂತ್ರ್ಯ ಸಂಗ್ರಾಮದ ಬಲಿಪೀಠದಲ್ಲಿ ಅತ್ಯುನ್ನತ ಬಲಿದಾನವನ್ನು ನೀಡಲು, ತಾಯಂದಿರು ತಮ್ಮ ಮಕ್ಕಳನ್ನು ತಯಾರು ಮಾಡಲು ಹಾಗೂ ಕ್ರಾಂತಿಯ ಪ್ರತೀಕಕ್ಕೆ ಯಾವುದೇ ರೀತಿಯಲ್ಲಿ ಕೊಂಕು ಮುಟ್ಟದಂತೆ ಇರಲಿ ಎಂದು ಈ ಮಹಾನ್ ಕ್ರಾಂತಿಕಾರಿ ಜೈಲಿನಿಂದ ಪರಾರಿಯಾಗುವ ಪ್ರಸ್ತಾಪವನ್ನು ತಿರಸ್ಕರಿಸಿದರು.

ಅವರು ಜೈಲಿನಲ್ಲಿದ್ದಾಗ ಬರೆದ 'ನಾನೇಕೆ ನಾಸ್ತಿಕ' ಎಂಬ ಲೇಖನದಲ್ಲಿಯ ಒಂದು ಭಾಗ ಹೀಗಿದೆ: **"..... ದೇವರಲ್ಲಿ ನಂಬುವ ಒಬ್ಬ ಹಿಂದೂ, ಮುಂದೆ ತಾನು ಒಬ್ಬ ರಾಜನಾಗಿ ಹುಟ್ಟಬೇಕು ಎಂದು ಆಶಿಸಬಹುದು; ಒಬ್ಬ ಮುಸಲ್ಮಾನ ಅಥವಾ ಕ್ರೈಸ್ತ ತಾನು ಇಂದು ಅನುಭವಿಸುವ ಕಷ್ಟಕಾರ್ಪಣ್ಯಗಳಿಗೆ, ತಾನು ಮಾಡುವ ತ್ಯಾಗಗಳಿಗೆ ಪುರಸ್ಕಾರವಾಗಿ ತನಗೆ ಸ್ವರ್ಗದಲ್ಲಿ ಸುಖ ಸಿಗಬಹುದೆಂದು ಕನಸು ಕಾಣಬಹುದು. ನಾನು ಏನೆಂದು ಆಸೆ ಪಡಲಿ? ನನ್ನ ಕೊರಳಿನ ಸುತ್ತ ಹಗ್ಗವು ಬಿಗಿಯಾದಾಗ ಹಾಗೂ ನನ್ನ ಕಾಲ ಕೆಳಗಿನ ಹಲಗೆ ಸರಿದಾಗ ಅದು ಕೊನೆ ಎಂಬುದು ನನಗೆ ಗೊತ್ತು. ಧಾರ್ಮಿಕ ಪರಿಭಾಷೆಯಲ್ಲಿ ನಿಖರವಾಗಿ ಹೇಳುವುದಾದರೆ, 'ಅದು ಪೂರ್ತಿಯಾಗಿ ನಶಿಸಿಹೋಗುವ ಘಳಿಗೆ. ನನ್ನ ಆತ್ಮವು ಶೂನ್ಯವಾಗುತ್ತದೆ.' ಇನ್ನು ನನಗಾವುದೋ 'ಪುರಸ್ಕಾರ' ದೊರಕುತ್ತದೆ ಎಂದು ನಾನು ಧೈರ್ಯವನ್ನು ತಂದುಕೊಂಡರೆ, ಅದು ಏನಾಗಿದ್ದೀತು? ಇಂತಹ ಯಾವುದೇ ಅದ್ಭುತ ಅಂತ್ಯವಿಲ್ಲದ ಸಂಘರ್ಷಭರಿತ ನನ್ನ ಅಲ್ಪಾವಧಿಯ ಜೀವನ ಮಾತ್ರವೇ ನನಗೆ ದೊರಕುವ ಪುರಸ್ಕಾರವಾಗಿರುತ್ತದೆ. ಅಷ್ಟೇ! ಇಲ್ಲಿಯೇ ಆಗಲಿ ಅಥವಾ ಪರಲೋಕದಲ್ಲಿಯೇ ಆಗಲಿ, ನನ್ನಲ್ಲಿ ಯಾವುದೇ ಪ್ರತಿಫಲಾಪೇಕ್ಷೆಯ ಸ್ವಾರ್ಥದ ಉದ್ದೇಶವಿಲ್ಲ. ಅದರ ಬಗ್ಗೆ ತೀವ್ರ ನಿರಾಸಕ್ತಿಯಿಂದಲೇ ನಾನು ನನ್ನ ಜೀವನವನ್ನು ಸ್ವಾತಂತ್ರ್ಯಕ್ಕಾಗಿ ಮುಡಿಪಾಗಿಟ್ಟಿದ್ದೇನೆ. ನಾನು ಬೇರಾವ ರೀತಿಯಲ್ಲೂ ವರ್ತಿಸಲಾರೆ. 'ಮನುಕುಲದ ಸೇವೆಗಾಗಿ ಮತ್ತು ಎಲ್ಲಾ ನೋವು–ಸಂಕಟಗಳಿಂದ ಅದನ್ನು ಬಿಡುಗಡೆಗೊಳಿಸುವ ಈ ಮಹಾನ್ ಉದ್ದೇಶಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳುವುದನ್ನು ಬಿಟ್ಟು ಅನ್ಯ ಮಾರ್ಗವಿಲ್ಲ' ಎಂದು ಬೃಹತ್ ಸಂಖ್ಯೆಯಲ್ಲಿ ಸ್ತ್ರೀ–ಪುರುಷರು ಎಂದು ನಿರ್ಧರಿಸುತ್ತಾರೋ ಆ ದಿನ ವಿಮೋಚನೆಯ ಒಂದು ಹೊಸ ಯುಗವು ಆರಂಭವಾಗಲಿದೆ...."**

(ಪುಟ 10ರಿಂದ........)

## ಅಮೆರಿಕ-ಇಸ್ರೇಲ್‌ನಿಂದ ಇರಾನ್ ಮೇಲೆ ಯುದ್ಧ

ದಾಳಿ ಮಾಡಲು ಹಿಂದೆ ಮುಂದೆ ನೋಡದ ದೇಶ ಇಸ್ರೇಲ್. ಇಂತಹ ಪೈಶಾಚಿಕ ಕೃತ್ಯ ಎಸಗಿದ ಇಸ್ರೇಲ್‌ಅನ್ನು 'ತಂದೆಯನಾಡು'(Fatherland) ಎಂದು ಮೋದಿ ಹೊಗಳುತ್ತಾರೆ. ಭಾರತದ ಪ್ರಧಾನಿಯಿಂದಾಗಲೀ, ಸರ್ಕಾರದಿಂದಾಗಲೀ ಇರಾನ್ ಮೇಲಿನ ಯುದ್ಧದ ಕುರಿತು ಹೊರಬಂದಿರುವುದು ಕೇವಲ ಬಾಯುಪಚಾರದ ಹೇಳಿಕೆ ಮಾತ್ರವೇ. ಅದೂ, ಇರಾನ್, ಹಾರ್ಮುಜ಼್ ಸಂಧಿಯ ಮೇಲೆ ದಿಗ್ಬಂಧನ ಹಾಕಿದ್ದರಿಂದ ದೇಶಕ್ಕೆ ತೈಲದ ಅಭಾವ ಕಾಡಿದಾಗ! ಅಮೆರಿಕಾದ ಸಾಮ್ರಾಜ್ಯಶಾಹಿ ಲಾಬಿಗಳ ಪರ ಭಾರತದ ಸಾಮ್ರಾಜ್ಯಶಾಹಿಗಳು ನಿಂತಿರುವುದನ್ನು ಇದು ತೋರಿಸಿಕೊಡುತ್ತದೆ.

### ಪರಿಹಾರ: ಜಗತ್ತಿನಾದ್ಯಂತದ ಸುಸಂಘಟಿತ–ಐಕ್ಯ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ

ಸೋವಿಯತ್ ರಷ್ಯಾ, ಸಮಾಜವಾದಿ ಚೀನಾಗಳನ್ನು ಒಳಗೊಂಡ ಅಂದಿನ ಶಕ್ತಿಶಾಲಿ ಸಮಾಜವಾದಿ ಬಣವು ಜಗತ್ತಿನಾದ್ಯಂತ ಯುದ್ಧ ವಿರೋಧಿ ಶಾಂತಿ ಸ್ಥಾಪನೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿತ್ತು. ರಷ್ಯಾದಲ್ಲಿ ಮಹಾನ್ ಸ್ಟಾಲಿನ್, ಚೀನಾದಲ್ಲಿ ಮಹಾನ್ ಮಾವೋ ನಾಯಕತ್ವ ಇದ್ದ ಸಂದರ್ಭದಲ್ಲಿ, ಯಾವುದೇ ದೇಶದ ಮೇಲೆ ದಾಳಿ ಮಾಡಲು ಸಾಮ್ರಾಜ್ಯಶಾಹಿ ದೇಶಗಳಿಗೆ ಕಷ್ಟಸಾಧ್ಯವಿತ್ತು. ಸಮಾಜವಾದಿ ಬಣದ ಒಂದೇ ಹೇಳಿಕೆಗೆ ಅಮೆರಿಕಾ ಸೇರಿದಂತೆ ಇತರೆ ಸಾಮ್ರಾಜ್ಯಶಾಹಿ ದೇಶಗಳು ಬಾಲ ಮುದುರಿಕೊಂಡು ಇರಬೇಕಾಗಿತ್ತು. ಸ್ಟಾಲಿನ್, ಮಾವೋ ಮರಣಾನಂತರ, ಪರಿಷ್ಕರಣವಾದಿ ನಾಯಕತ್ವವಿದ್ದಾಗಲೂ, ಸಾಮ್ರಾಜ್ಯಶಾಹಿಗಳು ಇತರೆ ದೇಶಗಳ ಮೇಲೆ ದಾಳಿ ಮಾಡಲು ನೂರು ಬಾರಿ ಯೋಚಿಸಬೇಕಿತ್ತು. ಇಂದು ಸಮಾಜವಾದಿ ಬಣದ ಅನುಪಸ್ಥಿತಿಯಲ್ಲಿ ಅಮೆರಿಕಾ ಜಗತ್ತಿನ ಚಕ್ರಾಧಿಪತಿಯಂತೆ ದಬ್ಬಾಳಿಕೆ, ಬೆದರಿಕೆಯನ್ನೊಡ್ಡುತ್ತಾ ಆಳ್ವಿಕೆ ನಡೆಸುತ್ತಿದೆ.

ಆದರೂ, ಅಮೆರಿಕಾ ಸೇರಿದಂತೆ ವಿಶ್ವದ ಹಲವಾರು ದೇಶಗಳಲ್ಲಿ ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟಗಳು ಭುಗಿಲೇಳುತ್ತಿವೆ. ಬೇಕಾಗಿರುವುದು ಸರಿಯಾದ ನೇತೃತ್ವ ಮತ್ತು ನೈಜ ಕ್ರಾಂತಿಕಾರಿ ವೈಚಾರಿಕತೆ ಮಾತ್ರ. ಇಂತಹ ವೈಚಾರಿಕ ತಳಹದಿಯ ಮೇಲೆ ವಿಶಾಲವಾದ ಸಾಮ್ರಾಜ್ಯಶಾಹಿ ವಿರೋಧಿ ವೇದಿಕೆಯನ್ನು ಬಲಪಡಿಸಬೇಕು. ಈ ವೇದಿಕೆಯಲ್ಲಿ ನೈಜ ಕಮ್ಯುನಿಸ್ಟರು ಮುಖ್ಯ ಕೇಂದ್ರವಾಗಿದ್ದುಕೊಂಡು, ಎಲ್ಲಾ ದುಡಿಯುವ ವರ್ಗವನ್ನು, ಪ್ರಜಾತಾಂತ್ರಿಕ ಮನಸ್ಸುಳ್ಳ ದೇಶಭಕ್ತ ಜನರನ್ನು ಸಂಘಟಿಸಿ, ಬಲಿಷ್ಠ ಚಳುವಳಿಗೆ ರೂಪ ನೀಡಬೇಕು. ದೇಶ ದೇಶಗಳ ನಡುವೆ ಸಮನ್ವಯ ಸಾಧಿಸಿಕೊಂಡು, ಅಮೆರಿಕಾ ಸಾಮ್ರಾಜ್ಯಶಾಹಿಗಳ ವಿರುದ್ಧ ಸಮರಶೀಲ ಜಾಗತಿಕ ಹೋರಾಟವನ್ನು ಸಂಘಟಿಸಬೇಕು. ಜನತೆಯ ನಿರ್ಣಾಯಕ ರಾಜಕೀಯ ಶಕ್ತಿಗೆ ಜನ್ಮ ನೀಡುವ ನಿಟ್ಟಿನಲ್ಲಿ ಈ ಹೋರಾಟವನ್ನು ಮಾರ್ಪಡಿಸಬೇಕು. ಸರಿಯಾದ ಕ್ರಾಂತಿಕಾರಿ ವೈಚಾರಿಕತೆಯ ಆಧಾರದ ಮೇಲೆ ಈ ಹೋರಾಟ ಬೆಳೆದದ್ದೇ ಆದರೆ, ಅದು ಜನರ ಕೈಯಲ್ಲಿನ ಒಂದು ಅಜೇಯ ಅಸ್ತ್ರವಾಗುತ್ತದೆ. ಈ ಮೂಲಕ ಸಾಮ್ರಾಜ್ಯಶಾಹಿಗಳ ವಿರುದ್ಧ ಸೆಟೆದು ನಿಂತು, ಅವರ ಎಲ್ಲಾ ಯೋಜನೆಗಳನ್ನು ಮಣ್ಣುಮುಕ್ಕಿಸಬೇಕು. ಅಷ್ಟೇ ಅಲ್ಲದೆ, ಆಯಾ ದೇಶಗಳಲ್ಲಿಯೂ, ಸರಿಯಾದ ಕ್ರಾಂತಿಕಾರಿ ನಾಯಕತ್ವದ ಅಡಿಯಲ್ಲಿ, ಬಂಡವಾಳಶಾಹಿ ನೀತಿಗಳ ವಿರುದ್ಧ ಜನತಾಂತ್ರಿಕ ಹೋರಾಟವನ್ನು ಬೆಳೆಸಬೇಕು. ಬುಡಮಟ್ಟದಿಂದ ಜನತೆಯ ಹೋರಾಟ ಸಮಿತಿಗಳು, ಕಾರ್ಯಕರ್ತರ ಪಡೆಯನ್ನು ರಚಿಸಬೇಕು. ಜಗತ್ತಿನಾದ್ಯಂತ ನಡೆಯುವ ಇಂತಹ ಸುಸಂಘಟಿತ, ಬಲಿಷ್ಠ ಹೋರಾಟಗಳಿಂದ ಮಾತ್ರವೇ ಜಗತ್ತನ್ನು ಯುದ್ಧದ ಶಾಪದಿಂದ, ಅಣ್ವಸ್ತ್ರಗಳಿಂದ ಮುಕ್ತಗೊಳಿಸುವುದು ಸಾಧ್ಯ.




**ಕೆಎಂಇಆರ್‌ಸಿ ಹಣದಿಂದ ಹರಗಿನಡೋಣಿ ಗ್ರಾಮಕ್ಕೆ ಕುಡಿಯುವ ನೀರಿನ ಕೆರೆ ನಿರ್ಮಿಸಲು ಆಗ್ರಹಿಸಿ ಗಣಿಬಾಧಿತ ಪರಿಸರ ಮತ್ತು ಜನ ಬದುಕಿನ ಪುನಶ್ಚೇತನ ಹೋರಾಟ ಸಮಿತಿಯಿಂದ ಪ್ರತಿಭಟನೆ**

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

## 28–29, ಜನವರಿ, 2026: ಶ್ರೀಲಂಕಾ: ದಕ್ಷಿಣ ಏಷ್ಯಾ ಎಡಪಂಥೀಯ ವಿದ್ಯಾರ್ಥಿಗಳ ಯಶಸ್ವಿ ಸಮಾವೇಶ

# ಐಕ್ಯ ಹೋರಾಟದ ಸಂಕಲ್ಪ!

ಕಳೆದ ಜನವರಿ 28 ರಿಂದ 30 ರವರೆಗೆ ಶ್ರೀಲಂಕಾದ ಕೊಲೊಂಬೊದಲ್ಲಿ AIDSO ಮತ್ತು RSU ಜಂಟಿಯಾಗಿ ದಕ್ಷಿಣ ಏಷ್ಯಾ ವಿದ್ಯಾರ್ಥಿಗಳ ಸಮಾವೇಶವನ್ನು ಆಯೋಜಿಸಿದ್ದವು. ಬಾಂಗ್ಲಾದೇಶದ ಖಖಈ, ನೇಪಾಳದ ANSU(S), ANNISU(R) ಮತ್ತು SSSUN, ಪಾಕಿಸ್ತಾನದ NSF, ಶ್ರೀಲಂಕಾದ RSU ಹಾಗೂ ಭಾರತದ AIDSO ಮತ್ತು AISF ಸಂಘಟನೆಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದವು.

ಎಐಡಿಎಸ್ಓ ಪರವಾಗಿ ಕಾಮ್ರೇಡರುಗಳಾದ ಮಣಿಶಂಕರ್ ಪಟ್ನಾಯಕ್ (ಅಂತರರಾಷ್ಟ್ರೀಯ ವ್ಯವಹಾರಗಳ ಕಾರ್ಯದರ್ಶಿ), ಅಜಯ್ ಕಾಮತ್ (ಜಂಟಿ ಕಾರ್ಯದರ್ಶಿ) ಮತ್ತು ಸುಗುಬಾಲ (ಕಾರ್ಯಕಾರಿ ಸಮಿತಿ ಸದಸ್ಯರು) ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

**ಸಮಾವೇಶದ ಪ್ರಮುಖ ಗೋಷ್ಠಿಗಳು ಹೀಗಿದ್ದವು:**

* ಭಾಗವಹಿಸಿದ ಸಂಘಟನೆಗಳ ಪರಿಚಯ

* ವಿವಿಧ ದೇಶಗಳ ರಾಜಕೀಯ ಮತ್ತು ಸಂಘಟನಾತ್ಮಕ ಅನುಭವಗಳ ಕುರಿತು ವಿಚಾರ ವಿನಿಮಯ ಸಂವಾದ

* "ಸಾಮ್ರಾಜ್ಯಶಾಹಿ ಆಡಳಿತದಲ್ಲಿ ಶಿಕ್ಷಣ – ಸವಾಲುಗಳು ಮತ್ತು ಪ್ರತಿರೋಧ" ಎಂಬ ವಿಷಯದ ಕುರಿತು ಸೆಮಿನಾರ್



ಕಾ.ಅಜಯ್ ಕಾಮತ್ ಮಾತನಾಡುತ್ತಿರುವುದು

ಇದರ ಮುಂದುವರಿದ ಭಾಗವಾಗಿ, ದಕ್ಷಿಣ ಏಷ್ಯಾ ವಲಯದಾದ್ಯಂತ ಭವಿಷ್ಯದ ಐಕ್ಯ ಹೋರಾಟದ ಹಾದಿಯನ್ನು ರೂಪಿಸಲು ಒಂದು ಘೋಷಣಾ ಪತ್ರವನ್ನು ಸಿದ್ಧಪಡಿಸಲಾಯಿತು. ಇದನ್ನು 'ಕೊಲೊಂಬೊ ಘೋಷಣೆ' (Colombo Declaration) ಎಂದು ಘೋಷಿಸಲಾಯಿತು.

**ಈ ಘೋಷಣೆಯ ಪ್ರಮುಖ ಅಂಶಗಳು:**

"ಶಿಕ್ಷಣಕ್ಕಾಗಿ ನಡೆಯುವ ಹೋರಾಟವು ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ವಿರೋಧಿ ಹೋರಾಟ ಮತ್ತು ಮಾನವೀಯತೆಗಾಗಿನ ಹೋರಾಟದಿಂದ ಬೇರ್ಪಡಿಸಲಾಗದ್ದು. ಈ ಶಕ್ತಿಗಳನ್ನು ಸೋಲಿಸಲು ಮತ್ತು ಶೋಷಣೆಯಿಲ್ಲದ ಸಮಾಜಕ್ಕೆ ದಾರಿ ಮಾಡಿಕೊಡಲು ಒಗ್ಗಟ್ಟಿನ ಘೋಷಣೆಯಡಿ ಒಂದಾಗಬೇಕೆಂದು ನಾವು ದಕ್ಷಿಣ ಏಷ್ಯಾದ ವಿದ್ಯಾರ್ಥಿಗಳು ಮತ್ತು ತುಳಿತಕ್ಕೊಳಗಾದ ಜನಸಾಮಾನ್ಯರಿಗೆ ಕರೆ ನೀಡುತ್ತೇವೆ. ದಕ್ಷಿಣ ಏಷ್ಯಾದ ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳಾದ ನಾವು ಶಿಕ್ಷಣ, ಮಾನವೀಯತೆ ಮತ್ತು ಮಾನವ ನಾಗರಿಕತೆಯನ್ನು ಉಳಿಸಲು ಉಗ್ರ ಹೋರಾಟವನ್ನು ರೂಪಿಸುತ್ತೇವೆ. ಈ ಹಿನ್ನೆಲೆಯಲ್ಲಿ, ಎಡಪಂಥೀಯ ವಿದ್ಯಾರ್ಥಿ ಚಳವಳಿಗಳ ಕುರಿತು ನಮ್ಮ ಚಿಂತನೆಗಳನ್ನು ಹಂಚಿಕೊಳ್ಳಲು ಮತ್ತು ಈ ಭಾಗದ ಪ್ರಗತಿಪರ ವಿದ್ಯಾರ್ಥಿ ಚಳವಳಿಗಳಿಗೆ ಬೆಂಬಲ ನೀಡಲು ನಾವು ಬಯಸುತ್ತೇವೆ. ಈ ಕೊಲೊಂಬೊ ಘೋಷಣೆಯು ಈ ನಿಟ್ಟಿನಲ್ಲಿ ಒಂದು ಆರಂಭವಾಗಿದೆ ಮತ್ತು ಇದು ಶೀಘ್ರದಲ್ಲೇ ಈ ವಲಯದ ಎಡ ಪಂಥೀಯ ವಿದ್ಯಾರ್ಥಿ ಚಳವಳಿಗಳ ವೇದಿಕೆಯಾಗಿ ರೂಪುಗೊಳ್ಳಲಿದೆ ಎಂಬ ಭರವಸೆ ನಮಗಿದೆ. ಈ ವೇದಿಕೆಯು ಈ ಭಾಗದ ನೈಜ ವಿದ್ಯಾರ್ಥಿ ಹೋರಾಟಗಳನ್ನು ಬೆಳೆಸುವ ಅಸ್ತ್ರವಾಗಲಿದೆ ಎಂದು ನಾವು ದೃಢವಾಗಿ ನಂಬುತ್ತೇವೆ."

**ವಿದ್ಯಾರ್ಥಿ ಒಗ್ಗಟ್ಟು ಚಿರಾಯುವಾಗಲಿ!**

**ಸಾಮ್ರಾಜ್ಯವಾದ ಅಳಿಯಲಿ! ಸಮಾಜವಾದ ಚಿರಾಯುವಾಗಲಿ!**

## ಮಾರ್ಚ್ 8, ಎಐಎಂಎಸ್ಎಸ್: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಉದ್ಘೋಷ

# ಮಹಿಳೆಯರು–ಮಕ್ಕಳ ಮೇಲಿನ ಪಾತಕಗಳಿಗೆ ಕೊನೆ ಹಾಕಿ!

ಪ್ರಭಾತ್ ಫೇರಿ, ಸಮಾವೇಶಗಳು, ಪ್ರತಿಭಟನಾ ರ್‍ಯಾಲಿಗಳು, ಚರ್ಚೆ–ಸಂವಾದಗಳು, ಫೋಟೋ–ಸೂಕ್ತಿ ಪ್ರದರ್ಶನಗಳು, ಹೀಗೆ ಎಐಎಂಎಸ್ಎಸ್ ಮಾರ್ಚ್ 8 ಅನ್ನು ಅನೇಕ ಜಿಲ್ಲೆಗಳಲ್ಲಿ ಬಹಳ ಅರ್ಥಪೂರ್ಣವಾಗಿ ಸಂಘಟಿಸಿತ್ತು.


ಬೆಂಗಳೂರು



ಕಲಬುರಗಿ


ಮೈಸೂರು



ತುಮಕೂರು

Published by: K.Uma on behalf of SOCIALIST UNITY CENTRE OF INDIA (COMMUNIST), Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed at : MNS Printers Private Limited, 345/4, Bhattarahalli, Old Madras Road, Bengaluru, Karnataka - 560 049. Website: www.sucic.org & www.sucic-karnataka.org EDITOR: K.Uma